
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ


ಕನ್ನಡ ವಾರಪತ್ರಿಕೆ



ಇಫ್ತಾರ್ ಕೂಟವೂ ಪೇಜಾವರ ಸ್ವಾಮಿಯೂ ರಾಮಮಂದಿರವೂ

ಸಂಪುಟ 11 | ಸಂಚಿಕೆ 28 | ಪುಟ 16 | ಜುಲೈ 3–9 2017 | ರೂ. 10/–

web: www.janashakthi.co.in | e-mail : js_weekly@yahoo.com



ಹಾಸ್ಟೆಲ್ ನೌಕರರ ಯಶಸ್ವಿ ಧರಣಿ






GST : ರಾಜ್ಯಗಳಿಗೆ ಭಿಕ್ಷಾಪಾತ್ರೆ

ಪತ್ರಕರ್ತರಿಗೆ ಶಿಕ್ಷೆ ಪ್ರಜಾಪ್ರಭುತ್ವ–ವಿರೋಧಿ

ಜನಶಕ್ತಿ ಉತ್ಸವ 2017

ಜುನೈದ್ ಕೊಲೆ: ಮೌನ ಮುರಿದಿದೆ



ದಿಲ್ಲಿಯ ಬಳಿಯೇ ಮತ್ತೊಂದು ಕೋಮುವಾದ-ಪ್ರೇರಿತ ಮಾರಕ ಹಲ್ಲೆ: ಮತ್ತೆ ಪ್ರಧಾನಿ, ಗೃಹಮಂತ್ರಿಗಳ ನಾಚಿಕೆಗೆಟ್ಟ ಗಾಢ ಮೌನ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಜೂನ್ 22ರ ಸಂಜೆ ಮತ್ತೊಂದು ಮುಸ್ಲಿಂ ಕುಟುಂಬದ ಮೇಲೆ ಮಾರಕ ಹಲ್ಲೆಯ ಘಟನೆ ವರದಿಯಾಗಿದೆ. ದಿಲ್ಲಿಯ ಹೊರವಲಯದಲ್ಲಿ ಲೋಕಲ್ ರೈಲಿನಲ್ಲಿನಲ್ಲಿ ನಡೆದ ಈ ಕೋಮುವಾದಿ ಹಲ್ಲೆಯಲ್ಲಿ 15 ವರ್ಷದ ಬಾಲಕ ಪ್ರಾಣ ಕಳಕೊಂಡಿದ್ದಾನೆ. ಅವನ ಇಬ್ಬರು ಸೋದರರು ತೀವ್ರವಾಗಿ ಗಾಯಗೊಂಡಿದ್ದಾರೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ಮೂವರು ಸೋದರರು ಸಂಜೆ 5 ಗಂಟೆಗೆ ದಿಲ್ಲಿಯಲ್ಲಿ ಪಕ್ಕದ ಹರ್ಯಾಣದಲ್ಲಿರುವ ತಮ್ಮ ಊರು ಬಲಬ್ಬುರ್‌ಗೆ ಹೋಗುವ ರೈಲನ್ನು ಹತ್ತಿದರು. ಜುನೈದ್ ಮತ್ತು ಆತನ ತಮ್ಮ ಸೂರತ್‌ನಲ್ಲಿ ಒಂದು ಮದರಸಾದಲ್ಲಿ ಓದುತ್ತಿದ್ದು ಈದ್‌ಗೆಂದು ಊರಿಗೆ ಬಂದಿದ್ದರು. ತುಘಲಕಾಬಾದ್ ನಿಲ್ದಾಣದಲ್ಲಿ ರೈಲು ಹತ್ತಿದ ಕೆಲವು ಮಂದಿ ಅವರನ್ನು ಹೊಲಸು ಭಾಷೆಯಲ್ಲಿ ಬಯ್ಯಲಾರಂಭಿಸಿದರು. ಅವರು ಅದನ್ನು ಪ್ರತಿಭಟಿಸಿದಾಗ ಕೋಮುವಾದಿ ಘೋಷಣೆಗಳನ್ನು ಹಾಕುತ್ತ ಅವಮಾನುಷವಾಗಿ ದಾಳಿಗಿಳಿದರು. ಜುನೈದನನ್ನು ರೈಲಿನಲ್ಲೇ ಬಡಿದು ಸಾಯಿಸಲಾಯಿತು. ಅಣ್ಣ ಶಕೀ???ನ ಗಡ್ಡ ಹಿಡಿದು ಎಳೆದಾಡಿದರು, ಮತ್ತು ಮೂರು ಕಡೆಗಳಲ್ಲಿ ದೊಡ್ಡ ಚಾಕುಗಳಿಂದ ತಿವಿದರು. ಮತ್ತೊಬಬ್ ಸೋದರ ಹಾಶಿಂನನ್ನೂ ಬಡಿದರು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಬಲ್ಬಪುರ್‌ನಲ್ಲಿ ಇಳಿಯಲೂ ಬಿಡಲಿಲ್ಲ. ಅವರನ್ನು ರೈಲಿನಿಂದ ಹೊರೆಗೆಸೆಯಲಾಯಿತು. ಸ್ವಲ್ಪ ಸಮಯದ ನಂತರ ಅವರನ್ನು ಆ ಸ್ಥಿತಿಯಲ್ಲಿ ಕಂಡ ಕೆಲವರು ಆಸ್ಪತ್ರೆಗೆ ಒಯ್ದರು.

ಈ ಕೋಮುವಾದದಿಂದ ಪ್ರೇರಿತವಾದ ಅಪರಾಧ ಬಿಜೆಪಿ–ಆರೆಸ್ಸೆಸ್ ಆಳ್ವಿಕೆ ಕೋಮುವಾದಿ ಜನಜಂಗುಳಿ ಹಿಂಸಾಕೃತ್ಯಗಳಿಗೆ ಇಳಿಯುವಂತೆ ಮಾಡುತ್ತಿದೆ ಎಂಬುದನ್ನು ತೋರಿಸುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಮೊದಲೂ ರೈಲುಗಳಲ್ಲಿ ಮುಸ್ಲಿಮರ ಮೇಲೆ ಇಂತಹ ಹಿಂಸಾಚಾರಗಳು ನಡೆದಿವೆ, ಆದರೆ ಸರಕಾರ ದೇಶದ ಕಾನೂನನ್ನು ಎತ್ತಿ ಹಿಡಿಯಲು ಮುಂದಾಗಲಿಲ್ಲ, ಆ ಮೂಲಕ ನೇರವಾಗಿಯೇ ಇಂತಹ ಕೋಮುವಾದಿ ದ್ವೇಷಪೂರಿತ ಅಪರಾಧಗಳಿಗೆ ಉತ್ತೇಜನೆ ನೀಡುತ್ತಿದೆ ಎಂದು ಅದು ಹೇಳಿದೆ.



ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ಮಹಮ್ಮದ್ ಸಲೀಂ ಹಾಗೂ ದಿಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಆಶಾ ಶರ್ಮ ಮರುದಿನ ಬೆಳಿಗ್ಯೆ ಆಸ್ಪತ್ರೆಯಲ್ಲಿ ಈ ಯುವಕರ ಕುಟುಂಬದವರನ್ನು ಭೇಟಿಯಾದರು. ಆದರೆ ಅದುವರೆಗೂ ಸರಕಾರ, ನಿರ್ದಿಷ್ಟವಾಗಿ ಪ್ರಧಾನ ಮಂತ್ರಿಗಳು ಮತ್ತು ಗೃಹಮಂತ್ರಿಗಳು ಕಿವಿ ಕಿವುಡಾಗುಂತಹ ಮೌನ ಧರಿಸಿರುವುದು, ಈ ಕುಟುಂಬವನ್ನು ಭೇಟಿಯಾಗಲು ಯಾವುದೇ ಅಧಿಕಾರಿಯನ್ನೂ ಕಳಿಸದಿರುವುದು ನಾಚಿಕೆಗೇಡಿನ ಮತ್ತು ಖಂಡನಾರ್ಹ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು, ಈ ಕುಟುಂಬಕ್ಕೆ ಸಾಕಷ್ಟು ಪರಿಹಾರವನ್ನು ಒದಗಿಸಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಇಂತಹ ಕೋಮುವಾದ–ಪ್ರೇರಿತ ಕೃತ್ಯಗಳನ್ನು, ಅದರಲ್ಲೂ ಸಾರ್ವಜನಿಕ ಸ್ಥಳಗಳಲ್ಲಿ ಎಸಗುವುದರ ವಿರುದ್ಧ ಬಲವಾದ ಪ್ರತಿಭಟನೆ ನಡೆಸಬೇಕು ಎಂದು ಕರೆ ನೀಡಿದೆ.

ಪ್ರಧಾನಿಗಳ 5ನೇ ಅಮೆರಿಕಾ ಭೇಟಿ: ಭಾರತಕ್ಕೆ ದಕ್ಕಿರುವುದು ಏನೂ ಇಲ್ಲ, ಕಿರಿಯ ಅಡಿಯಾಳು ಮಿತ್ರ ಎಂಬುದೇ ಗಟ್ಟಿ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಈ ಮೂರು ವರ್ಷಗಳಲ್ಲಿ ಪ್ರಧಾನ ಮಂತ್ರಿ ಐದನೇ ಬಾರಿ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಭೇಟಿ ನಿಡಿ ಬಂದಿದ್ದಾರೆ. ಆದರೆ ಇದರ ಫಲಿತಾಂಶವಾಗಿ ಭಾರತಕ್ಕೆ ಏನೂ ಸಿಕ್ಕಿಲ್ಲ, ಅಥವ ಅದರ ತಕ್ಷಣದ ಆತಂಕಗಳಿಗೆ ಅಮೆರಿಕಾದ ಗಮನವೂ ಸಿಕ್ಕಿಲ್ಲ. ಅಧ್ಯಕ್ಷ ಟ್ರಂಪ್ರೊಂದಿಗೆ ನೀಡಿರುವ ಜಂಟಿ ಹೇಳಿಕೆ ಭಾರತವು ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಡಿಯಾಳು ಮಿತ್ರನಷ್ಟೇ ಎಂಬುದನ್ನು ಮತ್ತೊಮ್ಮೆ ದೃಢಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್ಬ್ಯುರೊ ಹೇಳಿದೆ.

ಲಕ್ಷಾಂತರ ಭಾರತೀಯ ಯುವಜನರಿಗೆ ಮತ್ತು ಭಾರತದ ಐಟಿ ಉದ್ಯಮಕ್ಕೆ ನಿರ್ಣಾಯಕವಾಗಿರುವ ಹೆಚ್1ಬಿ ವೀಸಾಗಳ ಸ್ಥಿತಿ–ಗತಿ, ಅಮೆರಿಕಾದಲ್ಲಿರುವ ಭಾರತೀಯರ ಮೇಲೆ ಜನಾಂಗದ್ವೇಷಿ ಹತ್ಯೆಗಳು, ಪ್ಯಾರಿಸ್ ಹವಾಮಾನ ಒಪ್ಪಂದ ಬದ್ಧತೆಗಳಿಂದ ಹಿಂದೆ ಸರಿದಿರುವುದು ಇತ್ಯಾಧಿಗಳ ಪ್ರಸ್ತಾಪವೇ ಈ ಹೇಳಿಕೆಯಲ್ಲಿ ಕಾಣುತ್ತಿಲ್ಲ. ಅದರ ಬದಲು ಪ್ರಧಾನ ಮಂತ್ರಿ ಮೋದಿಯವರು ಭಾರತ ತನ್ನ ಆರ್ಥಿಕ ವ್ಯವಸ್ಥೆಯನ್ನು ಇನ್ನೂ ದೊಡ್ಡದಾಗಿ ತೆರೆದು ಕೊಡುವುದಾಗಿ ವಚನ ನೀಡಿ ಬಂದಿದ್ದಾರೆ. ಇದನ್ನು ಅಮೆರಿಕಾದ ರಕ್ಷಣಾ ಸಲಕರಣೆಗಳ ಖರೀದಿಯನ್ನು ತೀವ್ರವಾಗಿ ಹೆಚ್ಚಿಸಿ, ಅದರಲ್ಲೂ ನಿರ್ದಿಷ್ಟವಾಗಿ, ಎರಡು ಬಿಲಿಯ ಡಾಲರುಗಳಷ್ಟು ಮೌಲ್ಯದ ವಾಯು ಡ್ರೋನ್‌ಗಳನ್ನು ಖರೀದಿಸುತ್ತಲೇ ಮಾಡಲಾಗುತ್ತದೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ.

ವಿದೇಶಾಂಗ ಧೋರಣೆಯ ವಿಷಯಗಳಲ್ಲಿ, ಪ್ರಧಾನಿ ಮೋದಿ ಭಾರತದ ಹಿಂದಿನ ಹಲವು ವಚನಗಳನ್ನು ಮುರಿದಿದ್ದಾರೆ. ಮೊತ್ತಮೊದಲ ಬಾರಿಗೆ ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣತಂತ್ರ, ಅಂದರೆ ಉತ್ತರ ಕೊರಿಯಾವನ್ನು ಖಂಡಿಸುವಲ್ಲಿ ಭಾರತ ಅಮೆರಿಕಾದ ಜತೆಗೂಡಿದೆ ಮತ್ತು ದಕ್ಷಿಣ ಚೀನಾ ಸಾಗರದ ವಿವಾದದಲ್ಲಿ ಅಮೆರಿಕಾದೊಂದಿಗೆ ಕೈಜೋಡಿಸಿದೆ. ಇನ್ನೂ ಕೆಡುಕಿನ ಸಂಗತಿಯೆಂದ–ರೆ ಭಯೋತ್ಪಾದನೆಯನ್ನು ಇಸ್ಲಾಮ್ನೊಂದಿಗೆ ಸಮೀಕರಿಸುವ ಅಮೆರಿಕಾದ ನಿಲುವಿಗೆ ಭಾರತದ ಬೆಂಬಲವನ್ನು ವ್ಯಕ್ತಪಡಿಸಲಾಗಿದೆ. ಇದು ಈ ಸರಕಾರ ಕೂಡ ಪುನರುಚ್ಚರಿಸಿರುವ ಭಾರತದ ದೀರ್ಘಕಾಲೀನ ನಿಲುವಿನ ನಿರಾಕರಣೆಯಾಗಿದೆ, ಭಯೋತ್ಪಾದನೆಗೆ ಧರ್ಮ ಎಂಬುದಿಲ್ಲ ಎಂದು ಈ ಸರಕಾರದ ವಕ್ತಾರರುಗಳೇ ಹಲವು ಸಂದರ್ಭಗಳಲ್ಲಿ ಹೇಳಿದ್ದರೆಂಬ ಎಂಬ ಸಂಗತಿಯನ್ನು ಸಿಪಿಐ(ಎಂ) ನೆನಪಿಸಿದೆ.

ಒಟ್ಟಾರೆಯಾಗಿ, ಪ್ರಧಾನಿ ಮೋದಿಯವರ ಅಮೆರಿಕಾ ಭೇಟಿ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಭಾರತ ಒಂದು ಅಡಿಯಾಳು ಕಿರಿಯ ಮಿತ್ರ ಎಂಬ ಸ್ಥಾನವನ್ನು ಗಟ್ಟಿಗೊಳಿಸಿದೆ ಎಂದು ಸಿಪಿಐ(ಎಂ) ಪೊಲಿಟ್ಬ್ಯುರೊ ಟೀಕಿಸಿದೆ.

ಸಂಘಪರಿವಾರದ ವಿಷಪ್ರಚಾರ ಭೀತಿಯ ಸನ್ನಿವೇಶ ಸೃಷ್ಟಿಸಿದೆ

–ಸಂತ್ರಸ್ತ ಕುಟುಂಬದ ಮನೆಗೆ ಭೇಟಿ ನೀಡಿದ ಸಿಪಿಐ(ಎಂ) ನಿಯೋಗ

ಜೂನ್ 24ರಂದು ಜುನೈದ್ ಶಕೀಲ್ ಮತ್ತು ಹಾಶಿಂ ಸೋದರರ ಮನೆಗೆ ಹೋದ ಸಿಪಿಐ(ಎಂ) ಮುಖಂಡರ ನಿಯೀಗವೊಂದು ಅವರ ಕುಟುಂಬದವರನ್ನು ಭೇಟಿ ಮಾಡಿತು. ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ಮಹಮ್ಮದ್ ಸಲೀಂ(ಸಂಸದ್ ಸದಸ್ಯರು), ಹಯಾಣ ರಾಜ್ಯ ಕಾರ್ಯದರ್ಶಿ ಸುರಿಂದರ್ ಮಲಿಕ್, ದಿಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಆಶಾ ಶರ್ಮ, ಸತ್‌ಬೀರ್ ಸಿಂಗ್ ಮತ್ತಿತರ ಸ್ಥಳೀಯ ಮುಖಂಡರಿದ್ದ ನಿಯೋಗ ಹರ್ಯಾಣದಲ್ಲಿರುವ ಅವರ ಹಳ್ಳಿ ಖಂಡವ್ಲಿಯಲ್ಲಿ ದಿಲ್ಲಿ–ಮಥುರ ಲೋಕಲ್ ಟ್ರೈನಿನಲ್ಲಿ ಪ್ರಯಾಣಿಸುತ್ತಿದ್ದ ಈ ಸೋದರರ ಶೋಕಗ್ರಸ್ತ ತಂದೆ ಜಲಾಲುದ್ದೀನ್, ತಾಯಿ ಸಾಯಿರಾ ಮತ್ತಿತರ ಕುಟುಂಬದ ಸದಸ್ಯರನ್ನು ಸಂತೈಸಿದರು. ಕೋಮುವಾದ ಪ್ರೇರಿತ ಕ್ರಿಮಿನಲ್‌ಗಳು ನಡೆಸಿರುವ ಈ ಹೀನ ಅಪರಾಧದ ವಿರುದ್ಧ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸಿದರು.

ಬಹಳಷ್ಟು ಕಷ್ಟ–ತ್ಯಾಗಗಳಿಂದ ಈ ಮೂವರು ಮಕ್ಕಳನ್ನು ಬೆಳೆಸಿದ್ದೆ, ಶಿಕ್ಷಣ ಕೊಡಿಸಿದ್ದೆ ಎಂದ ಸಾಯಿರಾ ಜುನೈದ್ ಈಗಷ್ಟೇ ಸೂರತ್‌ನ ಮದರಸಾದಲ್ಲಿ ತನ್ನ ಶಿಕ್ಷಣವನ್ನು ಮುಗಿಸಿದ್ದ ಎಂದರು. ಅದರ ಸಂತೋಷದ ಆಚರಣೆಗೆಂದು ಈ ಮಕ್ಕಳಿಗೆ 1500ರೂ. ಹೊಸ ಬಟ್ಟೆಗಳನ್ನು ಖರೀದಿಸಲು ಕೊಟ್ಟಿದ್ದರಂತೆ. ಜುನೈದ್ ರೋಜಾದಲ್ಲಿದ್ದ, ಆದ್ದರಿಂದ ಆ ದಿನ ಒಂದು ಹನಿ ನೀರನ್ನೂ ಕುಡಿದಿರಲಿಲ್ಲ ಎಂದು ಹೇಳುತ್ತ ಆಕೆ ಅತ್ತರು.

ಪುಟ 14 ನೋಡಿ

‘ಹಿಂಸಾಚಾರಿ ಜಂಗುಳಿಗೆ ಅಲ್ಪಸಂಖ್ಯಾತರನ್ನು ಬಡಿದು ಸಾಯಿಸುವ ಹೊರಗುತ್ತಿಗೆ?’ –ಶಬ್ನಮ್ ಹಾಶ್ಮಿಯವರಿಂದ ರಾಷ್ಟ್ರೀಯ ಅಲ್ಪಸಂಖ್ಯಾತ ಹಕ್ಕು ಪ್ರಶಸ್ತಿ ವಾಪಸಾತಿ

ದಿಲ್ಲಿಯ ಹೆಸರಾಂತ ಸಾಮಾಜಿಕ ಕಾರ್ಯಕರ್ತೆ ಶಬ್ನಮ್ ಹಾಶ್ಮಿ "ದೇಶದಲ್ಲಿ ಈಗ ಹಲ್ಲೆಕೋರ ಜನಜಂಗುಳಿ ಬಡಿದು ಸಾಯಿಸಿರುವ ಅಸಂಖ್ಯ ಮುಗ್ಧ ಜೀವಗಳ ನೆನಪಿನಲ್ಲಿ" ತನಗೆ ನೀಡಿರುವ ಪ್ರಶಸ್ತಿಯನ್ನು ಹಿಂದಿರುಗಿಸುತ್ತಿರುವುದಾಗಿ ಹೇಳಿದ್ದಾರೆ. 2008ರಲ್ಲಿ ಅವರಿಗೆ ರಾಷ್ಟ್ರೀಯ ಅಲ್ಪಸಂಖ್ಯಾತ ಹಕ್ಕು ಪ್ರಶಸ್ತಿಯನ್ನು ನೀಡಲಾಗಿತ್ತು.

ಈ ಪ್ರಶಸ್ತಿಯನ್ನು ನೀಡುತ್ತಿರುವ ರಾಷ್ಟ್ರೀಯ ಅಲ್ಪಸಂಖ್ಯಾತರ ಆಂಯೋಗ ಈಗ ಎಲ್ಲ ವಿಶ್ವಾಸಾರ್ಹತೆಯನ್ನು ಕಳಕೊಂಡಿದೆ ಎಂದು ಅವರು ತನ್ನ ಪ್ರಶಸ್ತಿಯನ್ನು ಹಿಂದಿರುಗಿಸುತ್ತ ಆಯೋಗದ ಎಲ್ಲ ಸದಸ್ಯರನ್ನು ಉದ್ದೇಶಿಸಿ ಜೂನ್ 27ರಂದು ಬರೆದಿರುವ ಪತ್ರದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರ ಮೇಲೆ ಎಡಬಿಡದೆ ಹಲ್ಲೆಗಳು, ಅವರ ಹತ್ಯೆಗಳು ನಡೆಯುತ್ತಿರುವುದನ್ನು ಮತ್ತು ಈ ಕುರಿತು ಸರಕಾರದ ಸಂಪೂರ್ಣ ನಿಷ್ಕ್ರಿಯತೆ, ಉಪೇಕ್ಷೆ ಮತ್ತು ಈ ಕೃತ್ಯಗಳನ್ನು ನಡೆಸುತ್ತಿರುವ ಹಿಂಸಾಚಾರಿ ಗ್ಯಾಂಗುಗಳಿಗೆ ಪರೋಕ್ಷ ಬೆಂಬಲ ನೀಡುತ್ತಿರುವುದನ್ನು ಪ್ರತಿಭಟಿಸಿ ತಾನು ಈ ಪ್ರಶಸ್ತಿಯನ್ನು ಹಿಂದಿರುಗಿಸುತ್ತಿರುವುದಾಗಿ ಹೇಳಿದ್ದಾರೆ.

ದೇಶದಲ್ಲಿ ಮುಸ್ಲಿಮರನ್ನು ಜನಜಂಗುಳಿ ಬಡಿದು ಸಾಯಿಸುವುದು, ಇಸ್ಲಾಮ್ ಬಗ್ಗೆ ಭೀತಿ ಹರಡುವುದು ಸಾಮಾನ್ಯ ಸಂಗತಿಯಾಗುತ್ತಿದೆ. ಮುಸ್ಲಿಮರು ಕೊಳಕು ಮಂದಿ, ಬಹಳ ಮಕ್ಕಳನ್ನು ಹೆರುತ್ತಾರೆ, ಅಶಿಕ್ಷಿತರು ಎಂದೆಲ್ಲ ಜರೆಯುತ್ತಿದ್ದದ್ದು ಈಗ ಶೀಖರಕ್ಕೇರಿದೆ–ಎಲ್ಲ ಸಾರ್ವಜನಿಕ ಸ್ಥಳಗಳು ಮತ್ತು ಜೀವನಾಧಾರಗಳು ಮುಸ್ಲಿಂ ಸಮುದಾಯಕ್ಕೆ ಅಸುರಕ್ಷಿತಗೊಳ್ಳುತ್ತಿವೆ ಎಂದು ಶಬ್ನಮ್ ಹಾಶ್ಮಿ ತನ್ನ ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಧರ್ಮ ಜಾಗರಣ ಸಮಿತಿಯ ಮುಖ್ಯಸ್ಥರು ಮುಸ್ಲಿಮರಿಗೆ, ಕ್ರೈಸ್ತರಿಗೆ ಇಲ್ಲಿರುವ ಹಕ್ಕಿಲ್ಲ ಎನ್ನುತ್ತಾರೆ, ಹಿಂದೂ ಮಹಾಸಭಾ ‘ಇಸ್ಲಾಮ್–ಮುಕ್ತ ಭಾರತ’ದ ಆಂದೋಲನ ಆರಂಭಿಸುವುದಾಗಿ ಹೇಳುತ್ತದೆ, ಒಬ್ಬ ಸಾಧ್ವಿ ಎನಿಸಿಕೊಂಡವಳು ತುರ್ತುಪರಿಸ್ತಿತಿ ಘೋಷಿಸಿ ಮುಸ್ಲಿಮರು ಮತ್ತು ಕ್ರೈಸ್ತರ ಸಂತಾನಶಕ್ತಿ ಹರಣ ಮಾಡಿ ಎನ್ನುತ್ತಾಲೆ, ಇನ್ನೊಬ್ಬಳು ಗೋಮಾಂಸ ತಿನ್ನುವವರನ್ನು ನೇಣಿಗೇರಿಸಿ, ಎಲ್ಲ ಜಾತ್ಯತೀತರ ಮೇಲೆ ದಾಳಿ ನಡೆಸಿ ಎನ್ನುತ್ತಾಳೆ, ಒಂದು ಘಟನೆಯಲ್ಲಿ ಹೋದ ಜೀವದ ಬಗ್ಗೆ ಕಣ್ಣೊರೆಸುಕೊಳ್ಳುತ್ತಿರುವಷ್ಟರಲ್ಲೇ ಇನ್ನೊಂದು ಇಂತಹ ಘಟನೆ ನಡೆಯುತ್ತಿದೆ, ಆದರೆ ಈ ಸರಕಾರ ಕಿವಿ, ಬಾಯಿ ಮುಚ್ಚಿಕೊಂಡಿದೆಯಷ್ಟೇ ಅಲ್ಲ, ಜನಜಂಗುಳಿ ಬಡಿದು ಸಾಯಿಸುವುದು ಅದಕ್ಕೆ ಅಲ್ಪಸಂಖ್ಯಾತರ ಮನಗಳಲ್ಲಿ ಭೀತಿ ಹುಟ್ಟಿಸುವ ಪ್ರಭುತ್ವ ಹಿಂಸಾಚಾರದ ಹೊರಗುತ್ತಿಗೆ ನೀಡುವ ದಾರಿಯಾಗಿ ಬಿಟ್ಟಿದೆ ಎಂದು ಅವರು ತಮ್ಮ ಪತ್ರದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಇಂತಹ ಸನ್ನಿವೇಶದಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಅಲ್ಪಸಂಖ್ಯಾತ ಸಮುದಾಯಗಳ ಘನತೆ, ಸುರಕ್ಷಿತತೆ ಮತ್ತು ಸಂವಿಧಾನಿಕ ಹಕ್ಕುಗಳನ್ನು ಕಾಪಾಡುವಲ್ಲಿ ಒಂದು ಸಕ್ರಿಯ ಪಾತ್ರವನ್ನು ವಹಿಸಬೇಕಾಗಿತ್ತು. ಆದರೆ ಅದರಲ್ಲಿ ವಿಫಲವಾಗಿದೆ ಎಂದು ಶಬ್ನಮ್ ಹಾಶ್ಮಿ ಆಪಾದಿಸಿದ್ದಾರೆ.

ಸಂಪಾದಕೀಯ

ಪತ್ರಕರ್ತರಿಗೆ ಜೈಲು ಶಿಕ್ಷೆ : ಕಾನೂನು–ಬಾಹಿರ ಮತ್ತು ಪ್ರಜಾಸತ್ತಾ–ವಿರೋಧಿ ಕ್ರಮ

'ಹಾಯ್ ಬೆಂಗಳೂರು' ವಾರಪತ್ರಿಕೆಯ ಸಂಪಾದಕ ರವಿ ಬೆಳಗೆರೆ ಮತ್ತು 'ಯಲಹಂಕ ವಾಯ್ಸ್' ಸಂಪಾದಕ ಅನಿಲ್ ರಾಜ್ ಅವರಿಗೆ ತಲಾ ಒಂದು ವರ್ಷ ಜೈಲು ಶಿಕ್ಷೆ, ರೂ. 10 ಸಾವಿರ ದಂಡ ವಿಧಿಸಲು ವಿಧಾನಸಭೆಯ ಹಕ್ಕು ಬಾಧ್ಯತೆ ಸಮಿತಿ ಶಿಫಾರಸು ಮಾಡಿದೆ. ತಮ್ಮ ವಿರುದ್ಧ ಈ ಇಬ್ಬರೂ ಪತ್ರಕರ್ತರು ಅವಹೇಳನಕಾರಿ ಲೇಖನ ಪ್ರಕಟಿಸಿದ್ದಾರೆ ಎಂದು ಇಬ್ಬರು ಶಾಸಕರು ಸದನಕ್ಕೆ ದೂರು ಸಲ್ಲಿಸಿದ್ದರು. ಅದಕ್ಕೆ ವಿಧಾನಸಭೆ ಒಪ್ಪಿಗೆ ನೀಡಿದೆ. ಸ್ಪೀಕರ್ ಕೋಳಿವಾಡ ಅವರ ಈ ನಿರ್ಣಯ ಕಾನೂನು–ಬದ್ಧ ಅಲ್ಲ ಮತ್ತು ಪ್ರಜಾಸತ್ತಾ–ವಿರೋಧಿ ಕ್ರಮ ಕೂಡಾ.

ಸದನದ ಹೊರಗಿನ ನಡವಳಿಕೆ ಬಗ್ಗೆ ಬರೆಯುವುದನ್ನೂ ಸದನದ ಹಕ್ಕುಚ್ಯುತಿ ಎಂದು ಪರಿಗಣಿಸಲು ಬರುವುದಿಲ್ಲ. ಶಾಸಕರ ಬಗ್ಗೆ ಅವಹೇಳನಕಾರಿ ಮತ್ತು ಸುಳ್ಳು ವರದಿ ಪ್ರಕಟಿಸಿದ್ದರೆ, ಅದು ಸದನದ ಅಥವಾ ಶಾಸಕರ ಹಕ್ಕುಚ್ಯುತಿ ಆಗುವುದಿಲ್ಲ. ಮಾತ್ರವಲ್ಲ, ಹಕ್ಕುಚ್ಯುತಿ ಸಮಿತಿಗಾಗಲಿ ಸದನಕ್ಕಾಗಲಿ ಅಥವಾ ಶಾಸಕಾಂಗದ ಯಾವುದೇ ಭಾಗಕ್ಕಾಗಲಿ ಶಿಕ್ಷೆ ಕೊಡುವ ಅಧಿಕಾರವಿಲ್ಲ. ಈ ಇಬ್ಬರು ಪತ್ರಕರ್ತರು ತಪ್ಪಿತಸ್ಥರು ಎಂದು ನಿರ್ಣಯಿಸುವ ಮೊದಲು ಸಮಿತಿಯಾಗಲಿ ಸದನವಾಗಲಿ 'ಆರೋಪ ಎದುರಿಸುತ್ತಿರುವ ವ್ಯಕ್ತಿಗಳಿಗೆ' ವಿವರಣೆ ನೀಡಲು ಅವಕಾಶವನ್ನು ಕೊಡಬೇಕಾಗಿತ್ತು. ಸಹಜ ನ್ಯಾಯ ತತ್ವವನ್ನು ಪಾಲಿಸಬೇಕಾಗಿತ್ತು. ಸಮಿತಿಯ ಮುಂದೆ ಹಾಜರಾಗಲಿಲ್ಲ ಎಂಬುದರ ಮೇಲೆನೇ ಇಷ್ಟು ಕಟು ನಿರ್ಣಯಕ್ಕೆ ಬರುವುದು ಸರಿಯಲ್ಲ. ಅಪರಿಮಿತ ಅಧಿಕಾರ ಇರುವ ಸದನ ಅದನ್ನು ಬಳಸುವಾಗ ಸಂಯಮ ತೋರಿಸಬೇಕಾಗಿತ್ತು. ಆದರೆ ಅದ್ಯಾವುದೂ ನಡೆಯಲೇ ಇಲ್ಲ.. ಕಾನೂನು ಪರಿಣತರು ಮತ್ತು ಕೆಲವು ಮಾಜಿ ಸ್ಪೀಕರ್ ಗಳು ಕೂಡಾ ಇದು ಕಾನೂನುಬದ್ಧ ಕ್ರಮವಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

ಶಾಸಕರ ಸಾರ್ವಜನಿಕ ಬದುಕು, ಭ್ರಷ್ಟಾಚಾರ, ಮತ್ತಿತರ ನಡವಳಿಕೆಗಳ ಬಗ್ಗೆ ತನಿಖೆ ಮಾಡಿ ಆ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಹಕ್ಕು ಪತ್ರಿಕೆಗಳಿಗೆ ಇದೆ. ಅದು ಪತ್ರಿಕೆಗಳ ಕರ್ತವ್ಯ ಕೂಡಾ. ಆದರೆ ಈ ಪತ್ರಿಕೆಗಳು ಶಾಸಕರ ವಿರುದ್ಧ ಉದ್ದೇಶಪೂರ್ವಕವಾಗಿ ಯಾವುದೇ ಪುರಾವೆ ಆಧಾರವಿಲ್ಲದೆ ಅವಹೇಳನಕಾರಿ ಸುಳ್ಳು ವರದಿ ಬರೆದರೆ ಅದಕ್ಕೆ ಕಾನೂನುಬದ್ಧ ಪರಿಹಾರ ಇದೆ. ಆಪಾದಿತ ಶಾಸಕರು ಈ ಪತ್ರಿಕೆಗಳ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಬಹುದು. ಶಾಸಕರು ಇದರ ಬದಲು ಹಕ್ಕುಚ್ಯುತಿ ಸಮಿತಿಗೆ ದೂರು ಕೊಟ್ಟಿರುವುದು, ಅವರಿಗೆ ಕೋರ್ಟಿಗೆ ಹೋಗಿ ತಮ್ಮ ಕೇಸು ಗೆಲ್ಲುವ ಸಾಧ್ಯತೆ ಇಲ್ಲವೇನೋ, ಆಪಾಧನೆಗಳು ನಿಜವೇನೋ. ಅವರು ತಮ್ಮ ಅಧಿಕಾರ ಬಳಸಿ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೋ ಏನೋ ಎಂಬ ಸಂದೇಹಕ್ಕೆ ಎಡೆಕೊಡುತ್ತದೆ.

ಸ್ಪೀಕರ್ ಕೋಳಿವಾಡ ಈಗಾಗಲೇ ಮಾಧ್ಯಮಗಳ ವಿರುದ್ಧ ಕಿಡಿಕಾರಿದ್ದು, ಮಾಧ್ಯಮಗಳನ್ನು 'ಹದ್ದುಬಸ್ತಿಗೆ ತರಲು" ಕಟು ಕಾನೂನು ತರಬೇಕು ಎಂದು ಸಮಿತಿ ರಚಿಸಲು ಹೊರಟಿದ್ದರು. ಆದರೆ ಇದಕ್ಕೆ ಬಂದ ತೀವ್ರ ಪ್ರತಿರೋಧ ಮತ್ತು ನೇಮಿತವಾದ ಶಾಸಕರೇ ಇದನ್ನು ವಿರೋಧಿಸಿದ್ದರಿಂದ ಅದು ಬಿದ್ದು ಹೋಯಿತು. ಆದರೆ ಸ್ಪೀಕರ್ ಕೋಳಿವಾಡ ಅವರ ಮೇಲೆ ಮಾಧ್ಯಮ–ವಿರೋಧಿ ಪ್ರಜಾಸತ್ತೆ–ವಿರೋಧಿ ಹಣೆಪಟ್ಟಿ ಬಿದ್ದು ಬಿಟ್ಟಿದೆ. ಆ ಹಿನ್ನೆಲೆಯಲ್ಲಿ ಈ ನಿರ್ಣಯ ಇನ್ನಷ್ಟು ಸಂಶಯಕ್ಕೆ ಎಡೆಕೊಟ್ಟಿದೆ.

ಇದರರ್ಥ ಮಾಧ್ಯಮಗಳ ಮೇಲೆ ಯಾವುದೇ ನಿಬಂಧನೆಗಳು ಇರಬಾರದು ಎಂದಲ್ಲ. ಖಂಡಿತ (ಕೋಮುಗಲಭೆಯಂತಹ ಸಂದರ್ಭದಲ್ಲಿ ಪ್ರಚೋದನಕಾರಿ ಚಟುವಟಿಕೆಯಲ್ಲಿ ತೊಡಗುವುದು ಮುಂತಾದ) ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ನಡೆದಾಗ, ಪೇಯ್ಡ್ ನ್ಯೂಸ್ ನಂತಹ ಭ್ರಷ್ಟ ಕ್ರಮಗಳಲ್ಲಿ ತೊಡಗಿದಾಗ, ಟಿ.ಆರ್.ಪಿ.ಗಾಗಿ ಅನೈತಿಕ ಮಾರ್ಗ ಅನುಸರಿಸಿದಾಗ, ವ್ಯಕ್ತಿತ್ವ–ಹನನದಲ್ಲಿ ತೊಡಗಿದಾಗ ಇನ್ನಷ್ಟು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂಬುದು ನಿಜ. ಆದರೆ ಇವುಗಳಲ್ಲಿ ಹಲವನ್ನು ಈಗಿರುವ ಕಾನೂನುಗಳನ್ನು ಬಳಸಿ ಕೈಗೊಳ್ಳಬಹುದು. ಪತ್ರಿಕಾ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವ, ಅವುಗಳ ಬಾಯಿ ಮುಚ್ಚುವ ಯಾವುದೇ ಕ್ರಮ ಪ್ರಜಾಪ್ರಭುತ್ವ–ವಿರೋಧಿ ಆಗುತ್ತದೆ. ಮಾಧ್ಯಮರಂಗ ಪ್ರಜಾಪ್ರಭುತ್ವದ ನಾಲ್ಕನೇ ಅಂಗ. ಅದರ ಸ್ವಾತಂತ್ರ್ಯದ ರಕ್ಷಣೆ ಪ್ರಜಾಪ್ರಭುತ್ವದ ರಕ್ಷಣೆಗೆ ಅಗತ್ಯ.

ಸ್ಪೀಕರ್ ಕೋಳಿವಾಡ ಅವರ ಈ ದುಡುಕಿನ ಕ್ರಮಗಳಿಗೆ ಮುಖ್ಯಮಂತ್ರಿ ಕಡಿವಾಣ ಹಾಕಿದ್ದಾರೆ. ಸದ್ಯಕ್ಕೆ ಪತ್ರಕರ್ತರನ್ನು ಬಂದಿಸದಂತೆ ನಿರ್ದೇಶನ ಕೊಟ್ಟಿದ್ದಾರೆ. ಕಾಂಗ್ರೆಸ್ ಹೈಕಮಾಂಡಿನಿಂದ ಕರ್ನಾಟಕದ ಉಸ್ತುವಾರಿ ಸದಸ್ಯ ಕೆ.ಸಿ.ವೇಣುಗೋಪಾಲ ಸಹ ಪತ್ರಕರ್ತರ ಬಂಧನವನ್ನು ವಿರೋಧಿಸಿದ್ದಾರೆ. ಅವರು "ಕಾಂಗ್ರೆಸ್ ಮಾಧ್ಯತಮ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಕ್ರಮವನ್ನು ಖಂಡಿಸುವುದು" ಎಂದಿರುವುದು ಒಳ್ಳೆಯ ಬೆಳವಣಿಗೆ. ಆದರೆ ಕೋಳಿವಾಡ ಬಂಧನಕ್ಕೆ ಒತ್ತಡ ಹಾಕುತ್ತಿದ್ದು, ಇದು ಶಾಸಕಾಂಗ–ಕಾರ್ಯಾಂಗಗಳ ನಡುವೆ ಘರ್ಷಣೆಗೂ ಕಾರಣವಾಗಬಹುದು ಎನ್ನಲಾಗಿದೆ. ಪತ್ರಕರ್ತರು ಸ್ಪೀಕರ್ ಆಜ್ಞೆಯನ್ನು ಹೈಕೋರ್ಟಿನಲ್ಲಿ ಪ್ರಶ್ನಿಸಿದ್ದಾರೆ. ಆದರೆ ಅದ–ಕ್ಕೆ ಅವಕಾಶವಿಲ್ಲ ಎನ್ನಲಾಗಿದೆ. ಮುಖ್ಯಮಂತ್ರಿಗಳು ವಿಳಂಬ ನೀತಿ ಅನುಸರಿಸದೆ, ಪತ್ರಕರ್ತರ ಬಂಧನದ ಆಜ್ಞೆಯನ್ನು ಹಿಂದಕ್ಕೆ ತೆಗೆಯುವಂತೆ ಕ್ರಮ ವಹಿಸಬೇಕು. ಮಾಧ್ಯನಮಗಳು ಮತ್ತು ಎಲ್ಲಾ ಪ್ರಜಾಪಭುತ್ವವಾದಿಗಳು ಇದಕ್ಕೆ ತೀವ್ರ ಒತ್ತಡ ಹೇರಬೇಕು. ಅದಕ್ಕೆ ಇಬ್ಬರೂ ಪತ್ರಕರ್ತರ ವೈಯಕ್ತಿಕ ತಪ್ಪು–ಒಪ್ಪುಗಳು ಅಡ್ಡಿಯಾಗಬಾರದು.

ಜನಶಕ್ತಿ ಉತ್ಸವ ಮತ್ತು ಪ್ರಸಾರಾಂದೋಲನ 2017

ಕಳೆದ 3 ವರ್ಷಗಳಂತೆ ಈ ವರ್ಷವೂ "ಜನಶಕ್ತಿ ಉತ್ಸವ"ವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜನಶಕ್ತಿ ಪತ್ರಿಕೆಯನ್ನು ದುಡಿಯುವ ಜನರ ಚಳುವಳಿಯ ಒಳಗೂ/ಹೊರಗೂ ಇನ್ನಷ್ಟು ಹೆಚ್ಚಿನ ಜನವಿಭಾಗಗಳಿಗೆ ಪರಿಚಯಿಸುವುದು, ವ್ಯಾಪಕವಾಗಿ ತೆಗೆದುಕೊಂಡು ಹೋಗುವುದು, ಜನಪ್ರಿಯಗೊಳಿಸುವುದು 'ಜನಶಕ್ತಿ ಉತ್ಸವ'ದ ಪ್ರಮುಖ ಗುರಿ. ಈ ವರ್ಷ ಈ ಕೆಳಗಿನ ಕೆಲವು ಹೊಸ ಅಂಶಗಳನ್ನು ಒಳಗೊಂಡ "ಜನಶಕ್ತಿ ಉತ್ಸವ ಮತ್ತು ಪ್ರಚಾರಾಂದೋಲನ 2017" ಜುಲೈ–ಅಗಸ್ಟ್ ನಲ್ಲಿ ನಡೆಯಲಿದೆ.



- "ಜನಶಕ್ತಿ ಉತ್ಸವ 2017"ರ ಒಟ್ಟಾ–ರೆ ಥೀಮ್ "ಇಂಡಿಯಾ 70 : ಸಾಧನೆಗಳು, ಸವಾಲುಗಳು"
- ಅಗಸ್ಟ್ 19 (ಶನಿವಾರ) ರಂದು ಬೆಂಗಳೂರಲ್ಲಿ "ಜನಶಕ್ತಿ ಉತ್ಸವ 2017" ಉತ್ಸವ ನಡೆಯಲಿದೆ. ಕಾ. ಬೃಂದಾ ಕಾರಟ್ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ.
- ಉತ್ಸವದಲ್ಲಿ ಮೊದಲ ಅರ್ಧದಿನ ಜನಶಕ್ತಿ ಬಳಗದ ಸಮಾವೇಶ ಹಾಗೂ ಎರಡನೇ ಅರ್ಧದಿನ ವ್ಯಾಪಕವಾಗಿ ಮಾಧ್ಯಮ/ಜನತೆಯ ಗಮನ ಸೆಳೆಯುವ ವಿಚಾರ ಸಂಕಿರಣ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಳ್ಳಲಿದೆ. ಜನಶಕ್ತಿ ವಿಶೇಷಾಂಕ ಬಿಡುಗಡೆನೂ ಮಾಡಬೇಕು. ಜನಶಕ್ತಿ ವಿಶೇಷಾಂಕದ ಥೀಮ್ ಸಹ "ಇಂಡಿ–ಯಾ 70 : ಸಾಧನೆಗಳು, ಸವಾಲುಗಳು" ಆಗಿರಬೇಕು.
- ರಾಜ್ಯ ಮಟ್ಟದ ಉತ್ಸವಕ್ಕೆ ಮೊದಲು, ಈ ವರ್ಷದಲ್ಲಿ ಮೊದಲ ಬಾರಿಗೆ ಜುಲೈ 23ರಿಂದ ಅಗಸ್ಟ್ 6 ರ ಅವಧಿಯಲ್ಲಿ ಒಂದು ದಿನ ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಪ್ರಸಾರಾಂದೋಲನ ಮತ್ತು ಜನಶಕ್ತಿ ಬಳಗದ ಸಮಾವೇಶ ಗಳನ್ನು ಸಂಘಟಿಸಲಾಗುತ್ತದೆ.
- ರಾಜ್ಯ ಮಟ್ಟದ ಉತ್ಸವಕ್ಕೆ ಮೊದಲು ಹಾಗೂ ಜಿಲ್ಲಾ ಮಟ್ಟದ ಉತ್ಸವಗಳ ನಂತರ ರಾಜ್ಯ ಮಟ್ಟದ ಬರಹಗಾರರ ಮತ್ತು ವರದಿಗಾರರ ಕಾರ್ಯಾಗಾರ ಸಂಘಟಿಸಬೇಕು.
- ಜನಶಕ್ತಿ ಪತ್ರಿಕೆಯ ಪ್ರಸಾರ ಮತ್ತು ಫೇಸ್ ಬುಕ್ ಪುಟದ "ಲೈಕ್"ಗಳನ್ನು ವನ್ನು ಇಮ್ಮಡಿಯಷ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವಗಳ ಭಾಗವಾಗಿ ಉತ್ಸವ ಥೀಮ್ ನ ಒಂದು ಆಯಾಮದ ಸುತ್ತ ಒಂದು ವಿಶೇಷ ಉಪನ್ಯಾಸ/ಸಂವಾದ, ಓದುಗರ ವೇದಿಕೆ, ಜನಶಕ್ತಿ ಬಳಗದ ಸಮಾವೇಶ, ಪ್ರಸಾರಾಂದೋಲನದ ಉದ್ಘಾಟನೆ ಇರುತ್ತದೆ.
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಬಳಗದ ಸಮಾವೇಶದಿಂದ ಆರಂಭಿಸಿ ಎರಡು ವಾರಗಳ ಕಾಲ ಜಿಲ್ಲಾ ಮಟ್ಟದ ಪ್ರಸಾರಾಂದೋಲನ ನಡೆಸಲಾಗುತ್ತದೆ
- ಇನ್ನಷ್ಟು ವ್ಯಾಪಕವಾಗಿ ಪಕ್ಷದ ಮತ್ತು ನಮ್ಮ ಚಳುವಳಿಯ ಹೊರಗಿರುವ ಎಡ/ಪ್ರಜಾಸತ್ತಾತ್ಮಕ ಬುದ್ಧಿಜೀವಿಗಳು ಚಳುವಳಿಕಾರರನ್ನು ವಿಶೇಷಾಂಕದ ಲೇಖಕರಾಗಿ ಮತ್ತು ಇತರ ಎಲ್ಲಾ ಚಟುವಟಿಕೆಗಳಲ್ಲಿ ಒಳಗೊಳ್ಳಲು ಪ್ರಯತ್ನಿಸಬೇಕು.
- ಜನಶಕ್ತಿ ಬಳಗದ ರಾಜ್ಯ ಮಟ್ಟದ ಒಂದು ಸಾಮಾಜಿಕ ಮಾಧ್ಯಮ ಕಾರ್ಯಾಗಾರವನ್ನು ಕಾರ್ಯಾಗಾರವನ್ನು ಜುಲೈ ನಲ್ಲಿ ಸಂಘಟಿಸಲಾಗುತ್ತದೆ
- ಜನಶಕ್ತಿಯ ಮುಂದಿನ ಬೆಳವಣಿಗೆಗಳಿಗೆ ನಿಧಿ ಸ್ಥಾಪಿಸಲು ವಿಶೇಷಾಂಕದ ಜಾಹೀರಾತುಗಳ ಮೂಲಕ ರೂ. 25 ಲಕ್ಷದ ನಿಧಿಯ ಗುರಿ ಇಟ್ಟುಕೊಳ್ಳಲಾಗಿದೆ.

ದಲಿತರ ಮೇಲಿನ ದೌರ್ಜನ್ಯ : ಜಿಲ್ಲೆಗೊಂದು ವಿಶೇಷ ತ್ವರಿತ ಕೋರ್ಟು ಸ್ಥಾಪಿಸಿ



ದಿನಬೆಳಗಾದರೆ ತೀವ್ರಗೊಳುತ್ತಿರುವ ದಲಿತರ ಮೇಲೆ ದೌರ್ಜನ್ಯಗಳ ಹಿನ್ನೆಲೆಯಲ್ಲಿ ದಲಿತ ಹಕ್ಕುಗಳ ಸಮಿತಿ, ಸಮಾಜ ಕಲ್ಯಾಣ ಸಚಿವ ಆಂಜನೇಯ ರವರಿಗೆ 30–6–2017 ಒಂದು ಮನ್ನವಿ ಸಲ್ಲಿಸಿ – ನಿಲ್ಲದ ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಬೇಕು, ಪರಿಹಾರ ಕಾಣದ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡಬೇಕು, ಜಿಲ್ಲೆಗೊಂದು ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಿಸಬೇಕು, ವಿವಿಧ ದೌರ್ಜನ್ಯ ಪ್ರಕರಣಗಳ ತಪ್ಪಿತಸ್ಥರಿಗೆ ತಕ್ಷಣ ಕಠಿಣ ಶಿಕ್ಷೆಯಾಗಬೇಕು ಮತ್ತು ಸಾಕ್ಷಿಗಳ ರಕ್ಷಣೆಗೆ ಕ್ರಮ ವಹಿಸಬೇಕು ಎಂಬ ಹಕ್ಕೊತ್ತಾಯಗಳನ್ನು ಮಂಡಿಸಿದೆ.

ಮನವಿ ಪತ್ರದಲ್ಲಿ ಇತ್ತೀಚಿನ ಕೆಲವು ದೌರ್ಜನ್ಯ ಪ್ರಕರಣಗಳನ್ನು ಸಚಿವರ ಗಮನಕ್ಕೆ ತರಲಾಗಿದೆ.

- ಕಳೆದ ಒಂದು ವಾರದಲ್ಲಿ ಮೈಸೂರಿನ ನಂಜನಗೂಡು ನವಿಲೂರು ನಲ್ಲಿ ಕುಡಿಯುವ ನೀರಿಗೆ ಜಾತಿ ತಾರತಮ್ಯ ಮಾಡಿ ದಲಿತ ಯುವಕರಾದ ಕುಮಾರ್ ಮತ್ತು ಮಹಾದೇವ್ ರವರನ್ನು ಪ್ರಜ್ಞೆ ಹೋಗುವ ಹಾಗೆ ಹೊಡೆದು ಬೀಸಾಡಿದ ಘಟನೆ ನವಿಲೂರು ಗ್ರಾಮ ಪಂಚಾಯತಿ ಎದುರಲ್ಲಿ ನಡೆದಿದೆ. ಹಗಲು ಹೊತ್ತಿನಲ್ಲೇ ನಡೆದ ಈ ಜಾತಿ ತಾರತಮ್ಯವನ್ನು ಗಂಬೀರವಾಗಿ ಪರಿಗಣಿಸದೆ ಪೊಲೀಸರು ಆರೋಪಿಗಳಿಗೆ ಬೇಲ್ ಸಿಗಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾರ ತಕ್ಷಣ ಮರು ಪರೀಶಿಲನೆ ಮಾಡಬೇಕು.
- ತುಮಕೂರು ಜಿಲ್ಲೆಯ ಮಲ್ಲಸಂದ್ರ ಸಮೀಪ ಕೊತ್ತಿಹಳ್ಳಿಯಲ್ಲಿ ಕುಂಚಂಗಿಯಮ್ಮ ಜಾತ್ರೆ. ದೇವಿಗೆ ದಲಿತರು ಪೂಜೆ ಮಾಡಿಸಲು ಮುಂದಾದಾಗ ಅಲ್ಲಿಯ ಸವರ್ಣಿಯರು ಜಾತಿ ಮಲೀನವಾಯಿತೆಂದ್ದು ದೌರ್ಜನ್ಯ ನಡೆಸಿ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಅದೇರೀತಿ ಕೋರಾ ಹೋಬಳಿ ಬಿಟ್ಟನಕುರುಕೆಯ ದಲಿತರ ಮೇಲೆ ದೌರ್ಜನ್ಯಗಳೂ ನಡೆದಿದೆ.

ಮನವಿ ಪತ್ರದಲ್ಲಿ ಇವಲ್ಲದೆ ಈ ಕೆಳಗಿನ ಹಿಂದಿನ ದೌರ್ಜನ್ಯ ಪ್ರಕರಣಗಳಲ್ಲಿ ಸರ್ಕಾರ ನಿಷ್ಕ್ರಿಯತೆ ಕಡೆಗೆ ಗಮನ ಸೆಳೆದು, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರಕಾರವನ್ನು ಒತ್ತಾಯಿಸಲಾಗಿದೆ.

1. ಸಿಗರನಹಳ್ಳಿ (ಹಾಸನ ಜಿಲ್ಲೆ) ದೇವಸ್ಥಾನ ಪ್ರವೇಶದ ಪ್ರಕರಣದಲ್ಲಿ ಸಾಮಾಜಿಕ ಬಹಿಷ್ಕಾರದಿಂದ ನೊಂದ ದಲಿತರಿಗೆ ಆಗ ಭರವಸೆ ಕೊಟ್ಟಂತೆ, ಯಾವುದೇ ಪರಿಹಾರ ಒದಗಿಸಿರುವುದಿಲ್ಲ. ಪರಿಹಾರವಾಗಿ, ಕೊಳವೆಬಾವಿ, ಹೈನುಗಾರಿಕೆ, ಸಾಲಸೌಲಭ್ಯ ನೀಡಬೇಕು. 49 ಕುಟುಂಬಕ್ಕೆ ಕನಿಷ್ಠ 5 ಎಕರೆ ಭೂಮಿ ನೀಡಬೇಕು.
2. ಮರಕುಂಬಿ (ಕೊಪ್ಪಳ ಜಿಲ್ಲೆ)ಯಲ್ಲಿ ಮಾದಿಗ ಜಾತಿಯ ಜನರಿಗೆ ಕ್ಷೌರ ನಿರಾಕರಿಸಿದ ಪ್ರಕರಣದಲ್ಲಿ, ಕೊಪ್ಪಳ ಜಿಲ್ಲಾಧಿಕಾರಿಗಳು ಪುನರ ವಸತಿ ಮತ್ತು ಭೂಮಿ ಹಂಚಿಕೆ ಪ್ರಸ್ತಾವದ ಬಗ್ಗೆ ನೀಡಿದ ಯಾವುದೇ ಆದೇಶಗಳು ಜಾರಿಯಾಗಿಲ್ಲ. ಮರಕುಂಬಿ ಜನ ಮತ್ತು ಕೊಲೆಯಾದ ವಿರೇಶಪ್ಪನ ಕುಟುಂಬ ಬೀದಿ ಪಾಲಾಗಿದೆ. ಈ ಬಗ್ಗೆ ತಕ್ಷಣ ಕ್ರಮಜರುಗಿ ಪರಿಹಾರ ಒದಗಿಸಬೇಕು. ನ್ಯಾಯಲಯದಲ್ಲಿರುವ ಮೊಕ್ಕದ್ದಮೆ ಇತ್ಯಾರ್ಥ ಪಡಿಸಲು ಸೂಕ್ತ ನಿರ್ದೇಶನವನ್ನು ಸರ್ಕಾರ ನೀಡಬೇಕು.
3. ನಾಗಶೆಟ್ಟಹಳ್ಳಿ (ರಾಮನಗರ ಜಿಲ್ಲೆ) 10–5–2017 ರಂದು ಪರಿಶಿಷ್ಟ ಜಾತಿಗೆ ಸೇರಿದ 30 ಮಾದಿಗ ಕುಟುಂಬಗಳ ಮೇಲೆ ಸವರ್ಣೀಯರು 1974 ರಲ್ಲಿ ಸರ್ಕಾರ ಸ್ವಾತಂತ್ರದ 25 ನೇ ವಾರ್ಷಿಕೋತ್ಸವ ಪ್ರಯುಕ್ತ ನೀಡಿದ 14 ದಲಿತರ ಸೈಟುಗಳಿಗೆ ಅಕ್ರಮವಾಗಿ ಬೇಲಿ ಹಾಕಿ, ಅವರನ್ನು ಹೊರ ಹಾಕಿರುವ ಪ್ರಕರಣದಲ್ಲಿ, ಸರ್ಕಾರ ಸಂಬಂಧಪಟ್ಟವರ ಮೇಲೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಅಕ್ರಮವಾಗಿ ಪೋಲೀಸ್ ಬೆಂಬಲದಿಂದ ತಂತಿಬೇಲಿ ಹಾಕಿ ಕಾಂಪೌಂಡ್ ಅನ್ನು ನಿರ್ಮಿಸಲಾಗುತ್ತಿದೆ. ತಕ್ಷಣ ಸರ್ಕಾರ ದಲಿತರ ಭೂಮಿಗೆ ರಕ್ಷಣೆ ಮತ್ತು ಜಾತಿ ತಾರತಮ್ಯ ಮಾಡಿದವರ ಮೇಲೆ ಕಠಿಣ ಕಾನೂನು ಕ್ರಮ, ಮುಜರಾಯಿ ಇಲಾಖೆಯಿಂದ ನಿರ್ಮಿಸಿದ ದೇವಸ್ಥಾನಕ್ಕೆ ಮತ್ತು ಸಮುದಾಯ ಭವನಕ್ಕೆ ದಲಿತರಿಗೆ ಪ್ರವೇಶ ನೀಡಲು ಕ್ರಮ ಜರುಗಿಸಬೇಕು.
4. ಬಸವನಪುರ (ಮಂಡ್ಯ ಜಿಲ್ಲೆಯ, ಮದ್ದೂರು ತಾಲೂಕಿನ) ಐಮಾ ಳ (24) ದಲಿತ ಹುಡುಗಿ ಸಾಮೂಹಿಕ ಅತ್ಯಾಚಾರ ನಡೆಸಿ ಕಲ್ಲಿನಿಂದ ತಲೆಜಜ್ಜಿ ಕೊಲೆ ಮಾಡಿ ಎರಡು ತಿಂಗಳಾಗಿದ್ದರೂ ಆರೋಪಿಗಳನ್ನು ಬಂಧಿಸಿಲ್ಲ. ನೊಂದ ಕುಟುಂಬಕ್ಕೆ ಪರಿಹಾರ ನೀಡಿರುವುದಿಲ್ಲ. ತಕ್ಷಣ ಕ್ರಮ ಜರುಗಿಸಬೇಕೆಂದು ಕೋರುತ್ತೇವೆ. ಪಾಂಡವಪುರ ಸಣಬ ಗೀತಾಳ ಕೊಲೆ ಪ್ರಕರಣ, ಮಳವಳ್ಳಿ ಹುಸ್ಕೂರು ದಲಿತರ ಮೇಲಿನ ದೌರ್ಜನ್ಯ ಪ್ರಕರಣ, ಮಂಡ್ಯ ತಾಲೂಕು ಹುಲಿವಾನದ ಅಂತರ್ಜಾತಿ ವಿಚಾರದ ಗಲಭೆ ಪ್ರಕರಣ, ಶ್ರೀರಂಗಪಟ್ಟಣ ಬಿದರುಹಳು ಹುಂಡಿಯ ದಲಿತರ ಮೇಲೆ ದೌರ್ಜನ್ಯಗಳ ಪ್ರಕರಣಗಳಲ್ಲೂ ಕ್ರಮ ಕೈಗೊಂಡಿಲ್ಲ.
5. ಲಕ್ಕುಂಡಿ (ವಿಜಯಪುರ, ಮುದ್ದೆಬೀಹಾಳ ತಾ) ದಲಿತ ಮಾದರ ಹುಡುಗ ರೆಡ್ಡಿ ಹುಡುಗಿ ಪ್ರೀತಿಸಿದನೆಂಬ ಕಾರಣಕ್ಕೆ ದಲಿತ ಕುಟುಂಬದ ಮೇಲೆ ದಾಳಿನಡೆಸಿ ಕಟ್ಟಿದ ಹೊಸಮನೆಯನ್ನು ದ್ವಂಸ ಮಾಡಿದ್ದಾರೆ. ಹೆಣ್ಣು ಮಕ್ಕಳ ಮೇಲೆ ಹಲ್ಲೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾದರು ಪರಿಹಾರವಾಗಿ ಚೂರುಪಾರು ಹಣ ನೀಡಿದ್ದಾರೆ. ವಾಸಕ್ಕೆ ಮನೆಯಿಲ್ಲದೆ ದಲಿತ ಕುಟುಂಬ ಪರಿತಪಿಸುತ್ತಿದೆ. ಲಕ್ಷಾಂತರ ರೂ. ಹಾನಿಯಾಗಿದೆ. ಈ ಬಗ್ಗೆ ಪರೀಶೀಲಿಸಿ ಕ್ರಮ ಜರುಗಿಸಬೇಕು.
6. ಸೇಗುಣಸೆ (ಅಥಣಿ ತಾಲೂಕು, ಬೆಳಗಾವಿ ಜಿಲ್ಲೆ) 1–1–2014 ರಂದು ರೇಣುಕಮ್ಮ ಜಾತ್ರೆ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯವರು (ಹೊಲೆಯರು) ದೇವಸ್ಥಾನ ಪ್ರವೇಶ ಮಾಡಿದ್ದಾರೆಂದು ಬಸಪ್ಪ ಕಾಂಳೈ ಸನ್ ಆಫ್ ಸೋಮ ಲಿಂಗಕಾಂಳೈ 12 ಕುಟಂಬದ 19 ಜನರ ಮೇಲೆ ದೌರ್ಜನ್ಯ ಮಾಡಲಾಯಿತು. ಜಿಲ್ಲಾಧಿಕಾರಿಗಳು ಈ ನೊಂದ ದಲಿತರಿಗೆ ಪುನರ್‌ವಸತಿ, ಉದ್ಯೋಗ ಖಾತ್ರಿಯಲ್ಲಿ ಉದ್ಯೋಗ ಮತ್ತು ಭೂಮಿಯಿಲ್ಲದವರಿಗೆ ಭೂಮಿ ನೀಡುವ ಭರವಸೆ ನೀಡಿದ್ದರು. ಇವ್ಯಾವು ಕೂಡ ಈ ಬಡ ಜನರಿಗೆ ದಕ್ಕಿರುವುದಿಲ್ಲ.
7. ಕರ್ನಾಟಕದ ಅತ್ಯಂತ ಅಮಾನುಷ ದೌರ್ಜನ್ಯದ 'ಕಂಬಾಲಪಲ್ಲಿ' ಪ್ರಕರಣದಲ್ಲಿ 7 ಜನರ ಹತ್ಯೆ ಪ್ರಕರಣ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದೆ. ಈ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನ ನಡೆಯುತ್ತಲೆ ಇದೆ. ಈ ಪ್ರಕರಣದಲ್ಲಿ ನೊಂದ ಕುಟುಂಬಗಳಿಗೆ ಚಿಂತಾಮಣಿಯಲ್ಲಿ ಸರ್ಕಾರದ ಜಮೀನು ನೀಡಿ 'ಮಿನಿ ಕಂಬಾಲಾಪಲ್ಲಿ' ನಿರ್ಮಿಸಿದೆ. ಆದರೆ ಈ ಜಾಗದಲ್ಲಿ ವಾಸಿಸುತ್ತಿರುವ ಕಂಬಾಲಪಲ್ಲಿ ದೌರ್ಜನ್ಯಕ್ಕೊಳಗಾದ ಜನರಿಗೆ ನೆಮ್ಮದಿಯಿಂದ ಬದುಕಲು ಬಿಡುತ್ತಿಲ್ಲ. ಸಾಕ್ಷಿಗಳನ್ನು ನಿರ್ನಾಮ ಮಾಡುವ ತಂತ್ರ, ಕುತಂತ್ರ ನಡೆಯುತ್ತಲೇ ಇದೆ. ಜಗದೀಶ ಕುಟುಂಬದ ಮೇಲೆ ಅವರ ತಾಯಿಯ ಮೇಲೆ ಇತ್ತೀಚೆಗೆ ದೌರ್ಜನ್ಯ ನಡೆಸಲಾಗಿದೆ. ಪೊಲೀಸ್ ಇಲಾಖೆ ತಕ್ಷಣ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಜಗದೀಶ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ಒತ್ತಾಯಿಸುತ್ತೇವೆ.
8. ಚಿಕ್ಕಬಳ್ಳಾಪುರ ಗುಡಿಬಂಡೆ ತಾಲ್ಲೂಕ್‌ನಲ್ಲಿ ಮುರಳಿಹತ್ಯೆ, ಸಾಮಾಜಿಕ ಬಹಿಷ್ಕಾರಗಳು, ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ ಅಭಿಷೇಕ್ ಮೇಲೆ ದಾಳಿ, ಚಿಕ್ಕಮಗಳೂರು ಜಿಲ್ಲೆಯ ಗಡಬನಹಳ್ಳಿ ದಲಿತ ಮಹಿಳೆ ಪಂಚಾಯತಿ ಸದಸ್ಯೆ ಕೊಲೆ, ಮಂಡ್ಯದ ಪಾಂಡವಪುರದ ಗೀತಾಳ ಕೊಲೆ. ವಿಜಯಪುರ ಕುಂಬಾರಳ್ಳದಲ್ಲಿ ಅಯ್ಯುವು ನ ಪ್ರಸಾದ ಮುಟ್ಟಿದ ಕಾರಣಕ್ಕಾಗಿ ದಲಿತ ಬಾಲಕನ ಕೊಲೆ, ಚಾಮರಾಜನಗರ ಜೋಡಿ ಕೊಲೆ ಪ್ರಕರಣ ಹೀಗೆ ಪ್ರತಿದಿನ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಲೆ ಇದೆ. ಸರ್ಕಾರ ದಲಿತ ದೌರ್ಜನ್ಯ ತಡೆಗೆ ಜಿಲ್ಲಾ ಮಟ್ಟದ ಸಮಿತಿಗಳನ್ನು ಜಾಗೃತಗೊಳಿಸಬೇಕು. ತಕ್ಷಣದಲ್ಲಿ ದೌರ್ಜನ್ಯಕ್ಕೊಳಾಗಾದ ಕುಟುಂಬಗಳಿಗೆ ರಕ್ಷಣ ಮತ್ತು ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತಾಗಬೇಕು.

ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ದ.ಕ.ಜಿಲ್ಲಾ ಸಮಾವೇಶ

ವರದಿ: ವಾ.ಉ.

ಜುಲಾಯಿ 1 ಮತ್ತು 2 ರಂದು ಕುಂದಾಪುರದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ರಾಜ್ಯ ಸಮ್ಮೇಳನ ನಡೆಯಲಿದ್ದು, ಅದಕ್ಕಾಗಿ ಕುಂದಾಪುರದಲ್ಲಿ ರಚಿಸಲಾದ ಸ್ವಾಗತ ಸಮಿತಿ ಸಕಲ ಸಿದ್ಧತೆ ನಡೆಸಿದೆ. ಇದರ ಪೂರ್ವಬಾವಿಯಾಗಿ ದಕ್ಷಿಣ ಕನ್ನಡ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಜಿಲ್ಲಾ ಸಮಾವೇಶ ಜೂನ್ 26 ರಂದು ಮಂಗಳೂರಿನಲ್ಲಿ ಜರಗಿತು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಯು.ಜಯಂತ ನಾಯ್ಕ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. 130 ಮಂದಿ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದು, 9 ಮಂದಿ ವರದಿಯ ಮೇಲೆ ಚರ್ಚೆ ನಡೆಸಿದರು. ಸಮಾವೇಶವು ಮುಂದಿನ ಅವಧಿಗೆ 25 ಮಂದಿಯ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ನೂತನ ಸಮಿತಿ ಅಧ್ಯಕ್ಷರಾಗಿ ಸುನಿಲ್ ಕುಮಾರ್ ಬಜಾಲ್, ಪ್ರಧಾನ ಕಾರ್ಯದರ್ಶಿಯಾಗಿ ಯೋಗೀಶ್ ಜಪ್ಪಿನಮೊಗರು, ಖಜಾಂಚಿಯಾಗಿ ರವಿಚಂದ್ರ ಕೊಂಚಾಡಿ ಆಯ್ಕೆಯಾಗಿರುತ್ತಾರೆ. ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷರಾದ ವಸಂತ ಆಚಾರಿ ಸಮಾರೋಪ ಭಾಷಣ ಮಾಡಿದರು. ಯೋಗೀಶ್ ಜಪ್ಪಿನಮೊಗರು ವಂದಿಸಿದರು.

ಶ್ರೀನಿವಾಸ್ ಬಜಾಲ್ ಹುತಾತ್ಮ ದಿನ 15ನೇ ವರ್ಷದ ಆಚರಣೆ:

ಹಿಂದೂತ್ವ ಕೋಮುವಾದಕ್ಕೆ ಸವಾಲಾಗಿದ್ದ ಶ್ರೀನಿವಾಸ ಬಜಾಲ್ ಕೋಮುವಾದಿಗಳಿಗೆ ಬಲಿಯಾಗಿ 15 ವರ್ಷಗಳಾಗಿವೆ. ಅವರ ನೆನಪಿನಲ್ಲಿ ಪ್ರತಿ ವರ್ಷ ನಡೆಯುವ ಹುತಾತ್ಮ ದಿನದಂದು ರಕ್ತದಾನ ಶಿಬಿರ ಮತ್ತಿತರ ಕಾರ್ಯಕ್ರಮಗಳನ್ನು ಡಿವೈಎಫ್‌ಐ ಬಜಾಲ್ ಪಕ್ಕಲಡ್ಕ ಘಟಕ ಹಾಗೂ ಸ್ಥಳೀಯ ಸಾರ್ವಜನಿಕರು ಪ್ರತಿವರ್ಷ ನಡೆಸಿಕೊಂಡು ಬರುತ್ತಿದ್ದಾರೆ. ಈ ವರ್ಷದ ಹುತಾತ್ಮ ದಿನಾಚರಣೆಯನ್ನು ಜೂನ್ 25 ರಂದು ಬಜಾಲಿನಲ್ಲಿ ನಡೆಸಲಾಯಿತು.

ಹಿಂದೂ ಕೋಮುವಾದಕ್ಕೆ ಕಳೆದ ಒಂದು ವರ್ಷದಲ್ಲಿ ಹಿಂದೂಗಳು ಕೆಲವರು ದ.ಕ.ಜಿಲ್ಲೆಯಲ್ಲಿ ಬಲಿಯಾಗಿದ್ದಾರೆ. ಉಡುಪಿಯ ಪ್ರವೀಣ ಪೂಜಾರಿ, ಮಂಗಳೂರಿನ ವಿನಾಯಕ ಬಾಳಿಗಾ ಸೇರಿ 15 ಮಂದಿ ಕಳೆದ ಕೆಲವೇ ವರ್ಷಗಳಲ್ಲಿ ಕೋಮುವಾದಿಗಳಿಂದ ಹತರಾಗಿದ್ದಾರೆ. 15 ವರ್ಷಗಳ ಹಿಂದೆ ಡಿವೈಎಫ್‌ಐನ ಸಂಗಾತಿ ಶ್ರೀನಿವಾಸ ಬಜಾಲ್ ಹೀಗೇನೇ ಹಿಂದೂ ಕೋಮುವಾದಿಗಳಿಗೆ ಬಲಿಯಾಗಿ ಹುತಾತ್ಮರಾಗಿದ್ದಾರೆ ಎಂಬುದಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ನುಡಿದರು.

ರಕ್ತದಾನ ಶಿಬಿರವಲ್ಲದೆ, ಪರಿಸರದ ಶಾಲೆಗಳಲ್ಲಿ ಪ್ರೌಢಶಾಲೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ನೀಡುವ ವಾರ್ಷಿಕ ಪ್ರಶಸ್ತಿಗಳನ್ನು ನೀಡಲಾಯಿತು. ಡಿವೈಎಫ್‌ಐ ದ.ಕ.ಜಿಲ್ಲಾ ಘಟಕದ ಉಪಾದ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಪಕ್ಕಲಡ್ಕ ಘಟಕದ ಪ್ರಕಾಶ್ ಶೆಟ್ಟಿ, ರಿತೇಶ್ ಪಕ್ಕಲಡ್ಕ, ಕೌಶಿಕ್ ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

(ಬಳ್ಳಾರಿಯಲ್ಲಿ ಜೂನ್ 18 ರಂದು ನಡೆದ ಪ್ರಗತಿಪರ ಲೇಖಕರ ಮಾಧ್ಯಮ ಮಿತ್ರರ ಹಾಗೂ ನಾನಾ ಸಂಘಟನೆಗಳ ಕಾರ್ಯಕರ್ತರ ಫ್ಯಾಸಿಸ್ಟ್ ವಿರೋಧಿ ಸಮಾವೇಶದ ವರದಿ)

ಬಳ್ಳಾರಿಯಲ್ಲಿ ಫ್ಯಾಸಿಸ್ಟ್ ವಿರೋಧಿ ಸಮಾವೇಶ



ಬಳ್ಳಾರಿಯ ರಾಘವ ಕಲಾಮಂದಿರದಲ್ಲಿ ಪ್ರಗತಿಪರ ಲೇಖಕರು, ಮಾಧ್ಯಮ ಮಿತ್ರರು ಹಾಗೂ ನಾನಾ ಸಂಘಟನೆಗಳ ಕಾರ್ಯಕರ್ತರು ಜಂಟಿಯಾಗಿ ಜೂನ್ 18 ರಂದು ಹಮ್ಮಿಕೊಂಡಿದ್ದ ಫ್ಯಾಸಿಸ್ಟ್ ವಿರೋಧಿ ಸಮಾವೇಶಕ್ಕೆ ಉತ್ತಮ ಸ್ಪಂಧನೆ ದೊ–ರೆತಿದೆ.

ಗಣಿ ಉದ್ದಿಮೆಯ ಜಂಜಾಟಕ್ಕೆ ಸಿಲುಕಿರುವ ಗಣಿ ನಗರದಲ್ಲಿ ಇಂಥಹ ಚಿಂತನೆಗಳು ನಡೆಯುವುದೇ ಅಪರೂಪ. ಸಮಾವೇಶದಲ್ಲಿ ಸಂಘಟಕರು ನೀರೀಕ್ಷಿಸಿದಂತೆ ಸುಮಾರು 246 ಪ್ರತಿನಿಧಿಗಳು ಪಾಲ್ಗೊಂಡು ದೇಶ ಎದುರಿಸುತ್ತಿರುವ ಕೋಮುವಾದದ ಬಗ್ಗೆ ಗಂಭಿರ ಚಿಂತನೆ ನಡೆಸಿದ್ದು ಉತ್ತಮ ಲಕ್ಷಣವಾಗಿದೆ.

ಪ್ರಾರಂಭದಲ್ಲಿ ಸಮಾಜ ವಿಜ್ಞಾನ ವೇದಿಕೆಯ ಪಿಆರ್.ವೆಂಕಟೇಶ್, ಪ್ರಾಸ್ತಾವಿಕವಾಗಿ ಮಾತನಾಡಿ, ದೇಶದಲ್ಲಿ ಜನಪರ ಚಿಂತನೆಗೆ ಕಡಿವಾಣ ಹಾಕಲು ಹಾಗೂ ಹಲ್ಲೆ ನಡೆಸುತ್ತಿದೆ, ಚಿಂತನೆಗಳನ್ನು ಕೊಲ್ಲಲಾಗುತ್ತಿದೆ. ಈ ಹಿನ್ನಲೆಯಲ್ಲಿ ಜನ ಪರ ಚಿಂತಕರಾದ ಪಾನ್ಸಾರೆ, ಎಂಎಂ. ಕಲುಬುರ್ಗಿ ಮತ್ತು ದಾಬೋಲ್ಕರ್‌ರವರ ಹತ್ಯೆ ನಡೆದಿದೆ. ಗೋ ಹತ್ಯೆ ನಿಷೇಧ ಕಾಯ್ದೆ, ಜನ ಸಾಮಾನ್ಯರ ಆಹಾರದ ಹಕ್ಕಿಗೆ ಹಾಗೂ ಚರ್ಮ ಕೆಲಸದ ಮೂಲಕ ಬದುಕು ಕಟ್ಟಿಕೊಳ್ಳುವ ಬಡವರ ಪಾಲಿಗೆ ಇದು ಮರಣ ಶಾಸನವಾಗಿದೆ ಪರಿಣಮಿಸಿದೆ. ಎಲ್ಲರೂ ಭಯದಲ್ಲಿ ಬದುಕು ಕಳವಳ ದೇಶವನ್ನು ಕಾಡಿದೆ.

ಇಂಥಹ ಪರಿಸ್ತಿತಿಯಲ್ಲಿ ಲೇಖಕರ ಬರಹದ ದಾರಿ ಯಾವುದಿರಬೇಕೆಂಬುದನ್ನು ನಿರ್ಧರಿಸಬೇಕಾದ ಅಗತ್ಯವಿದೆ. ಆದರೆ ಕೆಲವರು ನಾನು ಎಡವೂ ಅಲ್ಲ ಬಲವೂ ಅಲ್ಲ ಎಂಬ ಅಪ್ರಮಾಣಿಕ ವಾಸ್ತವವಾದಿಗಳು ಎಂಬ ಎಡಬಿಡಂಗಿ ಹೇಳಿಕೆ ನೀಡುವ ಮೂಲಕ ಬರಹಗಾರರ ದಿಕ್ಕನ್ನು ಊನಗೊಳಿಸಲು ಹವಣಿಕೆ ನಡೆಸಿದ್ದಾರೆ. ಇದು ಇಡೀ ಸಾಹಿತ್ಯದ ಒಟ್ಟು ಮೌಲ್ಯಕ್ಕೆ ದಕ್ಕೆ ತರುವ ನೀತಿಯಾಗಿದೆ ಎಂದರು.

ಈಗ ಕೋಮು ಮತ್ತು ಸರ್ವಾಧಿಕಾರ ಜೊತೆ–ಗೂಡಿದ ಆಡಳಿತ ಅಸ್ಥಿತ್ವಕ್ಕೆ ಬಂದಿದ್ದು, ಹಿಂದಿಗಿಂತಲೂ ಕ್ರೂರ ಸನ್ನಿವೇಶಗಳನ್ನು ಬರಹಗಾರರು ಎದುರಿಸ ಬೇಕಾಗಿದೆ. ಇಂಥಹ ಸಂದರ್ಭದಲ್ಲಿ ಜೈವಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶವನ್ನು ರೂಪಿಸಲು ಲೇಖಕರು ಮಾಧ್ಯಮ ಮಿತ್ರರು ಮತ್ತು ಪ್ರಗತಿಪರ ಸಂಘಟನೆ ಕಾರ್ಯಕರ್ತರು ಶ್ರಮಿಸಬೇಕಿದೆ. ಸಮಾವೇಶವು ಇಂಥಹ ಗಂಭಿರ ಚಿಂತನೆಯ ಸುದುದ್ದೇಶ ಹೊಂದಿದೆ ಎಂದರು.

ನಂತರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಮಾಜ ವಿಜ್ಞಾನಿ ಹಾಗೂ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ ಎನ್ ನಾಗರಾಜ್ ಮಾತನಾಡಿ, ಪ್ರಜಾಪ್ರಭುತ್ವವನ್ನು ನಾಶಗೊಳಿಸುವುದು, ಪ್ರಜಾಸತ್ತಾತ್ಮಕ ಅಂಗಗಳನ್ನು, ಸಂಸ್ಥೆಗಳನ್ನು ನಾಶಗೊಳಿಸಿ ದೇಶದ ಎಲ್ಲ ಅಂಗಗಳನ್ನೂ ಆವರಿಸುವ ಸರ್ವಾಧಿಕಾರಿ ವ್ಯವಸ್ಥೆಯೇ ಫ್ಯಾಸಿಸಂ ಎಂದರು.

ಇಂತಹ ಬಾಹುಗಳು ದೇಶದ ಎಲ್ಲಾ ಅಂಗಗಳೂ ಸೇರಿದಂತೆ ಸಂವಿಧಾನವನ್ನು ಆವರಿಸಿ ಅವುಗಳ ಮೇಲೆ ಕ್ರೂರ ಹಾಗೂ ನಗ್ನ ದಬ್ಬಾಳಿಕೆ ಪ್ರಾರಂಭಗೊಂಡಿದೆ. ಈ ಸ್ವರೂಪವೇ ಫ್ಯಾಸಿಸಂನ ಲಕ್ಷಣ ವಾಗಿದೆ. ಜಗತ್ತಿನ ಇತಿಹಾಸಕ್ಕೆ ಈ ಸ್ಥಿತಿ ಹೊಸದೇನಲ್ಲ. ಮೊದಲು ಇಟಲಿ, ಜರ್ಮನಿಯಲ್ಲಿ ಕಾಣಿಸಿಕೊಂಡಿತ್ತು. ಕೋಮುವಾದದ ಸಖ್ಯದೊಂದಿಗಿನ ಕಾರ್ಪೋರೇಟ್ ಸಂಸ್ಥೆಯ ಸರ್ಕಾರಗಳ ಮೂಲಕ ಜಾರಿಗೆ ತಂದ ಆರ್ಥಿಕ ನೀತಿಗಳಿಂದ ಜನರು ರೊಚ್ಚಿಗೇಳುವ ಸಂದರ್ಭದಲ್ಲಿ ಫ್ಯಾಸಿಸಂ ಅನ್ನು ಹೇರಲಾಗುತ್ತಿದೆ.

ಧರ್ಮ ಮತ್ತು ಜಾತಿಯ ಅಧಾರದಲ್ಲಿ ಜನರನ್ನು ವಿಭಜಿಸಿ ಅಧಿಕಾರದ ಚುಕ್ಕಾಣಿ ಹಿಡಿದ ಬಿಜೆಪಿ, ಜರ್ಮನಿಯ ಹಿಟ್ಲರ್‌ನಂತೆ ಜ್ಯೂಗಳ ವಿರುದ್ಧ ಅಲ್ಲಿನ ಜನರನ್ನು ಎತ್ತಿ ಕಟ್ಟಿದಂತೆ ಭಾರತದಲ್ಲೂ ಮುಸ್ಲಿಮರ ವಿರುದ್ಧ, ದಲಿತರ ವಿರುದ್ಧ. ಸಮತಾವಾದಿಗಳ ವಿರುದ್ಧ, ಸಂಘಟಿತ ಹಿಂದೂ ಕೋಮುವಾದಿಗಳ ಸಾಮೂಹಿಕ ದಂಗೆಯನ್ನು ಎತ್ತಿ ಕಟ್ಟಲಾಗುತ್ತಿದೆ. ಕೋಮುವಾದವನ್ನೇ ಅಸ್ತ್ರವಾಗಿಸಿಕೊಂಡು ಜನರ ನಡುವೆ ಸಂಘರ್ಷ ಹುಟ್ಟು ಹಾಕುವ ಮೂಲಕ ತಮ್ಮ ಅನೀತಿಯ ವಿರುದ್ಧ ಭುಗಿಲೇಳುವ ಜನವಿರೋಧದ ದಿಕ್ಕನ್ನು ದಿಕ್ಕೆಡಿಸಲು ಮುಂದಾಗಿದ್ದಾರೆ. ಎಂದರು.

ಕಾರ್ಪೋರೇಟ್ ಶಕ್ತಿಗಳ ಸಹಾಯದಿಂದ ಅಧಿಕಾರಕ್ಕೆ ಬಂದ ಸರ್ಕಾರ ಒಂದು ಕಡೆ ಕಾರ್ಪೋರೇಟ್ ಶಕ್ತಿಗಳ ಹಿತ ಕಾಪಾಡುತ್ತಲೇ ತನ್ನ ನೀತಿಗಳನ್ನು ಸರ್ಕಾರದ ಮೂಲಕ ಜಾರಿಗೆ ತರುವ ಕೆಲಸವನ್ನು ಆರೆಸ್ಸೆಸ್ ಮಾಡುತ್ತಿದೆ ಎಂದು ನಾಗರಾಜ್ ಆರೋಪಿಸಿದರು. ಕೇಂದ್ರ ಸರ್ಕಾರದಲ್ಲಿ ಬಿಜೆಪಿ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಸಚಿವ ಸಂಪುಟದ ಉಪಸಮಿತಿಗಳನ್ನು ರದ್ದುಗೊಳಿಸಲಾಯಿತು, ಯೋಜನಾ ಆಯೋಗವನ್ನು ರದ್ದುಗೊಳಿಸಲಾಯಿತು ಇದರಿಂದಾಗಿ ರಾಜ್ಯ ಸರ್ಕಾರಗಳನ್ನು ಇಂದು ಕೇಂದ್ರವನ್ನು ಯಾವುದಕ್ಕೂ ಏನನ್ನೂ ಕೇಳದಂತಹ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಗೋಹತ್ಯೆ ನಿಷೇಧ ಕಾಯ್ದೆ ಹಿಂದೆ ಯಾವುದೇ ಗೋರಕ್ಷಣೆಯ ಹಿತಾಸಕ್ತಿ ಇಲ್ಲ ಬದಲಾಗಿ, ಬೃಹತ್ ಪ್ರಮಾಣದಲ್ಲಿ ಗೋಮಾಂಸ ರಫ್ತು ಮಾಡುವ ಉದ್ಯಮಿಗಳ ಹಿತ ಕಾಯುತ್ತಲೇ ಭಾರತದ ಗ್ರಾಮೀಣ ಪ್ರದೇಶವನ್ನು ಕೋಮುವಾದೀಕರಣಗೊಳಿಸುವ, ದೇಶದ ಎಲ್ಲ ದನದ ಜಾತ್ರೆಗಳನು ಗಲಾಟೆಯ ಸ್ಥಳಗಳನ್ನಾಗಿ ಮಾರ್ಪಡಿಸುವ ಹುನ್ನಾರ ಇದೆ ಎಂದರು.

ಗೋಷ್ಠಿಗಳು : ಭಾರತದ ಸಂಸ್ಕೃತಿಯಲ್ಲಿ ಕೋಮು ವಿರೋಧಿ ನೆಲೆಗಳು"

ಹಂಪಿ ಕನ್ನಡ ವಿವಿಯ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ರಹಮತ್ ತರೀಕೆರೆ ಮಾತನಾಡಿ, ನಮಗೆಲ್ಲ ಕೂಡಿ ಬದುಕಬೇಕೆಂಬ ಆಲೋಚನೆ ಇದೆ, ಹೀಗಾಗಿ ಈ ಸಾಮರಸ್ಯವನ್ನು ಕಾಪಾಡಲು ನಾವೆಲ್ಲ ಶ್ರಮಿಸಬೇಕಿದೆ, ಕೇವಲ ಕೋಮುವಾದದ ವಿರೋಧ ಎಂದರೆ ಸಾಮರಸ್ಯದಿಂದ ಬದುಕುತ್ತಿರುವುದು ಅದರೆ ಬಗ್ಗೆ ಸದಾ ಮಾತಾಡುವುದು, ವಿಚಾರವನ್ನು ಬೆಳೆಸುವುದೇ ಪರ್ಯಾಯವಾಗಿದೆ ಎಂದರು.

ಭಾರತದಲ್ಲಿ ಇರುವಷ್ಟು ಸಾಂಸ್ಕೃತಿಕ ವೈವಿಧ್ಯತೆ ಬೇರೆಲ್ಲೂ ಇಲ್ಲ. ಹಿಂದಿಯನ್ನು ನಾವು ಏಕರೂಪಿ ಭಾಷೆ ಎನ್ನುತ್ತೇವೆ ಆದರೆ ಅದನ್ನು ಹಲವು ರೀತಿಯಲ್ಲಿ ಬಳಸುವ ಜನ ಭಾರತದಲ್ಲಿದ್ದಾರೆ. ಭಾಷೆಯ ಬಳಕೆಯಲ್ಲೂ ಕೂಡ ಬಹುತ್ವವನ್ನು ಮತ್ತು ಬಹುತ್ವದಲ್ಲಿ ಏಕತೆಯನ್ನು ಗುರುತಿಸಬಹುದು ಎಂದರು.

ಭಾರತದ ಸಂಸ್ಕೃತಿ ಬಹುತ್ವದ ಸಂಸ್ಕೃತಿ, ಅದು ಸಾಕಷ್ಟು ವೈವಿದ್ಯತೆಯನ್ನು ಒಳಗೊಂಡಿದೆ. ಕರ್ನಾಟಕವನ್ನೇ ಉದಾಹರಿಸುವುದಾದರೆ ಇಲ್ಲಿ ರಾಗಿಮುದ್ದೆಯಂತೆ ಸಾಕಷ್ಟು ರೀತಿಯ ಆಹಾರ ವೈವಿಧ್ಯಗಳಿವೆ ಎಂದರು.

ದೇಶ ಎಂದೂ ಒಂದೇ ಸಂಸ್ಕೃತಿ, ಒಂದೇ ಧರ್ಮದ ಬೀಡಾಗಿರಲಿಲ್ಲ. ದೇಶವನ್ನು ಕಟ್ಟುವವರು ಮೊದಲು ದೇಶವನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದರು.

ಈ ದೇಶದ ಗುರು ಪಂಥ ಹಾಗೂ ಸೂಫಿಸಂ ಈ ದೇಶದ ಆರೋಗ್ಯವನ್ನು ಕಾಪಾಡಿದೆ, ಮಾತ್ರವಲ್ಲ ಜಾತ್ಯಾತೀತತೆಯನ್ನು ಬೋಧಿಸಿದೆ. ಜಾತ್ಯಾತೀತ ಎಂಬ ಪದವನ್ನು ನಾವು ಇತ್ತೀಚೆಗೆ ಕಂಡುಕೊಂಡಿದ್ದೇವೆ ಅಷ್ಟೆ. ಆದರೆ ಅದನ್ನು ಬಾಳಿ ಬದುಕಿದ ಜನ ಭಾರತದ ಜನ. ಕೋಟ್ಯಾಂತರ ಜನ ಜಾತ್ಯಾತೀತತೆಯನ್ನು ಸೌಹಾರ್ದತೆಯನ್ನು ದಿನನಿತ್ಯ ಬದುಕುತ್ತಿದ್ದಾರೆ. ಆದರೆ ಸಂವಿಧಾನದ ಆಶಯ ಕಾಪಾಡುವವರು ಅದನ್ನು ಹಾಳುಗೆಡವುವದನ್ನು ಕಾಣುತ್ತಿದ್ದೇವೆ, ಸಾಮಾನ್ಯ ಜನರಿಂದಲೇ ಜಾತ್ಯಾತೀತತೆ ಉಳಿದಿದೆ ಎಂದು ತರೀಕೆರೆ ಅಭಿಪ್ರಾಯಪಟ್ಟರು.

ಭಾರತದ ಸಂಗೀತ ಕ್ಷೇತ್ರ ಬಹುತ್ವವನ್ನು ಒಳಗೊಂಡ ಕ್ಷೇತ್ರ. ನಮ್ಮ ಹಾಡುಗಾರರು ಧರ್ಮದ ಎಲ್ಲೆಯನ್ನು ಮೀರಿ ಹಾಡಿದರು. ಅಮೀರ್ ಖುಸ್ರೋ ಭಾರತೀಯ ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಭಾರತದ ಘರಾನಾಗಳ ಪರಂಪರೆಯ ಇತಿಹಾಸ ತೆಗೆದು ನೋಡಿದರೆ ಅಲ್ಲಿ ಹಿಂದೂ ಮುಸ್ಲಿಂ ಹಿನ್ನೆಲೆಯ ಗುರು ಶಿಷ್ಯ ಪರಂಪರೆಯನ್ನು ಕಾಣುತ್ತೇವೆ. ಧರ್ಮದ ಮಿತಿ ಮೀರಿದರೆ ದೊಡ್ಡ ಸಾಹಿತಿಯಾಗಲು ಸಾಧ್ಯವೇ ಇಲ್ಲ. ರಾಮನ ಬಗ್ಗೆ ಇಕ್ಬಾಲ್ ಬರೆದದ್ದು ಇದಕ್ಕೆ ಉದಾಹರಣೆ. ಆದರೆ ಇಕ್ಬಾಲ್ ಬರೆದ ರಾಮ ಈಗಿನ ಬಿಲ್ಲು ಬಾಣ ಹಿಡಿದು ನಿಂತ ರಾಮನಲ್ಲ, ಆ ರಾಮ ಮಾನವೀಯ ನೆಲೆಯ ರಾಮ ಎಂದರು. ಈಗ ಎಲ್ಲ ಧರ್ಮದವರಲ್ಲೂ ಪಾವಿತ್ರತೆಯ ಹುಚ್ಚು ಕಾಣುತ್ತಿದೆ. ಭಾರತದ ಸಂಸ್ಕೃತಿ ಅದು ಮಿಶ್ರ ಸಂಸ್ಕೃತಿ, ಅದರಲ್ಲಿ ಎಲ್ಲವೂ ಅಡವಾಗಿವೆ. ದುರಂತವೆಂದರೆ ಮೂಲಭೂತವಾದದತ್ತ ಎಲ್ಲ ಧರ್ಮಗಳು ಸಾಗುತ್ತಿರುವುದು ಅಪಾಯದ ಸಂಗತಿಯಾಗಿದೆ ಎಂದರು.

"ಕೋಮುವಾದ ಮತು ಸಾಂಸ್ಕೃತಿಕ ಅಪಾಯಗಳು"

ಮಹಿಳಾ ಹೋರಾಟಗಾರರಾದ ಸಿರಿಮನೆ ಮಲ್ಲಿಗೆ ಮಾತನಾಡಿ, ಭಾರತ ದೇಶದಲ್ಲಿ ಕೋಮುವಾದದ ಹಿನ್ನಲೆಯಲ್ಲಿ ನಡೆದ ಬಾಂಗ್ಲ, ಪಾಕಿಸ್ಥಾನ ವಿಭಜನೆಯ ಸಂದರ್ಭದಲ್ಲಿ ಉಂಟಾದ ಸಾಂಸ್ಕೃತಿಕ ಅಪಾಯಗಳನ್ನು ವಿವರಿಸಿದರು.

ನಂತರ ಬಾಬರಿ ಮಸೀದಿ ಧ್ವಂಸ ಹಾಗೂ ಗುಜರಾತ್ ಗಲಭೆಗಳ ನರಕ ದೃಶ್ಯವನ್ನು ಸಭಿಕರಿಗೆ ಕಟ್ಟಿಕೊಟ್ಟರು. ಆ ಸಂದರ್ಭದಲ್ಲೆಲ್ಲ ಈ ದೇಶದ ಸಾಂಸ್ಕೃತಿಕ ವೈವಿಧ್ಯತೆ ಯಾವ ದಾಳಿಯಿಂದಲೂ ನಾಶವಾಗದು ಎಂಬ ಆಶಾವಾದ ದೇಶದ ಪ್ರಗತಿಪರ ಚಿಂತಕರದ್ದಾಗಿತ್ತು. ಆದರೆ ಅದೀಗ ಇಡೀ ದೇಶವನ್ನೇ ವ್ಯಾಪಿಸಿರುವುದನ್ನು ನಾವೆಲ್ಲ ಆತಂಕದಿಂದ ನೋಡುವಂತಾಗಿದೆ ಎಂದರು.

ಮೊದಲು ನಿರ್ದಿಷ್ಟ ಪ್ರದೇಶ ನಿರ್ದಿಷ್ಟ ಸಮುದಾಯಗಳ ಮೇಲೆ ದಾಳಿ ನಡೆಯುತ್ತಿತ್ತು. ಆದರೆ ಅದು ಈಗ ಇಡೀ ದೇಶವನ್ನು ವ್ಯಾಪಿಸಿದೆ ಏಕರೂಪಿ ಸಂಸ್ಕೃತಿಯನ್ನು ಬಹುತ್ವದ ಸಂಸ್ಕೃತಿಯ ಮೇಲೆ ಒತ್ತಾಯವಾಗಿ ಹೇರಲಾಗುತ್ತಿದೆ. ಒಂದು ವೇಳೆ ಅಂತಹ ಏಕರೂಪಿ ಸಂಸ್ಕೃತಿಯ ವಿರುದ್ಧ ಮಾತನಾಡಿದರೆ ಅವರಿಗೆ ದೇಶದ್ರೋಹಿ ಪಟ್ಟ ಕಟ್ಟಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ವಿಶೇಷವಾಗಿ ಮಹಿಳೆಯ ವಿಚಾರದಲ್ಲಿ ಕೂಡ ಏಕರೂಪಿ ಸಂಸ್ಕೃತಿಯನ್ನು ಹೇರುವ ಪ್ರಯತ್ನ ಯುದ್ಧದೋಪಾದಿಯಲ್ಲಿ ನಡೆಯುತ್ತಿದೆ. ಅತ್ಯಾಚಾರ ನಡೆದರೆ ಆಕೆ ಹಾಕುವ ಬಟ್ಟೆಗಳೇ ಕಾರಣ ಎಂದು ಬಿಂಬಿಸಲಾಗುತ್ತಿದೆ. ಹೆಣ್ಣೆಂದರೆ ಸಂಸ್ಕೃತಿಯ ಪ್ರತೀಕ ಎನ್ನುವ ಜನರೇ ಮುಸ್ಲಿಂ ಯುವತಿಯರು ಬುರ್ಖಾ ಧರಿಸಿ ಕಾಲೇಜುಗಳಿಗೆ ಬಂದರೆ ಅದನ್ನು ವಿರೋಧಿಸುವ ಮೂಲಕ ಅವರನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಪ್ರಯತ್ನಗಳು ನಡೆದಿವೆ.

ದೃಶ್ಯ ಮಾಧ್ಯಮಗಳ ಮೂಲಕ ಕೂಡ ಏಕರೂಪಿ ಸಂಸ್ಕೃತಿಯನ್ನು ಹೇರುವ ಪ್ರಯತ್ನ ನಿರಾತಂಕವಾಗಿ ಸಾಗಿದ್ದು, ಇಂದು ಎಲ್ಲರೂ ಗೃಹಪ್ರವೇಶಗಳಿಗೆ ಹಸುವನ್ನು ನುಗ್ಗಿಸಿಯೇ ಗೃಹಪ್ರವೇಶ ಮಾಡುವ ಆಚರಣೆ ರೂಢಿಯಾಗುತ್ತಿದೆ. ದೀಪಾವಳಿಯಂತಹ ಹಬ್ಬಗಳನ್ನು ಟಿವಿಯಲ್ಲಿ ಕೂತ ಜ್ಯೋತಿಷಿಗಳ ಮೂಲಕ ಏಕಸಂಸ್ಕೃತಿಯ ಆಚರಣೆ ಮಾಡುವಂತೆ ಹುರಿದುಂಬಿಸುವಂತಹ ಪ್ರಯತ್ನ ಸಾಗಿದೆ. ಜ್ಯೋತಿಷ್ಯ ವಾಸ್ತುಗಳ ಮೂಲಕ ಮಹಿಳೆಯರು ಮೌಢ್ಯದತ್ತ ಸಾಗುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಗೋಷ್ಠಿಗಳಿಗೆ ಸತ್ಯಬಾಬು, ಮಾಳಮ್ಮ, ಜಂಬಯ್ಯ ನಾಯಕ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ವಕೀಲರಾದ ಕೋಟೇಶ್ವರ್‌ರಾವ್, ಮಲ್ಲಿಕಾರ್ಜುನ ರೆಡ್ಡಿ, ಪತ್ರಕರ್ತ ಯಾಳ್ಪ ವಲೀಭಾಷಾ, ಎಚ್. ಅಂಜಿನಪ್ಪ, ಕವಿಯತ್ರಿ ಈರಮ್ಮ, ಕರುಣಾನಿಧಿ, ವಂಸತ ಕಲಾಲ್ ಕಾರ್ಯಕ್ರಮ ನಿರ್ವಹಿಸಿದರು. ಸಮಾವೇಶವನ್ನು ಸಮಾಜನ ವಿಜ್ಞನ ವೇದಿಕೆ. ಟಿಪ್ಪು ಸುಲ್ತಾನ ಅಭಿಮಾನಿಗಳ ವೇದಿಕೆ. ಡಿಎಸ್ಎಸ್ (ಸಾಗರ ಬಣ), ಯುವ ಜಾಗೃತಿ ವೇದಿಕೆ. ಭಾರತ ವಿದ್ಯಾರ್ಥಿ ಫೇಡರೇಷನ್, ಸಮುದಾಯ ಸಂಘಟನೆಗಳು ಜಂಟಿಯಾಗಿ ಹಮ್ಮಿಕೊಂಡಿದ್ದವು.

ವರದಿ: ಪಿ.ಆರ್. ವೆಂಕಟೇಶ್
ಬಳ್ಳಾರಿ

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಜಾನುವಾರು ಆರ್ಥಿಕತೆ

ಕೃಷಿ ಮತ್ತು ತತ್ಸಂಬಂಧಿ ವಲಯದ ಒಟ್ಟು ವರಮಾನದಲ್ಲಿ ಜಾನುವಾರು ಆರ್ಥಿಕತೆಯ ಪಾಲು ಶೇ 18.56. ಈಗ ರೂ. 25,496 ಕೋಟಿ ವರಮಾನದ ಜಾನುವಾರು ಮಾರುಕಟ್ಟೆ ಕುಸಿದರೆ ಅದು ನಮ್ಮ ರೈತಾಪಿ ಜನರ ಬದುಕನ್ನು ಮೂರಾಬಟ್ಟೆ ಮಾಡಿಬಿಡುತ್ತದೆ. ನಮ್ಮ ಸಮಾಜದಲ್ಲಿ ಯಾವುದು ಸಮಸ್ಯೆಯಾಗಿಲ್ಲವೋ ಅವುಗಳನ್ನು ಸಮಸ್ಯೆಯನ್ನಾಗಿ ಮಾಡುತ್ತಿರುವ ಇಂದಿನ ಸರ್ಕಾರವು ಬಡತನವನ್ನು ನಿವಾರಿಸುವುದಕ್ಕೆ ಪ್ರತಿಯಾಗಿ ಬಡವರನ್ನು ನಾಶ ಮಾಡುವ ದಿಶೆಯಲ್ಲಿ ಹೊರಟಿರುವಂತೆ ಕಾಣುತ್ತಿದೆ. ನಿಜಕ್ಕೂ ಸರ್ಕಾರಕ್ಕೆ ಜಾನುವಾರುಗಳ ರಕ್ಷಣೆಯು ಪವಿತ್ರವಾದ ಕೆಲಸವಾಗಿದ್ದರೆ ಅದು ಪ್ರತಿ ಆಕಳಿಗೂ ತಿಂಗಳಿಗೆ ಸಾವಿರ ರೂಪಾಯಿ ಸಹಾಯಧನವನ್ನು ಏಕೆ ನೀಡಬಾರದು?

ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಜಾನುವಾರು ಮಾರುಕಟ್ಟೆ ನಿಯಂತ್ರಣ ಶಾಸನವು ದೇಶದ ರೈತಾಪಿ ವರ್ಗದಲ್ಲಿ ಆತಂಕವನ್ನು ಸೃಷ್ಟಿಸಿದೆ. ಈ ಶಾಸನಕ್ಕೆ ಸಂಬಂಧಿಸಿದಂತೆ ಸರ್ಕಾರದ ಕೋಮು ಉದ್ದೇಶ ಏನೇ ಇರಲಿ, ಮಾಂಸದ ರಫ್ತು ವ್ಯಾಪಾರಕ್ಕೆ ಧಕ್ಕೆ ಉಂಟಾಗುತ್ತದೆ. ಅದು ನಮ್ಮ ಗ್ರಾಮೀಣ ರೈತಾಪಿ ವರ್ಗದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಮಾಂಸದ ರಫ್ತು ವ್ಯಾಪಾರದ ಮೇಲೆ ಉಂಟಾಗುವ ಪರಿಣಾಮಕ್ಕಿಂತ ಮುಖ್ಯವಾಗಿ ಜಾನುವಾರು ಆರ್ಥಿಕತೆಯ ಮೇಲೆ ಆ ಮೂಲಕ ರೈತಾಪಿ ವರ್ಗದ ಮೇಲೆ ಉಂಟಾಗಲಿರುವ ಪರಿಣಾಮ ಅಘಾತಕಾರಿಯಾಗಿದೆ.

ಕರ್ನಾಟಕದಲ್ಲಿ ಸದ್ಯ ಆಕಳುಗಳ ಸಂಖ್ಯೆ 95 ಲಕ್ಷವಾದರೆ ಎಮ್ಮೆಗಳ ಸಂಖ್ಯೆ 34 ಲಕ್ಷ. ಒಟ್ಟು ಜಾನುವಾರುಗಳಲ್ಲಿ ಇವುಗಳ ಪ್ರಮಾಣ ಕ್ರಮವಾಗಿ ಶೇ. 22.47 ಮತ್ತು ಶೇ. 11.97. ನಮ್ಮ ರಾಜ್ಯದ 2016–17ರ ಒಟ್ಟು ವರಮಾನ ರೂ. 10.03 ಲಕ್ಷ ಕೋಟಿ. ಇದರಲ್ಲಿ ಕೃಷಿ ಮತ್ತು ತತ್ಸಂಬಂದಿ ವಲಯದ ವರಮಾನ ರೂ. 1.21 ಲಕ್ಷ ಕೋಟಿ. ನಮ್ಮ ರಾಜ್ಯದಲ್ಲಿ 2016–17ರ ಜಾನುವಾರು ಆರ್ಥಿಕತೆ–ಯ ವರಮಾನ ರೂ. 22,543 ಕೋಟಿ. ಕೃಷಿ ಮತ್ತು ತತ್ಸಂಬಂಧಿ ವಲಯದ ಒಟ್ಟು ವರಮಾನದಲ್ಲಿ ಜಾನುವಾರು ಆರ್ಥಿಕತೆಯ ಪಾಲು ಶೇ 18.56. (ಕರ್ನಾಟಕ ಆರ್ಥಿಕ ಸಮೀಕ್ಷೆ 2016–17, ಪುಟಗಳು: 34–37). ರಾಷ್ಟ್ರಮಟ್ಟದಲ್ಲಿ ಕೃಷಿಯ ಒಟ್ಟು ಉತ್ಪನ್ನದಲ್ಲಿ ಜಾನುವಾರು ಆರ್ಥಿಕತೆಯ ಕಾಣಿಕೆ ಶೇ. 25ರಷ್ಟಿದೆ. ಈ ಆರ್ಥಿಕತೆಯ 2010–11ರಲ್ಲಿನ ಒಟ್ಟು ಉತ್ಪತ್ತಿ ರೂ. 3.41 ಲಕ್ಷ ಕೋಟಿ. ಜಾನುವಾರುಗಳನ್ನು ನೈಸರ್ಗಿಕ ಬಂಡವಾಳ ಎಂದು ಕರೆಯಲಾಗಿದೆ. ಬಂಡವಾಳ ಹೂಡಿಕೆಗೆ ಜಾನುವಾರುಗಳು ಜನ್ಮ ನೀಡುವ ಕರುಗಳು ಬಡ್ಡಿಯಿದ್ದಂತೆ. ಆದರೆ ದನಗಾಹಿಗಳು ಗೋವುಗಳನ್ನು ಮಾರಾಟ ಮಾಡದೆ ಎಷ್ಟು ಕರುಗಳನ್ನು ಸಾಕಿಕೊಂಡಿರಬಹುದು?



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಇದರಿಂದ ನಮ್ಮ ರಾಜ್ಯದಲ್ಲಿ ರೈತಾಪಿ ವರ್ಗದ ಬದುಕಿನಲ್ಲಿ ಜಾನುವಾರುಗಳ ಮಹತ್ವ ಎಷ್ಟು ಎಂಬುದು ತಿಳಿಯುತ್ತದೆ. ಆದರೆ ಈಗ ಕೇಂದ್ರ ತಂದಿರುವ ಜಾನುವಾರು ಮಾರುಕಟ್ಟೆ ನಿಯಂತ್ರಣ ಶಾಸನದಿಂದ ತೀವ್ರ ತೊಂದರೆಗೆ ಒಳಗಾಗುವವರು ರೈತಾಪಿ ಮಂದಿ. ಒಂದಲ್ಲ ಒಂದು ರೀತಿಯಲ್ಲಿ ಇದು ಹೈನುಗಾರಿಕೆ ಉದ್ಯೋಗದಲ್ಲಿ ನಿರತರಾಗಿರುವ ರೈತರ ವರಮಾನವಾಗಿದೆ. ಈ ಜಾನುವಾರು ಆರ್ಥಿಕತೆಯು ಬಿಕ್ಕಟ್ಟಿಗೆ ಒಳಗಾದರೆ ನಮ್ಮ ಸಣ್ಣ, ಅತಿ ಸಣ್ಣ ಕೃಷಿಕರಿಗೆ ಅಪಾರ ನಷ್ಟವಾಗುತ್ತದೆ. ಈಗ ಕೇಂದ್ರ ಸರ್ಕಾರ ತಂದಿರುವ ಜಾನುವಾರು ಮಾರುಕಟ್ಟೆ ನಿಯಮಗಳ ಅಧಿಸೂಚನೆಯು ಖಂಡಿತವಾಗಿ ಜಾನುವಾರು ಮಾರುಕಟ್ಟೆಯನ್ನು ಅಸ್ತವ್ಯಸ್ತಗೊಳಿಸುತ್ತದೆ. ಅದನ್ನು ಅವಲಂಬಿಸಿಕೊಂಡಿರುವವರ ಬದುಕು ಮೂರಾಬಟ್ಟೆಯಾಗುತ್ತದೆ. ಈಗಾಗಲೆ ರೈತಾಪಿ ಜನರು ಬರದಿಂದ, ವರಮಾನದ ಕುಸಿತದಿಂದ, ಬೆಲೆಗಳ ಅನಿಶ್ಚಿತತೆಯಿಂದ, ಹವಾಮಾನದ ವೈಪರೀತ್ಯದಿಂದ ಹೈರಾಣವಾಗಿದ್ದಾರೆ. ಈಗ ಈ ಅಧಿಸೂಚನೆಯು ಅವರನ್ನು ಮತ್ತಷ್ಟು ಸಂಕಷ್ಟಗಳಿಗೆ ಒಳಪಡಿಸುತ್ತದೆ.

ಆಕಳು ಸಾಕಣೆಗೆ ಸಬ್ಸಿಡಿ ಕೊಡಲಿ

ಜಾನುವಾರು ಮಾರುಕಟ್ಟೆ ನಿಯಮಗಳ ಅಧಿಸೂಚನೆಯು ಅನೇಕ ರೀತಿಯಲ್ಲಿ ಜಾನುವಾರು ಆರ್ಥಿಕತೆಯನ್ನು ನಾಶಗೊಳಿಸುತ್ತದೆ. ಉದಾಹರಣೆಗೆ ಜಾನುವಾರು ಮಾರುಕಟ್ಟೆಯಲ್ಲಿ ಕಟುಕರಿಗೆ ಮಾರಾಟ ಮಾಡುವುದಿಲ್ಲ ಅಂತ ಮಾರಾಟಗಾರರು ಮತ್ತು ಖರೀದಿಗಾರರು ಮುಚ್ಚಳಿಕೆ ಬರೆದು ಕೊಡಬೇಕು. ಇವೆಲ್ಲವೂ ಮಾರುಕಟ್ಟೆಯನ್ನುನಾಶಮಾಡುವ ಕ್ರಮಗಳಾಗಿವೆ. ಕೇಂದ್ರ ಸರ್ಕಾರವು 'ಕನಿಷ್ಠ ಸರ್ಕಾರ; ಗರಿಷ್ಠ ಪರಿಪಾಲನೆ' ಎಂದ ಘೋಷಣೆ ಮೇಲೆ ಅಧಿಕಾರಕ್ಕೆ ಬಂದು ಈಗ ಜನರ ಆಹಾರದ ಮೇಲೆ, ರೈತಾಪಿಗಳ ವರಮಾನದ ಮೇಲೆ, ಜಾನುವಾರುಗಳ ಮಾರಾಟದ ಮೇಲೆ – ಪ್ರತಿಯೊಂದರ ಮೇಲೂ ತನ್ನ ನಿಯಂತ್ರಣ ಸ್ಥಾಪಿಸಲು ಪ್ರಯತ್ನ ನಡೆಸುತ್ತಿದೆ. ಸರ್ಕಾರ ಗರಿಷ್ಠವಾಗುತ್ತಿದೆ. ತಾನು ಹಾಕಿಕೊಂಡಿರುವ ನಿಯಮಕ್ಕೆ ವಿರುದ್ಧವಾಗಿ ಅದು ನಡೆದುಕೊಳ್ಳುತ್ತಿದೆ. ಇದು ಅಭಿವೃದ್ಧಿಯನ್ನು ಆದ್ಯತೆ ಮಾಡಿಕೊಂಡಿರುವ ಸರ್ಕಾರದ ಮಾತುಗಳಾಗುವುದು ಸಾಧ್ಯವಿಲ್ಲ. ಅದರ ಮತ್ತೊಂದು ಘೋಷಣೆಯಾದ 'ಸಬ್ ಕಾ ಸಾತ್; ಸಬ್ ಕಾ ವಿಕಾಸ್' ಅನ್ನುವುದು ಸಹ ಕೇವಲ ಪೊಳ್ಳು ಘೋಷಣೆಯಾಗುತ್ತಿದೆ.

ನಮ್ಮ ಸಮಾಜದಲ್ಲಿ ಜಾನುವಾರು ಆರ್ಥಿಕತೆಯಲ್ಲಿನ ಹೈನುಗಾರಿಕೆಯು ಮುಕ್ಕಾಲು ಮೂರು ವೀಸೆ ಪಾಲು ಮಹಿಳೆಯರದ್ದಾಗಿದೆ. ಹೈನುಗಾರಿಕೆ ಅನ್ನುವುದು ಬರಗಾಲದ ವಿರುದ್ಧ ವಿಮೆಯಾಗಿದೆ. ಹಾಲು, ಬೆಣ್ಣೆ, ಮೊಸರು, ಕುಳ್ಳು ಮಾರಾಟ ಮಾಡಿ ಲಕ್ಷಾಂತರ ಮಹಿಳೆಯರು ಕುಟುಂಬವನ್ನು ನಡೆಸಲು ಅಗತ್ಯವಾದ ವರಮಾನ ಗಳಿಸುತ್ತಿದ್ದಾರೆ. ಈಗಾಗಲೆ ರಾಜ್ಯದ ಒಟ್ಟು ವರಮಾನದಲ್ಲಿ ಕೃಷಿಯ ಪಾಲು ನಿಕೃಷ್ಟವಾಗುತ್ತಿದೆ. ಈಗ ರೂ. 25,496 ಕೋಟಿ ವರಮಾನದ ಜಾನುವಾರು ಮಾರುಕಟ್ಟೆ ಕುಸಿದರೆ ಅದು ನಮ್ಮ ರೈತಾಪಿ ಜನರ ಬದುಕನ್ನು ಮೂರಾಬಟ್ಟೆ ಮಾಡಿಬಿಡುತ್ತದೆ. ನಮ್ಮ ಸಮಾಜದಲ್ಲಿ ಯಾವುದು ಸಮಸ್ಯೆಯಾಗಿಲ್ಲವೋ ಅವುಗಳನ್ನು ಸಮಸ್ಯೆಯನ್ನಾಗಿ ಮಾಡುತ್ತಿರುವ ಇಂದಿನ ಸರ್ಕಾರವು ಬಡತನವನ್ನು ನಿವಾರಿಸುವುದಕ್ಕೆ ಪ್ರತಿಯಾಗಿ ಬಡವರನ್ನು ನಾಶ ಮಾಡುವ ದಿಶೆಯಲ್ಲಿ ಹೊರಟಿರುವಂತೆ ಕಾಣುತ್ತಿದೆ. ನಿಜಕ್ಕೂ ಸರ್ಕಾರಕ್ಕೆ ಜಾನುವಾರುಗಳ ರಕ್ಷಣೆಯು ಪವಿತ್ರವಾದ ಕೆಲಸವಾಗಿದ್ದರೆ ಅದು ಪ್ರತಿ ಆಕಳಿಗೂ ತಿಂಗಳಿಗೆ ಸಾವಿರ ರೂಪಾಯಿ ಸಹಾಯಧನವನ್ನು ಏಕೆ ನೀಡಬಾರದು?

ಖಾಸಗಿ ಉದ್ದಿಮೆಗಳ ಲಕ್ಷಾಂತರ ಕೋಟಿ ವಸೂಲಾಗದ ಸಾಲವನ್ನು ಮನ್ನಾ ಮಾಡುವುದಾದರೆ ನಮ್ಮ ಸಮಾಜದಲ್ಲಿರುವ ಪ್ರತಿ ಆಕಳಿಗೂ ಸಬ್ಸಿಡಿ ನೀಡುವ ನೀತಿಯನ್ನು ಜಾರಿಗೆ ತರಬಹುದು. ಉದ್ದಿಮೆಯ ಮೇಲೆ ಗೋತೆರಿಗೆ ವಿಧಿಸಬಹುದು. ಗ್ರಾಮೀಣ ರೈತಾಪಿಗಳ ಮೇಲೆ ಸದರಿ ಶಾಸನವು ಅಪ್ರತ್ಯಕ್ಷ ತೆರಿಗೆ ರೀತಿಯ ಪರಿಣಾಮ ಉಂಟು ಮಾಡುತ್ತದೆ. ನಗರ ಪ್ರದೇಶದಲ್ಲಿನ ನೌಕರಶಾಹಿ, ವ್ಯಾಪಾರಿ–ವಣಿಕ ಸಮಾಜದ ಮೇಲೆ ಇದರ ಹೊರೆಯನ್ನು ಹೇರಬಹುದು. ಇದಕ್ಕೆ ಸರ್ಕಾರ ತಯಾರಿದ್ದಂತೆ ಕಾಣುತ್ತಿಲ್ಲ. ಗೋರಕ್ಷಣೆ–ಯ ಬಗ್ಗೆ ಅಬ್ಬರಿಸುತ್ತಿರುವ ಜನರು ಮತ್ತು ಸರ್ಕಾರ ಗೋಪೋಷಣೆ–ಗೋಅಭಿವೃದ್ಧಿ ಬಗ್ಗೆ ಮಾತನಾಡುತ್ತಿಲ್ಲ. ಯಾವುದನ್ನು ನಾವು ಆಷಾಢಭೂತಿತನ ಎಂದು ಕರೆಯುತ್ತೇವೆಯೋ ಅದಕ್ಕೆ ಇಲ್ಲಿದೆ ಅಸಲು ನಿದರ್ಶನ!. ಒಂದು ಅಧ್ಯಯನದ ಪ್ರಕಾರ ಹಾಲು ಕೊಡುವುದು ನಿಂತ ವಯಸ್ಸಾದ ಹಸುಗಳನ್ನು ಸಾಕಲು ತಲಾ ಪ್ರತಿದಿನ ರೂ. 65 ಖರ್ಚಾಗುತ್ತದೆ. ಗೋರಕ್ಷಣೆ ಬಗ್ಗೆ ಕಾಳಜಿ ಇರುವುದಾದರೆ ಸರ್ಕಾರವು ಗೋವು ಸಾಕುವವರಿಗೆ ಸಬ್ಸಿಡಿ ನೀಡುವ ಬಗ್ಗೆ ಯೋಚಿಸಬೇಕು. ನಮ್ಮ ಕೃಷಿ ವಲಯದ ಸ್ವರೂಪ ಬದಲಾಗುತ್ತಿದೆ. ಬೆಳೆಗಳನ್ನು ಬೆಳೆಯುವ ಕೃಷಿಗಿಂತ ಹೈನು ಉದ್ದಿಮೆ ಅಗ್ರ ಸ್ಥಾನ ಪಡೆದುಕೊಳ್ಳುತ್ತಿದೆ. ಈ ಹೈನು ಉದ್ದಿಮೆಗೆ ಈಗ ದಕ್ಕೆ ಉಂಟಾಗಿದೆ.

ಯಾವುದು ಫ್ಯಾಷನ್ನು?

ಇತ್ತೀಚಿಗೆ ರೈತರ ಕಷ್ಟಕಾರ್ಪಣ್ಯಗಳಿಗೆ ರಾಜ್ಯ ಸರ್ಕಾರಗಳು ಸ್ಪಂದಿಸಿ ಸಾಲ ಮನ್ನಾ ಮಾಡುವ ಕ್ರಮ ತೆಗೆದುಕೊಳ್ಳುತ್ತಿದ್ದರೆ ಕೇಂದ್ರ ಹಣಕಾಸು ಮಂತ್ರಿಯವರು ಸಾಲ ಮನ್ನಾಕ್ರಮಕ್ಕೆ ಸಂಬಂಧಿಸಿದಂತೆ ಒಂದು ನಯಾಪೈಸೆ ನೆರವನ್ನು ಕೇಂದ್ರ ರಾಜ್ಯಗಳಿಗೆ ನೀಡುವುದಿಲ್ಲ ಎಂದು ಹೇಳಿದ್ದರೆ ಮತ್ತೊಬ್ಬ ಕೇಂದ್ರ ಮಂತ್ರಿ ಸಾಲ ಮನ್ನಾ ಅನ್ನುವುದು ಫ್ಯಾಷನ್ನಾಗಿ ಬಿಟ್ಟಿದೆ ಎಂಬ ನುಡಿಮುತ್ತನ್ನು ಉದುರಿಸಿದ್ದಾರೆ. ಸಾಲಮನ್ನಾ ಫ್ಯಾಷನ್ನಾದರೆ ಜಾನುವಾರು ರಾಜ–ಕಾರಣ ಏನು ಎಂಬ ಪ್ರಶ್ನೆಯನ್ನು ಇಲ್ಲಿ ಕೇಳಬೇಕಾಗುತ್ತದೆ. ಗೋರಕ್ಷಕರು ಆಕಳ ಹೆಸರಿನಲ್ಲಿ ಜನರನ್ನು ಹತ್ಯೆ ಮಾಡುತ್ತಿರುವುದು ಫ್ಯಾಷನ್ನಲ್ಲವೆ!! ಬಡತನ ನಿವಾರಣೆಯ ಬಗ್ಗೆ ಮಾತನ್ನಾಡುವುದಕ್ಕೂ ಸಿದ್ಧವಿಲ್ಲದ ಜನರು ಜಾನುವಾರು ಮಾರುಕಟ್ಟೆಯನ್ನು ಹಾಳು ಮಾಡಲು ಹೊರಟ್ಟಿದ್ದಾರೆ.

ಗೋಸೇವೆಯೋ ಗೋರಕ್ಷಣೆಯೋ!!

ಮಹಾತ್ಮ ಗಾಂಧೀಜಿಯನ್ನು ಮತ್ತು ಅವರ ವಿಚಾರಗಳನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನ ಮಾಡುತ್ತಾ ದುರುಪಯೋಗ ಪಡಿಸಿಕೊಳ್ಳುತ್ತಿರುವ ಜನರು ತಿಳಿದುಕೊಳ್ಳಬೇಕಾದುದೇನೆಂದರೆ ಗಾಂಧೀಜಿ ಗೋವು ರಾಜಕಾರಣ ವಿಚಾರದಲ್ಲಿ ಗೋಸೇವೆ ಎಂಬ ಪರಿಭಾವನೆಯನ್ನು ರೂಢಿಗೆ ತಂದರು. ಗೋರಕ್ಷಣೆ ಎಂಬುದರ ಬಗ್ಗೆ ಅವರಿಗೆ ನಂಬಿಕೆ ಇರಲಿಲ್ಲ ಅಥವಾ ಗೋರಕ್ಷಣೆ ಹೆಸರಿನಲ್ಲಿ ಜನರನ್ನು ಹತ್ಯೆ ಮಾಡುವುದನ್ನು ಅವರು ಒಪ್ಪಲಿಲ್ಲ. ಜನರು ಗೋವಿಗಾಗಿ ಜನರನ್ನು ಕೊಲ್ಲುವುದುರ ವಿರುದ್ಧ ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಗೋಸೇವೆ ಮತ್ತು ಗೋಪೋಷಣೆ ಅವರ ಪ್ರತಿಪಾದಿಸಿದ ವಿಚಾರ. ಇಂದು ಗೋಸೇವೆಯಾಗಲಿ ಅಥವಾ ಗೋಪೋಷಣೆಯಾಗಲಿ ಮುಖ್ಯವಾಗಿಲ್ಲ. ಗೋರಕ್ಷಣೆ ಅನ್ನುವುದು ಅಲ್ಪಸಂಖ್ಯಾತರ ವಿರುದ್ಧದ ರಾಜಕಾರಣವಾಗಿಬಿಟ್ಟಿದೆ. ಮುಸ್ಲಿಮರನ್ನು ಕೊಲ್ಲುವುದರಿಂದ ಗೋವುಗಳನ್ನು ರಕ್ಷಿಸುವುದು ಸಾಧ್ಯವಿಲ್ಲ. ನಮ್ಮ ಸಮಾಜದಲ್ಲಿ ಬಹುಸಂಖ್ಯಾತರು ಗೋವುಗಳ ಮಾಲೀಕರಾಗಿದ್ದಾರೆ. ಅವರು ಗೋವುಗಳನ್ನು ಮಾರಾಟ ಮಾಡುವುದನ್ನು ನಿಲ್ಲಿಸಿದರೆ ಗೋವುಗಳನ್ನು ಮಾಂಸಕ್ಕಾಗಿ ಕಡಿಯುವ ಪ್ರಮೇಯ ಬರುವುದಿಲ್ಲ. ಜಾನುವಾರುಗಳ ಮಾಲೀಕರು ಅವುಗಳನ್ನು ಮಾರಾಟ ಮಾಡದಿರುವುದು ಅಸಾಧ್ಯ. ರಸ್ತೆಗಳಲ್ಲಿ ಅನಾಥವಾಗಿ ತಿರುಗಾಡುವ ಹಸುಗಳ ಮೈಮುಟ್ಟಿ ನಮಸ್ಕಾರ ಮಾಡಿಕೊಂಡರೆ ಅವುಗಳ ರಕ್ಷಣೆ ಮಾಡಿದಂತಲ್ಲ. ಅವುಗಳ ಶೋಷಣೆಯನ್ನು ನಿಲ್ಲಿಸಿ ಪೋಷಣೆಗೆ ಬಹುಸಂಖ್ಯಾತರು ಮುಂದಾಗಬೇಕು. ಬಹುಸಂಖ್ಯಾತರಲ್ಲಿ ಜಾನುವಾರು ಆರ್ಥಿಕತೆಯನ್ನು ಅವಲಂಬಿಸಿಕೊಂಡಿರುವವರು ಅತಿಸಣ್ಣ ಮತ್ತು ಸಣ್ಣ ಹಿಡುವಳಿದಾರರು.

ಧರ್ಮ, ವ್ಯಾಪಾರ ಮತ್ತು ರಾಜಕಾರಣ ಏಕತ್ರಗೊಂಡಾಗ!!

ಧರ್ಮ ಮತ್ತು ರಾಜಕಾರಣಗಳ ನಡುವಿನ ಸಂಬಂಧದ ಬಗ್ಗೆ ಟೀಕೆ ಮಾಡಲಾಗುತ್ತಿತ್ತು. ಇದೊಂದು ಅಪವಿತ್ರ ಸಂಬಂಧ ಎಂದು ಹೇಳಲಾಗುತ್ತಿತ್ತು. ಆದರೆ ಇಂದು ಧರ್ಮ ಮತ್ತು ರಾಜಕಾರಣಗಳ ಜೊತೆಗೆ ವ್ಯಾಪಾರ–ವಾಣಿಜ್ಯಗಳು ಸೇರಿಕೊಂಡಿವೆ. ಧಾರ್ಮಿಕ ಆಚರಣೆ, ಸಂಪ್ರದಾಯಗಳನ್ನು ವ್ಯಾಪಾರದ ಸಾಧನಗಳಾಗಿ ಬಳಸಿಕೊಳ್ಳುವುದು ವ್ಯಾಪಕವಾಗಿ ಬೆಳೆಯುತ್ತಿದೆ. ಉದಾಹರಣೆಗೆ ಚಿನ್ನಬೆಳ್ಳಿ ವ್ಯಾಪಾರಿಗಳು ಅಕ್ಷಯ ತೃತಿಯ ದಿನದಂದು ಚಿನ್ನ ಕೊಂಡರೆ ಅದೃಷ್ಟ ಎಂದು ಹೇಳುತ್ತಾ ಮುಗ್ಧ ಜನರನ್ನು ತಮ್ಮತ್ತ ಸೆಳೆಯುತ್ತಿದ್ದಾರೆ. ಸಾಧುಸಂತರ ಸಂಸ್ಥೆಗಳು ಕಾರ್ಪೋರೇಟ್ ಸ್ವರೂಪ ಪಡೆದುಕೊಳ್ಳುತ್ತಿವೆ. ಮಹರ್ಷಿಗಳು, ಗುರೂಜಿಗಳು, ಸಾಧುಗಳು, ಸಂತರು ಸಾವಿರಾರು ಕೋಟಿ ಬಂಡವಾಳಿಗಳಾಗಿದ್ದಾರೆ. ಗೋರಕ್ಷಣೆಯ ರಾಜಕಾರಣವೂ ಇದೇ ಬಗೆಯ ಏಕತ್ರ ಪ್ರಣಾಳಿಕೆಗೆ ಒಂದು ನಿದರ್ಶನವಾಗಿದೆ. ಈ ಎಲ್ಲ ಅರ್ಭಟಗಳು, ಅಬ್ಬರಗಳು, ಗೋವಿನ ಹೆಸರಿನಲ್ಲಿ ಅಲ್ಪಸಂಖ್ಯಾತರ ಹತ್ಯೆಗಳು – ಇವೆಲ್ಲವುಗಳ ನಡುವೆ ಗಾಂಧೀಜಿ ಹೇಳುತ್ತಿದ್ದ ಗೋಸುಧಾರಣೆ, ಗೋಪೋಷಣೆ, ಜಾನುವಾರು ಅಭಿವೃದ್ಧಿ ಮೂಲೆಗುಂಪಾಗಿಬಿಟ್ಟಿವೆ. ಈ ಎಲ್ಲ ಆಟಾಟೋಪಗಳ ನಡುವೆ ಸಂಕಷ್ಟಕ್ಕೆ ದುಸ್ಥಿತಿಗೆ ಒಳಗಾಗುತ್ತಿರುವವರು ಬಡವರು, ಅಂಚಿನಲ್ಲಿರುವವರು ಮತ್ತು ಭೂಹೀನರು. ಈ ಬಗೆ–ಯ ಅಪವಿತ್ರ ಸಂಬಂಧಕ್ಕೆ ಕೊನೆ ಹೇಳಬೇಕಾದರೆ, ಗೋವುಗಳ ಹೆಸರಿನಲ್ಲಿ ನಡೆಯುತ್ತಿರುವ ಹತ್ಯೆಗಳಿಗೆ ಕೊನೆ ಹಾಡಬೇಕೆಂದರೆ ಜನರು ಜಾಗೃತರಾಗಬೇಕು ಮತ್ತು ಸಂಘಟಿತರಾಗಬೇಕು. ●

ಮೋದಿಯವರು ಮೂರು ಬಾರಿ ಟ್ರಂಪ್ ಅವರನ್ನು ಅಪ್ಪಿಕೊಳ್ಳುವ ಡಾಂಭಿಕ ಪ್ರಯತ್ನಗಳನ್ನು ನಡೆಸಿದರೂ, ಭೇಟಿಯ ಕೊನೆಯಲ್ಲಿ ಪ್ರಕಟಿಸಿದ ಜಂಟಿ ಹೇಳಿಕೆ ಮಾತ್ರ ಅಮೆರಿಕದ ಕಾಳಜಿಗಳಿಗೇ ಆದ್ಯತೆ ನೀಡಿ ಭಾರತದ ಹಿತಗಳನ್ನು ಬುದ್ಧಿ ಪೂರ್ವಕವಾಗಿ ಉಪೇಕ್ಷಿಸಿರುವುದನ್ನು ತೋರಿಸುತ್ತದೆ. ಇದೇನೂ ಅನಿರೀಕ್ಷಿತವಲ್ಲ. ಆದರೆ ಮೋದಿ ಸರಕಾರಕ್ಕೆ ಇತರ ದೇಶಗಳ ಮೇಲೆ ದಾಳಿ ಮಾಡಲು ತನ್ನ ಪ್ರದೇಶವನ್ನು ಬಳಸಿಕೊಳ್ಳುವುದಿಲ್ಲ ಎಂದು ಪಾಕಿಸ್ತಾನ ಖಾತರಿಪಡಿಸಬೇಕು ಎಂದು ತಾಕೀತು ಮಾಡಿರುವುದೇ ಬಡಾಯಿಯ ಸಂಗತಿ.





ಪ್ರಕಾಶ ಕಾರಟ್

ಟ್ರಂಪ್ ನಾಡಿನಲ್ಲಿ ಮೋದಿ ಅದೇ ಅಡಿಯಾಳು ಪಾತ್ರ

ಅಮೆರಿಕಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ಐದನೇ ಭೇಟಿ ಹಾಗೂ ಆ ದೇಶದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆಗಿನ ಮೊದಲ ಅಧಿಕೃತ ಭೇಟಿಯು ಭಾರತ–ಅಮೆರಿಕ ವ್ಯೂಹಾತ್ಮಕ ಸಂಬಂಧದಲ್ಲಿ ಭಾರತದ ಅಧೀನ ಪಾತ್ರವನ್ನು ದೃಢಪಡಿಸಿದೆ.

ಶ್ವೇತಭವನಕ್ಕೆ ಮೋದಿ ಭೇಟಿಯನ್ನು ಭಾರತದ ಆಡಳಿತ ವ್ಯವಸ್ಥೆಯಲ್ಲಿ ಕೆಲವು ಅನುಮಾನಗಳೊಂದಿಗೆ ನೋಡಲಾಗುತ್ತಿತ್ತು. ಟ್ರಂಪ್ ಅನೇಕ ವಿಚಾರಗಳಲ್ಲಿ ಭಾರತದ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುವಂಥ ಮುಂದೇನಾಗಬಹುದು ಎಂದು ಊಹಿಸಲಾಗದ ಮತ್ತು ನಕಾರಾತ್ಮಕ ಧೋರಣೆಗಳನ್ನು ತಳೆದಿದ್ದೇ ಇಂಥ ಸಂಶಯಗಳು ಮೂಡಲು ಕಾರಣ. ಹವಾಮಾನ ಬದಲಾವಣೆ ಕುರಿತ ಪ್ಯಾರಿಸ್ ಒಪ್ಪಂದ ಕುರಿತು ಭಾರತದ ನಿಲವಿನ ಬಗ್ಗೆ ಟ್ರಂಪ್ ಟೀಕೆ, ಎಚ್1 ಬಿ ವೀಸಾ ಮೇಲಿನ ನಿರ್ಬಂಧ ಮತ್ತು ಭಾರತದಂಥ ದೇಶಗಳಿಗೆ ಅಮೆರಿಕದಿಂದ ಉದ್ಯೋಗಗಳ ರಫ್ತಿಗೆ ನಿಷೇಧ ಹೇರಲು ಒತ್ತು ನೀಡಿರುವುದು ಇವೇ ಮೊದಲಾದ ಮಗ್ಗುಲ ಮುಳ್ಳುಗಳನ್ನು ತಪ್ಪಿಸಬೇಕಾಗಿತ್ತು.

ಇಂತಹ ಸನ್ನಿವೇಶದಲ್ಲಿ ಅಮೆರಿಕಾದ ಹಿತಾಸಕ್ತಿಗಳಿಗೆ ಅನುಕೂಲ ಮಾಡಿಕೊಡಲು ಎಷ್ಟು ಬೇಕಾದರೂ ಮಣಿಯುವ ಧೋರಣೆಯನ್ನು ಮೋದಿ ಸರಕಾರ ತಳೆದಿದೆ. ಅಮೆರಿಕ ಭೇಟಿಯ ಕೊನೆಯಲ್ಲಿ ಹೊರಡಿಸಲಾದ ಜಂಟಿ ಹೇಳಿಕೆಯಲ್ಲಿ ಇದರ ಛಾಯೆ ದಟ್ಟವಾಗಿದೆ.

ರಕ್ಷಣೆ ಮತ್ತು ಭದ್ರತೆ ಸಹಕಾರವನ್ನು ಇನ್ನೂ ಆಳಗೊಳಿಸಲು ಪ್ರತಿಜ್ಞೆ ಮಾಡಲಾಗಿದೆ. ಭಾರತಕ್ಕೆ ಹೆಚ್ಚು ಶಸ್ತ್ರಾಸ್ತ್ರ ಮತ್ತು ರಕ್ಷಣಾ ಉಪಕರಣಗಳನ್ನು ಮಾರಾಟ ಮಾಡುವುದು ಭಾರತ–ಅಮೆರಿಕ ಮಿಲಿಟರಿ ಸಹಯೋಗದ ಒಂದು ಪ್ರಮುಖ ಗುರಿ. ಸಹಜವಾಗಿಯೇ ಇದು ಅಮೆರಿಕದ ಹಿತಾಸಕ್ತಿ. ಇದ–ಕ್ಕೆ ಅನುಗುಣವಾಗಿ ಜಂಟಿ ಹೇಳಿಕೆ ಸಾಗರ ರಕ್ಷಕ ಮಾನವರಹಿತ ವೈಮಾನಿಕ ವ್ಯವಸ್ಥೆಯಾದ ವೈಮಾನಿಕ ಡ್ರೋನ್‌ಗಳನ್ನು ಎರಡು ಬಿಲಿಯ ಡಾಲರ್ ವೆಚ್ಚದಲ್ಲಿ ಭಾರತ ಖರೀದಿಸಲಿದೆ ಎಂದು ಘೋಷಿಸಿದೆ.

ಅಮೆರಿಕದಿಂದ ಶಸ್ತ್ರಾಸ್ತ್ರ ಖರೀದಿ ಪ್ರಮಾಣ ಹೆಚ್ಚಳಕ್ಕೆ ಅಮೆರಿಕದ ಶಸ್ತ್ರಾಸ್ತ್ರ ಕಂಪೆನಿಗಳು ಮತ್ತು ಭಾರತದ ಖಾಸಗಿ ಕಂಪೆನಿಗಳ ನಡುವಿನ ಜಂಟಿ ಉದ್ದಿಮೆಗಳು ಇನ್ನಷ್ಟು ಪುಷ್ಟಿ ನೀಡುತ್ತವೆ. ಅಮೆರಿಕದ ಅತಿ ದೊಡ್ಡ ಶಸ್ತ್ರಾಸ್ತ್ರ ತಯಾರಿಕೆ ಕಂಪೆನಿಯಾದ ಲಾಕ್‌ಹೀಡ್ ಮಾರ್ಟಿನ್, ಭಾರತದಲ್ಲಿ ಎಫ್ 16 ಫೈಟರ್ ಯುದ್ಧ ವಿಮಾನಗಳನ್ನು ನಿರ್ಮಿಸುವುದಕ್ಕೆ ಸಂಬಂಧಿಸಿ ಟಾಟಾ ಗುಂಪಿನ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ. ಮುಂಬರುವ ಜುಲೈ ತಿಂಗಳ ಮಲಬಾರ್ ಜಂಟಿ ನೌಕಾ ಪಡೆ ಕವಾಯತಿನ ಬಗ್ಗೆಯೂ ಜಂಟಿ ಘೋಷಣೆಯಲ್ಲಿ ಪ್ರಸ್ತಾವಿಸಲಾಗಿದೆ. ಈ ಕವಾಯತಿನಲ್ಲಿ ಭರತ ಮತ್ತು ಅಮೆರಿಕದ ನೌಕೆಗಳಲ್ಲದೆ ಜಪಾನ್ ನೌಕಾಪಡೆಯ ನೌಕೆಗಳೂ ಭಾಗವಹಿಸಲಿವೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಹಿಂದೂ ಮಹಾಸಾಗರ ಮತ್ತು ಶಾಂತ ಸಾಗರ ವಲಯದಲ್ಲಿ ಅಮೆರಿಕಕ್ಕೆ ಬೆಂಬಲವಾಗಿ ವ್ಯೂಹಾತ್ಮಕ ಗುರಿಗಳನ್ನು ಈಗಾಗಲೇ ನಿಗದಿಪಡಿಸಲಾಗಿದ್ದು ಇದೀಗ ತಮ್ಮ ಸಹಭಾಗಿತ್ವವು ಏಷ್ಯಾ ಶಾಂತಸಾಗರ ವಲಯದಲ್ಲಿ 'ಜವಾಬ್ದಾರಿಯುತ ನಾಯಕತ್ವವಾಗಿದೆ' ಎಂದು ಉಭಯ ನಾಯಕರು ವರ್ಣಿಸಿದ್ದಾರೆ. ಜಂಟಿ ಹೇಳಿಕೆಯು ದಕ್ಷಿಣ ಚೀನಾ ಸಮುದ್ರ ಕುರಿತಂತೆ 'ಈ ಪ್ರದೇಶದಾದ್ಯಂತ ನೌಕೆಗಳ ಸಂಚಾರ, ವಿಮಾನ ಹಾರಾಟ ಮತ್ತು ವಾಣಿಜ್ಯದ ಸ್ವಾತಂತ್ರ್ಯವನ್ನು ಗೌರವಿಸುವುದು ಅಗತ್ಯ' ಎಂಬ ಧೋರಣೆಯನ್ನು ಪುನರುಚ್ಚರಿಸಿದೆ.ಈ ಮೂಲಕ 'ಚೀನಾದ ವಿರುದ್ಧ ಅಮೆರಿಕ ಜೊತೆ ಕೈಜೋಡಿಸಲು ತಾನು ಸಿದ್ಧ ಎಂದು ಮೋದಿ ಹಸಿರು ನಿಶಾನೆ ತೋರಿಸಿದಂತಾಗಿದೆ.

ಡಿಪಿಆರ್‌ಕೆ (ಅಂದರೆ ಉತ್ತರ ಕೊರಿಯಾ)ಯ ಮುಂದುವರಿದ ಪ್ರಚೋದನೆಗಳನ್ನು ಜಂಟಿ ಹೇಳಿಕೆ ಖಂಡಿಸಿದ್ದು ಇದು ಉತ್ತರ ಕೊರಿಯಾ ಕುರಿತ ಪ್ರಸಕ್ತ ಟ್ರಂಪ್ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. 'ಡಿಪಿಆರ್‌ಕೆಯ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರ ಕಾರ್ಯಕ್ರಮವನ್ನು ಎದುರಿಸಲು ಒಟ್ಟಾಗಿ ಕಾರ್ಯನಿರ್ವಹಿಸಲು ಸಿದ್ಧ,' ಈ ಕಾರ್ಯಕ್ರಮವನ್ನು ಬೆಂಬಲಿಸುವ ಎಲ್ಲರನ್ನೂ ಹೊಣೆ ಯಾಗಿಸಲೂ ಭಾರತ ಬದ್ಧ ಎಂಬುದಾಗಿ ಇದೇ ಮೊದಲ ಬಾರಿಗೆ ಹೇಳಲಾಗಿದೆ. ಡಿಪಿಆರ್‌ಕೆ ವಿರುದ್ಧ ಭಾರತ ಇಂಥ ಸಕ್ರಿಯ ನಿಲವು ತಳೆದಿದ್ದು ಇದೇ ಮೊದಲ ಸಲವಾಗಿದೆ.

ಅಮೆರಿಕದೊಳಗೆ ಸಾಕಷ್ಟು ಉದ್ಯೋಗಾವಕಾಶ ಸೃಷ್ಟಿಯಾಗುವಂತೆ ನೋಡಿಕೊಳ್ಳಲು ಭಾರತ ಶ್ರಮಿಸುತ್ತದೆ ಎಂದು ಟ್ರಂಪ್‌ಗೆ ಭಾರೀ ಭರವಸೆ ನೀಡಲು ಮೋದಿಯವರು ಸರ್ವಪ್ರಯತ್ನ ಮಾಡಿರುವಂತೆ ಕಾಣುತ್ತದೆ. ಬೋಯಿಂಗ್‌ನಿಂದ 100 ಪ್ರಯಾಣಿಕ ವಿಮಾನಗಳನ್ನು ಖರೀದಿಸುವುದಾಗಿ ಭಾರತ ಘೋಷಿಸಿರುವುದನ್ನು ಟ್ರಂಪ್ ಸ್ವಾಗತಿಸಿದ್ದಾರೆ. ಅಮೆರಿಕದಲ್ಲಿ ಉದ್ಯೋಗಗಳನ್ನು ಸೃಷ್ಟಿಸಲು ಇದು ನೆರವಾಗುತ್ತದೆ ಎಂದವರು ಹೇಳಿದ್ದಾರೆ. ಆರು ಪರಮಾಣು ಸ್ಥಾವರ ಸ್ಥಾಪನೆಗಾಗಿ ವೆಸ್ಟಿಂಗ್‌ಹೌಸ್ ಎಲೆಕ್ಟ್ರಿಕ್ ಕಂಪೆನಿ ಮತ್ತು ಭಾರತೀಯ ಅಣುಶಕ್ತಿ ನಿಗಮ ನಡುವೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆಯೂ ಜಂಟಿ ಹೇಳಿಕೆ ಪ್ರಸ್ತಾವಿಸಿದೆ. ವೆಸ್ಟಿಂಗ್‌ಹೌಸ್ ದಿವಾಳಿಯಾಗಿರುವುದಾಗಿ ಇತ್ತೀಚೆಗೆ ಘೋಷಿಸಿದೆ. ಪರಮಾಣು ಯೋಜನೆಯನ್ನು ನಿಜವಾಗಿಯೂ ಮುಂದುವರಿಸುವ ಬಗ್ಗೆ ವೆಸ್ಟಿಂಗ್‌ಹೌಸ್ ಮತ್ತು ಅದರ ಮಾಲಿಕ ತೋಷಿಬಾಗೇ ಖಾತರಿ ಇಲ್ಲದಿರುವ ಸಮಯದಲ್ಲಿ ಆ ಕಂಪನಿಯ ಪುನರುಜ್ಜೀವನಕ್ಕೆ ಭಾರತೀಯ ತೆರಿಗೆದಾರರ ಹಣವನ್ನು ಖರ್ಚು ಮಾಡಲು ಮೋದಿ ಸರಕಾರ ನಿರ್ಧರಿಸಿದೆ.

ಟ್ರಂಪ್ ಆಡಳಿತ ಹೇಗಾದರೂ ತನ್ನ ದೇಶದ ಮಾರುಕಟ್ಟೆಯನ್ನು ಕಾಯ್ದುಕೊಳ್ಳುವ ನಿಲುವು ತಳೆದಿದ್ದರೂ ಜಂಟಿ ಹೇಳಿಕೆ ಮುಕ್ತ ಮತ್ತು ನ್ಯಾಯಸಮ್ಮತ ವಾಣಿಜ್ಯ ನೀತಿಗಳನ್ನು ರಕ್ಷಿಸುವ ಗೋಸುಂಬೆತನದ ಮಾತುಗಳನ್ನು ಆಡಿದೆ. ಉಭಯ ದೇಶಗಳ ನಡವಿನ ವಾಣಿಜ್ಯ ಸಂಬಂಧಗಳ ಬಗೆಗೆ ಒಂದು ಸಮಗ್ರ ಪರಾಮರ್ಶೆ ನಡೆಸಬೇಕೆಂಬ ಪ್ರಸ್ತಾವನೆಯ ಹಿಂದೆ ಅಪಶಕುನದ ಛಾಯೆಯಿದೆ. ಭಾರತಕ್ಕೆ ಅಮೆರಿಕದ ವಸ್ತುಗಳನ್ನು ರಫ್ತು ಮಾಡುವುದಕ್ಕೆ ಇರುವ ನಿರ್ಬಂಧಗಳನ್ನು ತೆಗೆದು ಹಾಕಬೇಕು ಮತ್ತು ವಾಣಿಜ್ಯ ಕೊರತೆಯನ್ನು ತಗ್ಗಿಸಬೇಕು ಎಂದು ಮಾತುಕತೆ ವೇಳೆ ಮೋದಿಗೆ ಟ್ರಂಪ್ ಹೇಳಿರುವ ಹಿನ್ನೆಲೆಯಲ್ಲಿ ಇದನ್ನು ಗಮನಿಸಬೇಕಾಗುತ್ತದೆ. ತಂತ್ರಜ್ಞಾನ ಮತ್ತು ಸಂಶೋಧನೆಗಳ ರಕ್ಷಣೆಗೆ ಕ್ರಮಗಳು ಅಂದರೆ ಬೌದ್ಧಿಕ ಆಸ್ತಿ ಹಕ್ಕುಗಳ ಕಟ್ಟುನಿಟ್ಟಿನ ಅನ್ವಯ, ಕೃಷಿ, ಮಾಹಿತಿ ತಂತ್ರಜ್ಞಾನ ಮತ್ತು ಸಿದ್ಧ ವಸ್ತುಗಳು ಹಾಗೂ ಸೇವೆಗಳು ಮೊದಲಾದ ಕ್ಷೇತ್ರಗಳಿಗೆ ಹೆಚ್ಚೆಚ್ಚು ಅವಕಾಶ ತೆರೆಯುವುದು ಇವೇ ಮೊದಲಾದವನ್ನು ಈ ಮರುಪರಿಶೀಲನೆ ಒಳಗೊಂಡಿರುತ್ತದೆ. ಅಮೆರಿಕಾಕ್ಕೆ ಭಾರತೀಯ ಮಾರುಕಟ್ಟೆಯನ್ನು ತೆರೆದು ಕೊಡಲು ಹೆಚ್ಚೆಚ್ಚು ಪ್ರಯತ್ನಗಳನ್ನು ನಡೆಸಲಾಗುವುದು ಎಂದೇ ಇದರ ಅರ್ಥ.

ಸರಕು ಉತ್ಪಾದನೆ ಮತ್ತು ತಂತ್ರಜ್ಞಾನ ಹೂಡಿಕೆ ಮೂಲಕ 'ಮೇಕ್ ಇನ್ ಇಂಡಿಯಾ'ವನ್ನು ಪ್ರೋತ್ಸಾಹಿಸಲು ಭಾರತಕ್ಕೆ ಅಮೆರಿಕ ಹೇಗೆ ನೆರವಾಗಬಲ್ಲದು ಎಂಬುದರ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಭಾರತದ ಹವಾಮಾನ ಬದಲಾವಣೆ ಒಡಂಬಡಿಕೆಗಳ ಬದ್ಧತೆಯನ್ನು ಪೂರ್ಣಗೊಳಿಸಲು ಅಮೆರಿಕವು ಭಾರತಕ್ಕೆ ಅಮೆರಿಕ ಹೇಗೆ ಸಹಾಯ ಮಾಡುತ್ತದೆ ಎನ್ನುವ ಬಗ್ಗೆ ಜಂಟಿ ಘೋಷಣೆ ಚಕಾರವೆತ್ತಿಲ್ಲ. ಭಾರತೀಯ ಉದ್ಯೋಗಿಗಳಿಗೆ ಎಚ್1ಬಿ ವೀಸಾ ಮುಂದುವರಿಸುವ ವಿಚಾರದಲ್ಲಿ ಯಾವುದೇ ಆಶ್ವಾಸನೆ ನೀಡಿಲ್ಲ.

ಮೋದಿ ಸರಕಾರ ಜಂಟಿ ಹೇಳಿಕೆಗೆ ಸಂಬಂಧಿಸಿ ಬಡಾಯಿ ಕೊಚ್ಚಿಕೊಳ್ಳಬಹುದಾದ ಏಕೈಕ ಫಲಶ್ರುತಿಯೆಂದರೆ, ಇತರ ದೇಶಗಳ ಮೇಲೆ ದಾಳಿ ಮಾಡಲು ತನ್ನ ಪ್ರದೇಶವನ್ನು ಬಳಸಿಕೊಳ್ಳುವುದಿಲ್ಲ ಎಂದು ಪಾಕಿಸ್ತಾನ ಖಾತರಿಪಡಿಸಬೇಕು ಎಂದು ತಾಕೀತು ಮಾಡಿರುವುದು. ಈ ಹಿಂದೆ ಅಧ್ಯಕ್ಷ ಬರಾಕ್ ಒಬಾಮಾರೊಂದಿಗೆ ಮಾಡಿದ್ದ ಜಂಟಿ ಘೋಷಣೆಗಳಲ್ಲಿ ಮುಂಬಯಿ ಮತ್ತು ಇತರ ಭಯೋತ್ಪಾದಕ ಆಕ್ರಮಣಗಳನ್ನು ನಡೆಸಿದವರನ್ನು ಪಾಕಿಸ್ತಾನ ಶಿಕ್ಷಿಸಿ ನ್ಯಾಯ ಒದಗಿಸಬೇಕು ಎಂದು ಕರೆ ನೀಡಲಾಗಿತ್ತು. ಅದಕ್ಕೆ ಈಗ ಇದನ್ನು ಸೇರಿಸಲಾಗಿದೆ. ಏನೇ ಇದ್ದರೂ ಅಫಘಾನಿಸ್ತಾನದಲ್ಲಿನ ಕ್ಲಿಷ್ಟ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಪಾಕಿಸ್ತಾನ ಒಂದು ಪ್ರಮುಖ ಪಾತ್ರಧಾರಿ ಎಂಬ ಅಭಿಪ್ರಾಯವನ್ನು ಟ್ರಂಪ್ ಆಡಳಿತ ಮುಂದುವರಿಸಿದೆ.

ಪರಸ್ಪರ ಎದುರಾದಾಗ ಮೋದಿಯವರು ಟ್ರಂಪ್ ಅವರನ್ನು ಅಪ್ಪಿಕೊಳ್ಳುವ ಡಾಂಭಿಕ ಪ್ರಯತ್ನಗಳನ್ನು ನಡೆಸಿದರೂ, ಜಂಟಿ ಹೇಳಿಕೆಯಂತೂ ಅಮೆರಿಕದ ಕಾಳಜಿಗಳಿಗೇ ಆದ್ಯತೆ ನೀಡಿ ಭಾರತದ ಹಿತಗಳನ್ನು ಬುದ್ಧಿ ಪೂರ್ವಕವಾಗಿ ಉಪೇಕ್ಷಿಸಿರುವುದನ್ನು ತೋರಿಸುತ್ತದೆ. ಇದು ನಿರೀಕ್ಷಿತವೇ.

ಅನು: ವಿಶ್ವ

ರಾಷ್ಟ್ರಪತಿ ಚುನಾವಣೆಯಲ್ಲಿ ಪ್ರತಿಪಕ್ಷಗಳ ಅಭ್ಯರ್ಥಿಯಾಗಿ ಮೀರಾ ಕುಮಾರ್ ನಾಮಪತ್ರ ಇದು 'ದಲಿತvsದಲಿತ ' ಪ್ರಶ್ನೆಯಲ್ಲ, ಭಾರತೀಯ ಗಣತಂತ್ರದ ಉಳಿವಿನ ಪ್ರಶ್ನೆ–ಯೆಚುರಿ

17 ಪ್ರತಿಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಶ್ರೀಮತಿ ಮೀರಾ ಕುಮಾರ್ ಅವರು ಜೂನ್ 28ರಂದು ರಾಷ್ಟ್ರಪತಿ ಹುದ್ದೆಯ ಚುನಾವಣೆಯಲ್ಲಿ ತಮ್ಮ ನಾಮಪತ್ರ ಸಲ್ಲಿಸಿದ್ದಾರೆ ಎಂಬುದನ್ನು ಪಕ್ರಟಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಇದು ಒಂದು 'ದಲಿತ' vs ದಲಿತ' ಪ್ರಶ್ನೆಯಲ್ಲ, ಇದು ಭಾರತೀಯ ಗಣತಂತ್ರವನ್ನು ಕಾಯ್ದುಕೊಳ್ಳುವ ನಮ್ಮ ಹೋರಾಟ ಎಂದು ಹೇಳಿದ್ದಾರೆ.

ಆ ಕಡೆಯಲ್ಲಿ ಇರುವುದು ಭಾರತೀಯ ಗಣ–ತಂತ್ರದ ಮತ್ತು ನಮ್ಮ ಮೂಲಭೂತ ಮೌಲ್ಯಗಳ ಬುನಾದಿಯನ್ನು ಧ್ವಂಸ ಮಾಡಲು ಹೊರಟಿರುವ ಪಕ್ಷಗಳು ಬೆಂಬಲಿಸಿರುವ ಒಬ್ಬ ಅಭ್ಯರ್ಥಿ. ಬಡಿದು ಸಾಯಿಸುವ ಜನಜಂಗುಳಿ ಹೆಚ್ಚುತ್ತಿರುವುದು ಮತ್ತು ವಿಶೇಷವಾಗಿ ದಮನಕ್ಕೊಳಗಾಗಿರುವ ವಿಭಾಗಗಳ ಜನಗಳ ಮೇಲೆ, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಲ್ಲೆಗಳು ಇಂತಹ ಜನಜಂಗುಳಿಯ ಹಿಂಸಾಚಾರಕ್ಕೆ ಪ್ರಭುತ್ವದ ಬೆಂಬಲವನ್ನು ಸೂಚಿಸುತ್ತದೆ.

ಭಾರತೀಯ ಸಂವಿಧಾನದ ಮೇಲೆ ಈ ದಾಳಿಗೆ, ದ್ವೇಷದ ರಾಜಕಾರಣವನ್ನು ಹುಟ್ಟು ಹಾಕಿದ ನಂತರ, ಮತ್ತು ಈಗ ಉನ್ನತ ಮುಖಂಡರಿಂದ, ವಿಶೇಷವಾಗಿ ಪ್ರಧಾನ ಮಂತ್ರಿಗಳ ಮೌನದಿಂದ, ಎಲ್ಲ ನಾಗರಿಕರಿಗೆ ಸಮಾನತೆಯ ಮೂಲಭೂತ ಹಕ್ಕನ್ನು ಉಲ್ಲಂಘಿಸಲು ದೊರೆಯುತ್ತಿರುವ ನೆರವು ಮತ್ತು ಕುಮ್ಮಕ್ಕಿಗಿಂತ ದೊಡ್ಡ ಸಾಕ್ಷ್ಯ ಬೇಕಿಲ್ಲ ಎಂದಿರುವ ಸೀತಾರಾಮ್ ಯೆಚುರಿಯವರು ಭಾರತದ ಉಳಿವಿಗೆ, ಮತ್ತು ಅದನ್ನು ಬಲಪಡಿಸಬೇಕಾದರೆ ಎಲ್ಲ ದೇಶಪ್ರೇಮಿ ಭಾರತೀಯರು ಈ ಹೋರಾಟವನ್ನು ನಡೆಸಬೇಕಾಗಿದೆ ಎಂದಿದ್ದಾರೆ.



“ಸಂವಿಧಾನದ ಆಶಯಗಳನ್ನು ಅನುಷ್ಠಾನಕ್ಕೆ ತರುವುದೇ ನಿಜವಾದ ರಾಷ್ಟ್ರೀಯತೆ ದೊಡ್ಡ ಧ್ವಜ ಹಾರಿಸುವುದಲ್ಲ”: ಸುಭಾಷಿಣಿ ಅಲಿ

ಜನವಾದಿ ಮಹಿಳಾ ಸಂಘಟನೆ ನಗರದ ಗಾಂಧಿ ಭವನದಲ್ಲಿ ಜೂನ್ 29 ರಂದು ಆಯೋಜಿಸಿದ್ದ ‘ರಾಷ್ಟ್ರೀಯತೆ– ಭಾರತವೆಂಬ ಪರಿಕಲ್ಪನೆ’ ವಿಚಾರ ಸಂಕಿರಣದ ವರದಿ



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಮತ್ತು ಸಿಪಿಐ(ಎಂ) ಪೊಲಿಟ್ ಬ್ಯು ರೋ ಸದಸ್ಯರೂ ಆಗಿರುವ ಕಾ. ಸುಭಾಷಿಣಿ ಅಲಿ, ‘ಸಂವಿಧಾನದ ಆಶಯಗಳನ್ನು ಅನುಷ್ಠಾನಕ್ಕೆ ತರುವುದೇ ನಿಜವಾದ ರಾಷ್ಟ್ರೀಯತೆ. ಧ್ವಜ ಹಾರಿಸುವುದು, ಹಿಂಸೆ ಪ್ರಚೋದಿಸುವ ಭಾಷಣ ಮಾಡುವುದು, ಕ್ರೀಡಾತಂಡ ಬೆಂಬಲಿಸುವುದು, ಆಹಾರದ ಆಯ್ಕೆಯಲ್ಲಿ ನಿರ್ಬಂಧ ಹೇರುವುದು, ಹಸು ಪೂಜಿಸುವುದು ಮತ್ತು ಧರ್ಮ ಪ್ರಚಾರ ಮಾಡುವುದು ರಾಷ್ಟ್ರೀಯತೆ ಅಲ್ಲ’ ಎಂದು



‘ಸಂವಿಧಾನದ ಆಶಯಗಳನ್ನು ಅನುಷ್ಠಾನಕ್ಕೆ ತರುವುದೇ ನಿಜವಾದ ರಾಷ್ಟ್ರೀಯತೆ. ಧ್ವಜ ಹಾರಿಸುವುದು, ಹಿಂಸೆ ಪ್ರಚೋದಿಸುವ ಭಾಷಣ ಮಾಡುವುದು, ಕ್ರೀಡಾತಂಡ ಬೆಂಬಲಿಸುವುದು, ಆಹಾರದ ಆಯ್ಕೆಯಲ್ಲಿ ನಿರ್ಬಂಧ ಹೇರುವುದು, ಹಸು ಪೂಜಿಸುವುದು ಮತ್ತು ಧರ್ಮ ಪ್ರಚಾರ ಮಾಡುವುದು ರಾಷ್ಟ್ರೀಯತೆ ಅಲ್ಲ’

– ಸುಭಾಷಿಣಿ ಅಲಿ

ಹೇಳಿದರು. ಅವರು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ನಗರದ ಗಾಂಧಿ ಭವನದಲ್ಲಿ ಜೂನ್ 29ರಂದು ಆಯೋಜಿಸಿದ್ದ ‘ರಾಷ್ಟ್ರೀಯತೆ– ಭಾರತವೆಂಬ ಪರಿಕಲ್ಪನೆ’ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಗಾಂಧಿ ಭವನದ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಜೂನ್ 30ರಿಂದ ಜುಲೈ 2 ರವರೆಗೆ ನಡೆಯಲಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕೇಂದ್ರೀಯ ಕಾರ್ಯಕಾರಿ ಸಮಿತಿಯ 3 ದಿನಗಳ ಸಭೆಗೆ ಅವರು ಬೆಂಗಳೂರಿಗೆ ಆಗಮಿಸಿದ್ದರು.

“ನಾನೊಬ್ಬ ರಾಷ್ಟ್ರವಾದಿ ಅಲ್ಲ”: ಟ್ಯಾಗೋರ್

ರಾಷ್ಟ್ರೀಯತೆ ನಮ್ಮ ಸ್ವಾತಂತ್ರ್ಯ ಚಳುವಳಿಯಲ್ಲಿ ಹೊಮ್ಮಿದ ಪರಿಕಲ್ಪನೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಹಲವು ತೊರೆಗಳ ನಾಯಕರು ಚಿಂತಕರು ಈ ಪರಿಕಲ್ಪನೆಯನ್ನು ಬೆಳೆಸಿದ್ದಾರೆ ಎಂದ ಸುಭಾಷಿಣಿ ಅಲಿ ಅವರು ರಾಷ್ಟ್ರೀಯತೆ ಬಗ್ಗೆ ಟ್ಯಾಗೋರ್, ಗಾಂಧೀಜಿ, ಸುಭಾಸ್ ಚಂದ್ರ ಬೋಸ್, ಡಾ. ಅಂಬೇಡ್ಕರ್ ಅವರ ಚಿಂತನೆಗಳನ್ನು ಸ್ಥೂಲವಾಗಿ ತಿಳಿಸಿದರು. ಟ್ಯಾಗೋರ್ “ನಾನೊಬ್ಬ ರಾಷ್ಟ್ರವಾದಿ ಅಲ್ಲ” ಎಂದು ಘಂಟಾಘೋಷವಾಗಿ ಸಾರಿದ್ದರು. “ದ್ವೇಷ ಸಾಧನೆ ರಾಷ್ಟ್ರೀಯತೆಯ ಲಕ್ಷಣವಲ್ಲ. ಅದು ಯಾವುದೇ ದೇಶ ಅಥವಾ ವ್ಯಕ್ತಿಗೆ ಹಾನಿಯನ್ನುಂಟು ಮಾಡುವುದನ್ನು ಅನುಮತಿಸುವುದಿಲ್ಲ. ಅದು ಉಗ್ರ ಸ್ವರೂಪದ್ದಾಗಲೀ ವಿಧ್ವಂಸಕವಾಗಲೀ ಅಲ್ಲ” ಎಂದು ಗಾಂಧೀಜಿ ಹೇಳುತ್ತಿದ್ದರು. ಹಲವು ಸಾವಿರ ಜಾತಿಗಳಲ್ಲಿ ಹಂಚಿಹೋಗಿರುವ ನಾವು ಒಂದು ರಾಷ್ಟ್ರವಾಗಿ ಬಾಳಲು ಸಾಧ್ಯವಿದೆಯೇ ಎಂದು ಡಾ. ಅಂಬೇಡ್ಕರ್ ಪ್ರಶ್ನಿಸಿದ್ದರು. ನಾವು ಒಂದು ರಾಷ್ಟ್ರವಾಗಿರಲು ಬಯಸುವುದಾದಲ್ಲಿ, ಮೊದಲು ಜಾತೀಯತೆಯನ್ನು ತೊಲಗಿಸಬೇಕು ಅನ್ನುವುದು ಅವರ ನಿಲುವಾಗಿತ್ತು. ಸುಭಾಷ್ ಚಂದ್ರ ಬೋಸ್ ‘‘ಸ್ವಾತಂತ್ರ್ಯವೆಂದರೆ ಪರಿಪೂರ್ಣ ಸ್ವಾತಂತ್ರ್ಯ; ಪ್ರತಿಯೊಬ್ಬ ವ್ಯಕ್ತಿ ಹಾಗೂ ಆ ಮೂಲಕ ಒಂದು ಸಮಾಜ ಮುಕ್ತಗೊಳ್ಳುವ ಸ್ವಾತಂತ್ರ್ಯ ನಮಗೆ ಬೇಕು ಸಂಪತ್ತಿನ ಸಮಾನ ಹಂಚಿಕೆ, ಜಾತೀಯತೆಯ ನಿರ್ಮೂಲನೆ, ಕೋಮುವಾದ ಹಾಗೂ ಧಾರ್ಮಿಕ ಅಸಹಿಷ್ಣುತೆಯ ಅಂತ್ಯ ಮತ್ತು ಸಾಮಾಜಿಕ ಸಮಾನತೆಯಿಂದಷ್ಟೆ ಇದನ್ನು ಸಾಧಿಸಬಹುದು” ಎಂದು ನುಡಿದಿದ್ದರು. ಈ ರಾಷ್ಟ್ರನಾಯಕರ ಹೇಳಿಕೆಗಳ ಮೂಲಕ ರಾಷ್ಟ್ರೀಯತೆ ಬಗ್ಗೆ ಇದ್ದ ವೈವಿಧ್ಯಮಯ ಪರಿಕಲ್ಪನೆಗಳನ್ನು ಸುಭಾಷಿಣಿ ಅಲಿ ಅವರು ವಿವರಿಸಿದರು.

ಕಮ್ಯುನಿಸ್ಟರು ಸ್ವಾತಂತ್ರ್ಯ ಹೋರಾಟದ ದಿನಗಳಿಂದಲೂ ಸಾಮ್ರಾಜ್ಯಶಾಹಿಯ ಮತ್ತು



ಅವರು ಜಾತಿಯ ಹುಣ್ಣನ್ನು ಕೊಳೆಯಲು ಬಿಟ್ಟು ಧರ್ಮದ ಮುಲಾಮು ಹಚ್ಚುತ್ತಿದ್ದಾರೆ. ಮುಸ್ಲಿಮರನ್ನು ಎದುರು ಭೂತದಂತೆ ಇಟ್ಟು ಕತ್ತಿ ಎತ್ತುವಂತೆ ಮಾಡುತ್ತಿದ್ದಾರೆ. ಇಂದು ಮುಸ್ಲಿಮರನ್ನು ದ್ವೇಷಿಸುವುದೇ ದೇಶಪ್ರೇಮ ಎಂಬಂತಾಗಿದೆ

– ದಿನೇಶ್ ಅಮೀನ್’ಮಟ್ಟು

ಜಾತೀಯತೆಯ ವಿರುದ್ಧ, ಹಾಗೂ ಒಳಗೊಳ್ಳುವ ರಾಷ್ಟ್ರೀಯತೆಯ ಕುರಿತು ಸ್ಪಷ್ಟ ನಿಲುವು ಹೊಂದಿದ್ದರು. ಸ್ವಾತಂತ್ರ್ಯ ಹೋರಾಟದ ಜತೆ ಜತೆಗೇ ಜಾತೀಯತೆ ಹಾಗೂ ಅಸ್ಪೃಶ್ಯತೆಗಳ ವಿರುದ್ಧವೂ ಹೋರಾಟ ನಡೆಸಿದರು. ಸ್ವಾತಂತ್ರ್ಯಕ್ಕೆ ಮುಂಚೆ ಹಾಗೂ ನಂತರದಲ್ಲಿ ಕೂಡ ತಮ್ಮನ್ನು ತಾವು ರಾಷ್ಟ್ರವಾದಿಗಳೆಂದು ಕರೆದುಕೊಳ್ಳುವ ನೇತಾರರನ್ನು ನಿರ್ಭೀತರಾಗಿ ಟೀಕಿಸುತ್ತಿದ್ದರು. ಈ ನೇತಾರರು ಸಾಮ್ರಾಜ್ಯಶಾಹಿ, ಭೂಮಾಲಿಕರು ಹಾಗೂ ಬಂಡವಾಳಶಾಹಿಯೊಡನೆ ರಾಜಿ ಮಾಡಿಕೊಂಡು ತಾವು ಜನತೆಗೆ ವಾಗ್ದಾನ ನೀಡಿದ್ದ ಸಾಮಾಜಿಕ ನ್ಯಾಯದಿಂದ ವಂಚಿಸುತ್ತಿದ್ದಾರೆಂದು ಬೆಟ್ಟು ಮಾಡಿ ತೋರಿಸುತ್ತಿದ್ದರು. ಸ್ವಾತಂತ್ರ್ಯ ಹೋರಾಟದಿಂದ ಹೊಮ್ಮಿದ ರಾಷ್ಟ್ರೀಯತೆಯ ಪ್ರಧಾನ ಆಶಯಗಳಾಗಿದ್ದ ಮತ್ತು ಆ ಮೇಲೆ ಸಂವಿಧಾನದ ಪ್ರದಾನ ಆಶಯಗಳಾದ ಜಾತ್ಯತೀತೆ, ಸಾಮಾಜಿಕ ನ್ಯಾಯ, ಸಮಾನತೆ, ಸೋದರತ್ವ, ಬಹುತ್ವ ಕಾಪಾಡುವ ಐಕ್ಯತೆಗೆ ಕಾಂಗ್ರೆಸ್ ಪಕ್ಷವಾಗಲಿ ಸರಕಾರಗಳಾಗಲಿ ಪೂರ್ಣವಾಗಿ ಬದ್ಧರಾಗಿರಲಿಲ್ಲ. ಜಾತೀಯತೆ, ಪುರುಷ ಪ್ರಧಾನ ಚಿಂತನ– ವಿಧಾನಗಳನ್ನು ಹೋಗಲಾಡಿಸಲು ಬೇಕಾದ ಶಿಕ್ಷಣ, ಚರಿತ್ರೆ ರಚನೆ, ಪರಿಸರದ ನಿರ್ಮಾಣದ ಬಗ್ಗೆ ಅವರು ಏನೂ ಮಾಡಲಿಲ್ಲ. ಏಕೆಂದರೆ ಅವರ ಮುಖ್ಯ ಬದ್ಧತೆ ಇದ್ದಿದ್ದು ಭೂಮಾಲಕ–ಬಂಡವಾಳಶಾಹಿ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಎಂದು ಕಮ್ಯುನಿಸ್ಟರು ತೋರಿಸುತ್ತಾ ಬಂದಿದ್ದಾರೆ. ಅದನ್ನು ಅವರು ರಿನ್ ದಂಗೆ, ಕೋರೇಗಾಂವ್ ಕದನಗಳ ಎರಡು ಉದಾಹರಣೆಗಳ ಮೂಲಕ ವಿವರಿಸಿದರು.

‘ರಿನ್ ದಂಗೆ ‘ಮತ್ತು ‘ಮರಾಠಾ ಯುದ್ಧ’

ಅದನ್ನು 1946ರ ರಿನ್ ದಂಗೆಯಲ್ಲಿ ಕಾಂಗ್ರೆಸ್– ಲೀಗ್ ‘ರಾಷ್ಟ್ರೀಯ ನಾಯಕರ ಧೋರಣೆ” ಉದಾಹರಣೆಯೊಂದಿಗೆ ಕಾ. ಸುಭಾಷಿಣೀ ಅವರು ವಿವರಿಸಿದರು. ಬ್ರಿಟಿಶ್ ಇಂಡಿಯಾದ ಭಾರತೀಯ ನೌಕಾಸೈನಿಕರು ದಂಗೆ ಎದ್ದು ಬ್ರಿಟಿಶರು ತಕ್ಷಣ ದೇಶ ಬಿಟ್ಟು ತೊಲಗಬೇಕೆಂದು ಯುದ್ಧ ಹಡಗುಗಳ ಮೇಲೆ ಕಾಂಗ್ರೆಸ್–ಲೀಗ್–ಕಮ್ಯುನಿಸ್ಟ್ ಬಾವುಟಗಳನ್ನು ಹಾರಿಸಿದಾಗ, ಕಾಂಗ್ರೆಸ್–ಲೀಗ್ ನಾಯಕರು ಅವರನ್ನು ಬ್ರಿಟಿಶ್ ಅಧಿಕಾರಿಗಳಿಗೆ ಶರಣಾಗತರಾಗಲು ಹೇಳುತ್ತಾರೆ. ಕೆಲವು ತಿಂಗಳುಗಳ ನಂತರ ದೇಶ ವಿಭಜನೆಗೆ ಕಿತ್ತಾಡುವ ಕಾಂಗ್ರೆಸ್–ಲೀಗ್ ನಾಯಕರು ಒಗ್ಗಟ್ಟಿನಿಂದ ರಿನ್ ದಂಗೆ ಹತ್ತಿಕ್ಕಲು ಬ್ರಿಟಿಶ್ ಸರಕಾರಕ್ಕೆ ಸಹಾಯ ಮಾಡುತ್ತಾರೆ.

ಅದೇ ರೀತಿ ನಮ್ಮ ಚರಿತ್ರೆಯಲ್ಲಿ ಬಿಂಬಿಸುವಂತೆ 1818ರ “ಕೊನೆಯ ಮರಾಠಾ ಯುದ್ಧ” ಪೇಶ್ವೆ ಮತ್ತು ಬ್ರಿಟಿಶರ ನಡುವಣ ಯುದ್ಧರ ಮಾತ್ರ ಆಗಿರಲಿಲ್ಲ. ಪೇಶ್ವೆಯ ಮೂರರಷ್ಟು ಇದ್ದ ಸೈನ್ಯವನ್ನು ಕೋರೆಗಾಂವ್ ಎಂಬಲ್ಲಿ ಸೋಲಿಸಿದ ಬ್ರಿಟಿಶ್ ಪಡೆ ಮಹಾರ ರೆಜಿಮೆಂಟ್ ದಲಿತ ಜಾತಿಯಾದ ಮಹಾರದ್ದು ಆಗಿತ್ತು. ಪೇಶ್ವೆ ಆಡಳಿತ ಸಂಘ ಪರಿವಾರದ “ಹಿಂದೂ ರಾಷ್ಟ್ರ”ಕ್ಕೆ ಹತ್ತಿರವಿದ್ದು ದಲಿತರು ಅದನ್ನು ಸೋಲಿಸಲು ವೀರಾವೇಶದಿಂದ ಹೋರಾಡಿದ್ದರು. ಈಗಲೂ ಮಹಾರಾಷ್ಟ್ರದ ಮಹಾರ್ ದಲಿತರು ಇದು ತಮ್ಮ ಚರಿತ್ರೆಯ ಉಜ್ವಲ ಅಧ್ಯಾಲಯವೆಂದು ಭಾವಿಸಿದ್ದಾರೆ. ಅದರ ನೆನಪಿನಲ್ಲಿ ಪ್ರತಿ ವರ್ಷ ಲಕ್ಷಕ್ಕೂ ಹೆಚ್ಚು ಜನ ಅಲ್ಲಿ ಸೇರುತ್ತಾ–ರೆ. ಇದನ್ನು ನಮ್ಮ ಚರಿತ್ರೆಯ ಸಂಕಥನಗಳಿಂದ ಅಳಿಸಲಾಗಿದೆ. ಇಂತಹ ಎಷ್ಟೋ ಅಳಿಸಲಾದ ಮರೆತುಹೋದ ಸಂಕಥನಗಳು ಜನತೆಯ ಮಧ್ಯೆ ಜೀವಂತವಾಗಿವೆ.

ರಾಷ್ಟ್ರೀಯತೆ ಅಗಾಧ ಬಹುತ್ವವನ್ನು ಒಳಗೊಳ್ಳದೆ ಇಲ್ಲದೆ ಭಾರತ ಒಂದು ರಾಷ್ಟ ಆಗುವುದು ಸಾಧ್ಯವಿಲ್ಲ. ಆಯಾ ಪ್ರಾಂತ್ಯಕ್ಕೆ ತಕ್ಕಂತೆ ಕೆಲವು ಆಚರಣೆಗಳು, ದೇವ–ದೈವಗಳು, ನಂಬಿಕೆಗಳಿದ್ದು, ಸ್ಥಳೀಯರು ಅವನ್ನು ತಮ್ಮದೇ ಬಗೆಯಲ್ಲಿ ಆಚರಿಸುತ್ತಿದ್ದರು. ಮಹಿಷಾಸುರ ಎಂಬ ಅಸುರನನ್ನು ದುರ್ಗೆ ಕೊಂದ ದಿನದಂದು ಶೋಕಾಚರಣೆಯ ಉತ್ಸವ ಮಾಡುವ ಸಮುದಾಯಗಳು, ರಾಮ–ರಾವಣರ ವಿಷಯದಲ್ಲಿ ರಾವಣ ಪಕ್ಷಪಾತಿಯಾದ ಜನಾಂಗಗಳು ಕೂಡ ಇದ್ದವು. ಕೇರಳದಲ್ಲಿ ವಾಮನನಿಂದ ತುಳಿಯಲ್ಪಟ್ಟ ಬಲಿಮಹಾರಾಜನ ಬಗ್ಗೆ ವಿಶೇಷ ಗೌರವಾದರ ಇರುವುದನ್ನು ನಾವು ನೋಡಬಹುದು. 355 ದಿನ ವಿಷ್ಣುವನ್ನು ಪೂಜಿಸುವ ಕೇರಳದ ಜನರೂ ಓಣಂ ಹಬ್ಬದ ಭಾಗವಾಗಿ 10 ದಿನ ವಿಷ್ಣು ಕೊಂದ ಆದರ್ಶ ರಾಜನಾಗಿದ್ದ ಮಹಾಬಲಿಯ ಭೇಟಿಯನ್ನು ಸ್ವಾಗತಿಸಿ ಸಂಭ್ರಮಿಸುತ್ತಾರೆ. ಎಂದು ಕಾ. ಸುಭಾಷಿಣಿ ಅವರು ಭಾರತದ ಅಗಾಧ ಬಹುತ್ವವನ್ನು ವಿವರಿಸಿದರು.

ಬ್ರಾಹ್ಮಣೀಕರಣ ಮತ್ತು ಮನುವಾದಿ ಆಡಳಿತ

ಆದರೆ ಸಂಘಪರಿವಾರವು ಜನಸಾಮಾನ್ಯರ ಮೇಲೆ ತನ್ನದೇ ವ್ಯಾಖ್ಯಾನದ ರಾಷ್ಟ್ರವಾದವನ್ನು ಹೇರಲು ಯತ್ನಿಸುತ್ತಿದೆ. ಯಾವ ರಾಜಕೀಯ ಪಕ್ಷ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿಯೇ ಇರಲಿಲ್ಲವೋ ಅದು ರಾಷ್ಟ್ರವಾದದ ಬಗ್ಗೆ ಮಾತಾಡುತ್ತದೆ! ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರು ಬ್ರಿಟಿಷರ ವಿರುದ್ಧ ಹೋರಾಡುವ ಕುರಿತು ತಲೆ ಕೆಡಿಸಿಕೊಂಡಿರಲೇ ಇಲ್ಲ. ಬದಲಿಗೆ, ಕ್ರಿಶ್ಚಿಯನ್, ಮುಸ್ಲಿಮ್ ಹಾಗೂ ಕಮ್ಯುನಿಸ್ಟರು ನಮ್ಮ ಆಂತರಿಕ ಶತ್ರುಗಳು ಎಂದು ಪ್ರಚುರಪಡಿಸಿ ಈ ಮೂರು ಸಮುದಾಯದ ವಿರುದ್ಧ ಹೋರಾಡಲು ಸಜ್ಜಾಗುತ್ತಿದ್ದರು. ಸಂಘ ಪರಿವಾರದ ಎರಡನೇ ಸರಸಂಘ ಚಾಲಕ ಗೋಳವಲ್ಕರ್ ಅಂತೂ ಸಂವಿಧಾನದ ವಿರೋಧಿ ನಿಲುವು ಹೊಂದಿದ್ದವರು. ಅವರಿಗೆ ಅಂಬೇಡ್ಕರ್ ರೂಪಿಸಿದ

ಪುಟ 10 ಕ್ಕೆ



“ಹಿಂದೂ ರಾಷ್ಟ್ರ ಮತ್ತು ಜಾತ್ಯತೀತತೆ ಒಟ್ಟಿಗೆ ಇರುವುದು ಸಾಧ್ಯವಿಲ್ಲ. ಭಾರತ ಅಂಗೀಕರಿಸಿದ ಸಂವಿಧಾನದ ಮೂಲಭೂತ ಆಶಯಗಳಲ್ಲಿ ಒಂದು. ಆದ್ದರಿಂದ ಹಿಂದೂ ರಾಷ್ಟ್ರದ ಪರಿಕಲ್ಪನೆ ತೊಲಗಬೇಕು”

– ರವಿವರ್ಮ ಕುಮಾರ್









ಹಾಸ್ಟೆಲ್ ಹೊರಗುತ್ತಿಗೆ ನೌಕರರನ್ನು ತೆಗೆದು ಹಾಕದಿರಲು ಭರವಸೆ

ಮೂರು ದಿನಗಳ ಅಹೋರಾತ್ರಿ ಧರಣಿ ಮುಕ್ತಾಯ

ಸರ್ಕಾರಿ ಹಾಸ್ಟೆಲ್ ಹಾಗೂ ವಸತಿ ಶಾಲಾ ಕಾಲೇಜುಗಳಲ್ಲಿ ದುಡಿಯುತ್ತಿರುವ 'ಡಿ' ವರ್ಗದ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕು ವುದಿಲ್ಲ ಎಂಬ ಭರವಸೆ ಹಿನ್ನೆಲೆಯಲ್ಲಿ ಜೂನ್ 27 ರಿಂದ ಬೆಂಗಳೂರಿನಲ್ಲಿ ಹೊರಗುತ್ತಿಗೆ ನೌಕರರು ನಡೆಸುತ್ತಿದ್ದ ಅಹೋರಾತ್ರಿ ಧರಣಿಯನ್ನು 3 ದಿನಗಳ ನಂತರ ಜೂನ್ 29 ರಂದು ರಾತ್ರಿ ಹಿಂಪಡೆಯಲಾಯಿತು. ಸ್ವಾತಂತ್ರ್ಯಉದ್ಯಾನದಲ್ಲಿ ಧರಣಿ ನಡೆಸುತ್ತಿದ್ದ 3000 ಕ್ಕೂ ಹೆಚ್ಚು ಹಾಸ್ಟೆಲ್ ಹೊರಗುತ್ತಿಗೆ ನೌಕರರನ್ನು ಭೇಟಿ ಮಾಡಿದ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಶ್ರೀ ಮಣಿವಣ್ಣನ್, ಹೊರಗುತ್ತಿಗೆ ನೌಕರರನ್ನು ತೆಗೆದು ಹಾಕುವುದಿಲ್ಲ ಎಂದು ಭರವಸೆ ನೀಡಿದರು. ಈಗಾಗಲೇ ಕೆಲವು ಹಾಸ್ಟೆಲ್‌ಗಳ ವಾರ್ಡನ್‌ಗಳು ಹೋರಾಟದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಬಂದಿರುವ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕುತ್ತಿರುವುದನ್ನು ಶ್ರೀ ಮಣಿವಣ್ಣನ್ ಅವರ ಗಮನಕ್ಕೆ ತಂದಾಗ ಅವರು ಎಲ್ಲಾ ವಾರ್ಡನ್‌ಗಳಿಗೆ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕಬಾರದೆಂದೂ, ಹೊರಗುತ್ತಿಗೆ ನೌಕರರನ್ನು ತೆಗೆದು ಹಾಕಲು ವಾರ್ಡನ್‌ಗಳಿಗೆ ನೀಡಲಾಗಿದ್ದ ಅಧಿಕಾರವನ್ನು ಹಿಂಪಡೆಯಲಾಗಿದೆ ಎಂದು ಆದೇಶ ಕಳುಹಿಸಿರುವುದಾಗಿ ತಿಳಿಸಿದರು. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಡಿಯಲ್ಲಿ ಕಳೆದ ಐದಾರು ತಿಂಗಳುಗಳಿಂದ ಮಾಸಿಕ ವೇತನ ಪಾವತಿ ಮಾಡುತ್ತಿಲ್ಲ ಎಂಬ ವಿಷಯವನ್ನು ಗಮನಕ್ಕೆ ತಂದಾಗ ಜುಲೈ 15 ರ ಒಳಗಾಗಿ ಎಲ್ಲಾ ಬಾಕಿ ವೇತನವನ್ನು ಅರಿಯರ್ಸ್ ಸಹಿತವಾಗಿ ಪಾವತಿ ಮಾಡಲಾಗುವುದೆಂದು ತಿಳಿಸಿದರು.

ಅಡುಗೆಯವರು, ಅಡುಗೆ ಸಹಾಯಕರು ಮತ್ತು ಕಾವಲುಗಾರರ ಸುಮಾರು 6000 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಸರ್ಕಾರದ ಕ್ರಮದಿಂದಾಗಿ ಈಗಾಗಲೇ ಆ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರು ಕೆಲಸ ಕಳೆದುಕೊಳ್ಳಲಿದ್ದಾರೆ ಎಂಬ ಮೂಲಭೂತ ಪ್ರಶ್ನೆಯನ್ನು ಸರ್ಕಾರದ ಕಾರ್ಯದರ್ಶಿಗಳ ಗಮನಕ್ಕೆ ತರಲಾಯಿತು. ಈ ರೀತಿ ಕೆಲಸ ಕಳೆದುಕೊಳ್ಳುವವರು ಬಹುತೇಕ ದಲಿತರು, ಮಹಿಳೆಯರು, ವಿಧವೆಯರು, ಒಂಟಿ ಮಹಿಳೆಯರೂ ಆಗಿದ್ದಾರೆ ಎಂದು ವಿವರಿಸಿದಾಗ, ಈಗ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರ ಸ್ಥಿತಿಗತಿಗಳ ಬಗ್ಗೆ ವಿವರವಾದ ಸಮೀಕ್ಷೆ ಮಾಡಲು ನಿರ್ಧರಿಸಲಾಗಿದೆ ಎಂದೂ ನೇರನೇಮಕಾತಿಯಿಂದ ವಂಚಿತರಾಗುವ ಇವರಿಗೆ ಸೇವಾ ಭದ್ರತೆ ಒದಗಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸುವುದು ಅಗತ್ಯವಿದೆ ಎಂದುಅವರು ಹೇಳಿದರಲ್ಲದೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರೊಡನೆ ಚರ್ಚೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು. ಈ ಭರವಸೆಗಳ ಹಿನ್ನೆಲೆಯಲ್ಲಿ 3 ದಿನಗಳಿಂದ ನಡೆಯುತ್ತಿದ್ದ ಧರಣಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಅಂತ್ಯಗೊಳಿಸಲಾಯಿತು.

3 ದಿನಗಳ ಅಹೋರಾತ್ರಿಧರಣಿಯಲ್ಲಿ ಬೀದರ್, ಕಲ್ಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೆಳಗಾವಿ, ವಿಜಯಪುರ, ಹಾವೇರಿ, ಗದಗ, ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ಹಾಸನ, ಮಂಡ್ಯ, ಮೈಸೂರು, ರಾಮನಗರ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ, ಚಿಕ್ಕಬಳ್ಳಾಪುರ ಮತುಕೋಲಾರ ಜಿಲ್ಲೆಗಳಿಂದ 3000 ಕ್ಕೂ ಹೆಚ್ಚು ಮಹಿಳಾ ಮತ್ತು ಪುರುಷ ಹೊರಗುತ್ತಿಗೆ ನೌಕರರು ಭಾಗವಹಿಸಿದ್ದರು.

ಕೆಂಪೇಗೌಡ ಜಯಂತಿ ಹಿನ್ನಲೆಯಲ್ಲಿ ಜೂನ್ 27 ರಂದು ಮೆರವಣಿಗೆ ಮಾಡಿ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಲು ಪೊಲೀಸ್ ಅನುಮತಿಯನ್ನು ನಿರಾಕರಿಸಲಾಗಿತ್ತು. ಆ ಪ್ರಯುಕ್ತ ನಗರದ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಆವರಣದಲ್ಲೇ ಮೊದಲ ದಿನ ಹಗಲು ರಾತ್ರಿ ಧರಣಿ ನಡೆಸಲಾಯಿತು. ಮರುದಿನ ಜೂನ್ 28 ರಂದು ಸ್ವಾತಂತ್ರ್ಯ ಉದ್ಯಾನವದಲ್ಲಿ ಧರಣಿ ಮುಂದುವರಿಸಲು ಅನುಮತಿ ನೀಡಲಾಯಿತಾದರೂ ಧರಣಿ ನಿರತರನ್ನು ಬಸ್ಸುಗಳಲ್ಲಿ ತುಂಬಿಕೊಂಡು ಸ್ವಾತಂತ್ರ್ಯ ಉದ್ಯಾನಕ್ಕೆ ಕರೆದೊಯ್ಯಲು ಪೊಲೀಸರು ಮುಂದಾದರು. ಇದನ್ನು ತಿರಸ್ಕರಿಸಿದ ಪ್ರತಿಭಟನಾಕಾರರು ನಡೆದುಕೊಂಡೇ ಹೋಗಲು ಅನುಮತಿ ನೀಡಬೇಕೆಂದು ಒತ್ತಾಯಿಸಿದರು. ಕೊನೆಗೆ ಮೆರವಣಿಗೆಯಲ್ಲಿ ಹೋಗಲು ಅನುಮತಿ ದೊರೆಯಿತು. ಮುಂದಿನ ಎರಡು ದಿನಗಳ ಅಹೋರಾತ್ರಿ ಧರಣಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯಿತು.

ಧರಣಿ ಸ್ಥಳಕ್ಕೆ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಉಪಾಧ್ಯಕ್ಷರಾದ ಕೆ.ಎನ್. ಉಮೇಶ್, ಸಹ ಕಾರ್ಯದರ್ಶಿ ಕೆ. ಮಹಾಂತೇಶ, ಕರ್ನಾಟಕ ಪ್ರಾಂತರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ, ಯು. ಬಸವರಾಜ, ಬಾಗೇಪಲ್ಲಿ ಮಾಜಿ ಶಾಸಕರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳೂ ಆಗಿರುವ ಜಿ.ವಿ. ಶ್ರೀರಾಮರೆಡ್ಡಿ, ಜನವಾದಿ ಮಹಿಳಾ ಸಂಘದ ಅದ–ಕ್ಷೆ ಗೀತಾ, ರಾಜ್ಯ ಸರಕಾರಿ ನೌಕರರ ಒಕ್ಕೂಟದ ಮುಖಂಡರಾದ ಮಠಪತಿ, ಭಾರತ ಜ್ಞಾನ ವಿಜ್ಞಾನ ಸಮಿತಿಯ ಮುಖಂಡರಾದ ಜಯಕುಮಾರ್, ಎಸ್.ಎಫ್.ಐ. ಮುಖಂಡರಾದ ಗುರುರಾಜ ದೇಸಾಯಿ ಮತ್ತು ಬಸವರಾಜ ಪೂಜಾರ್ ಮೊದಲಾದ ಮುಖಂಡರು ಧರಣಿ ಸ್ಥಳಕ್ಕೆ ಭೇಟಿಕೊಟ್ಟು ಹೋರಾಟಕ್ಕೆ ತಮ್ಮ ಬೆಂಬಲವನ್ನೂ ಸೂಕ್ತ ಮಾರ್ಗದರ್ಶನವನ್ನೂ ನೀಡಿದರು. ಹೊರಗುತ್ತಿಗೆ ನೌಕರರ ಸಂಘದ ಮುಖಂಡರಾದ ನಿತ್ಯಾನಂದಸ್ವಾಮಿ, ಭೀಮಶೆಟ್ಟಿ ಯಂಪಳ್ಳಿ, ಕೆ. ಹನುಮೇಗೌಡ, ಚಂದ್ರಪ್ಪ ಹೊಸ್ಕೇರಾ, ಅಂಜನೇಯರೆಡ್ಡಿ, ಜಂಬಯ್ಯ ನಾಯಕ್, ಇ.ಆರ್. ಯಲ್ಲಪ್ಪ, ಲಿಂಗಪ್ಪ ಹಣವಾಳ, ಪವಾಡೆಪ್ಪ ಚಲವಾದಿ, ಮೋಹನ್‌ಕಟ್ಟಿಮನಿ. ಶಾಂತಾಗಡ್ಡಿ, ಕಮಲ ಘಂಟಿ, ಗಾಯತ್ರಿ, ಪ್ರೇಮಾ ಮೊದಲಾದವರು ಧರಣಿಯ ನೇತೃತ್ವ ವಹಿಸಿದರು.

ಭೀಮಶೆಟ್ಟಿ ಯಂಪಳ್ಳಿ
ಪ್ರಧಾನ ಕಾರ್ಯದರ್ಶಿ

ಕಾರ್ಮಿಕ ಇಲಾಖೆಯ ಮುಂದೇ ಬೃಹತ್ ಪ್ರತಿಭಟನೆ

ಸಿಐಟಿಯು ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಜಂಟಿಯಾಗಿ ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ಕಾರ್ಮಿಕ ಇಲಾಖೆಯ ಮುಂದೇ ಬೃಹತ್ ಪ್ರತಿಭಟನೆ ಮಾಡಲಾಯಿತು.



ಸಿಐಟಿಯು ಸಂಘಟನೆಯನ್ನು ಕನಿಷ್ಠ ವೇತನ ಸಲಹಾ ಮಂಡಳಿ ಹಾಗು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಗಳಲ್ಲಿ ಪ್ರಾತಿನಿಧ್ಯ ನೀಡದೆ ಮಾಲೀಕರ ಪರವಾಗಿ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ನಿಲುವು ಖಂಡಿಸಲಾಯಿತು. ಈ ಕೂಡಲೇ ದೋಷ ಸರಿಪಡಿಸಲು ಆಗ್ರಹಿಸಲಾಯಿತು. Engineering Industry ಹಾಗು ಇನ್ನಿತರ 34 ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ಹೊರಡಿಸಿರುವ ಕನಿಷ್ಠ ವೇತನದ ಕರಡಿಗೆ ಸುಧೀರ್ಘ ತಕರಾರು ಅರ್ಜಿ ಸಲ್ಲಿಸಿ, Zone 1,2,3 & 4 ಎಂಬ ಅವೈಜ್ಞಾನಿಕ ವರ್ಗಿಕರಣವನ್ನು ಪ್ರಬಲವಾಗಿ ವಿರೋಧಿಸಲಾಯಿತು.

ಸಭೆಯನ್ನು ಉದ್ದೇಶಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಮೀನಾಕ್ಷಿ ಸುಂದರಂ, ರಾಜ್ಯ ಉಪಾಧ್ಯಕ್ಷರಾಧ ಕಾಂ.ಹೆಚ್.ಎಸ್. ಗೋಪಾಲ ಗೌಡ, ರಾಜ್ಯ ಕಾರ್ಯದರ್ಶಿ ಕಾಂ. ಕೆ.ಎನ್.ಉಮೇಶ್, ಬೆಂ. ಉತ್ತರ ಜಿಲ್ಲಾ ಅಧ್ಯಕ್ಷ ಕಾಂ.ಎನ್.ಪ್ರತಾಪ್ ಸಿಂಹ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ.ಬಿ.ಎನ್.ಮಂಜುನಾಥ್, ಮನೆ ಕೆಲಸಗಾರರ ಸಂಘದ ಮುಖಂಡರಾದ ಕಾಂ.ವಿಜಯಲಕ್ಷ್ಮಿ ಮತ್ತು ಕಾಂ.ಸೆಲ್ವಿ ಹಾಗು ಆಟೋ ಚಾಲಕರ ಸಂಘದ ಕಾಂ.ಬಿಎನ್.




ರಘು ರವರು ಮಾತನಾಡಿದರು. ಐನೂರಕ್ಕೂ ಹೆಚ್ಚು ಕಾರ್ಮಿಕರು ಹೋರಾಟದಲ್ಲಿ ಭಾಗವಹಿಸಿದರು.

ಪ್ರಮುಖ ಬೇಡಿಕೆಗಳಾಗಿ (1) ರಾಜ್ಯವ್ಯಾಪಿ ಸಮಾನ ಕನಿಷ್ಠ ವೇತನ ರೂ.18,000/–, (2) ಕಾರ್ಮಿಕ ಸಂಘಗಳ ಖಡಾಯ ಮಾನ್ಯತೆಗಾಗಿ, (3) ಗುತ್ತಿಗೆ ಕಾರ್ಮಿಕರ ಖಾಯಂಮಾತಿಗಾಗಿ ಮತ್ತು (4) ಆಟೋ, ಮನೆಕೆಲಸಗಾರರು, ಬೀದಿಬದಿ ವ್ಯಾಪಾರಿಗಳಿಗೆ ಸ್ಮಾರ್ಟ್ ಕಾರ್ಡ್ ಮತ್ತು ಪಿಂಚಣಿ ಹಾಗು ಭವಿಷ್ಯ ನಿಧಿ ಜಾರಿಗಾಗಿ ಒತ್ತಾಯಿಸಲಾಯಿತು.

2017 ಆಗಸ್ಟ್ 14 ರ ಅಹೋರಾತ್ರಿ ಧರಣಿ ಯಶಸ್ವಿ ಮಾಡಲು ಮತ್ತು ಸೆಪ್ಟೆಂಬರ್ 14 ರ ಹೋರಾಟಕ್ಕೆ ಮುನ್ನಡೆಯುವ ಘೋಷಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯ ಮಾಡಲಾಯಿತು.



ಪ್ರಶ್ನೆ: ಪ್ರಭಾತ್ ಪಟ್ನಾಯಕ್ “ಪೀಪಲ್ಸ್ ಡೆಮಾಕ್ರಸಿ” ಪತ್ರಿಕೆಯ ತಮ್ಮ ಅಂಕಣದಲ್ಲಿ (ಸಂಪುಟ XLI ಸಂಚಿಕೆ 19) ಬರೆಯುತ್ತಾ, “ಹಣಕಾಸು ವ್ಯವಸ್ಥೆಯ ಪ್ರಾಬಲ್ಯವನ್ನು ಎದುರಿಸದೆ ಇರುವುದು ಟ್ರಂಪ್ ವಾದ ಮತ್ತು ಉಗ್ರಬಲಪಂಥೀಯರ ಭಾರೀ ಪತನಕ್ಕೆ ಕಾರಣವಾಗುವ ಅಂಶವಾಗಲಿದೆ. ಇದರ ಜತೆಗೆ ಎಡಶಕ್ತಿಗಳು ಜಾಗತೀಕರಣದಿಂದ ಕಳಚಿಕೊಳ್ಳುವುದರ ಅಗತ್ಯ ಬಗೆಗೆ ಇನ್ನೂ ಹೆಚ್ಚಿನ ಸ್ಪಷ್ಟತೆ ಪಡೆಯುತ್ತಾ ಹೋದ ಹಾಗೆ, ‘ಉದಾರವಾದಿ ಬೂರ್ಜ್ವಾ’ಗಳ ಬೌದ್ಧಿಕ ದಿವಾಳಿತನ ಹೆಚ್ಚೆಚ್ಚು ಬಯಲಾಗುತ್ತಾ ಹೋದ ಹಾಗೆ, ಹೆಚ್ಚು ಹೆಚ್ಚು ದುಡಿಯುವ ಜನತೆ ಎಡಶಕ್ತಿಗಳನ್ನು ಬೆಂಬಲಿಸುತ್ತಾರೆ. ಇದು ಆಗಲೇ ಆರಂಭವಾಗಿದೆ. ಕಾರ್ಬಿನ್, ಸ್ಯಾಂಡರ್ಸ್, ಮೆಲನ್‌ಕಾನ್ ಅವರ ಮುನ್ನಡೆಯಿಂದ ಇದು ಸಾಬೀತಾಗಿದೆ. ಇದಕ್ಕೆ ಹೆಚ್ಚಿನ ಚಾಲನೆ ದೊರೆಯುವುದು ಜಾಗತೀಕರಣದ ಬಗ್ಗೆ ಇನ್ನೂ ಉಳಿದಿರುವ ಡೋಲಾಯಮಾನವಾದ ಸ್ಥಿತಿಯಿಂದ ಎಡಶಕ್ತಿಗಳು ಹೊರಬರುವುದರಿಂದ” ಎನ್ನುತ್ತಾರೆ. ಇಂದಿನ ಪರಿಸ್ಥಿತಿಯಲ್ಲಿ “ಜಾಗತೀಕರಣದಿಂದ ಕಳಚಿಕೊಳ್ಳುವುದು” ಸಾಧ್ಯವೇ? “ಜಾಗತೀಕರಣದ ಬಗ್ಗೆ ಇನ್ನೂ ಉಳಿದಿರುವ ಡೋಲಾಯಮಾನವಾದ ಸ್ಥಿತಿಯಿಂದ ಕಳಚಿಕೊಳ್ಳುವುದು”ಎಂದರೆ ಏನು? ಜಾಗತೀಕರಣದ ವಿರುದ್ಧ ಹೋರಾಡುವುದು ಮತ್ತು ಅದಕ್ಕೆ ಪ್ರತಿರೋಧ ಒಡ್ಡುವುದು ಜಾಗತೀಕರಣದಿಂದ ಕಳಚಿಕೊಳ್ಳುವುದಕ್ಕಿಂತ ಬೇರೆಯೇ ಅಲ್ಲವೇ?



ಉತ್ತರ: ನಾವು ನವ ಉದಾರವಾದದ ಯಾವುದೇ ನೀತಿಯನ್ನು ತೆಗೆದುಕೊಳ್ಳೋಣ. ಉದಾಹರಣೆಗಾಗಿ ಶಿಕ್ಷಣದ ಖಾಸಗೀಕರಣದ ವಿಷಯವನ್ನು ತೆಗೆದುಕೊಳ್ಳಬಹುದು. ನಾವು ಖಾಸಗೀಕರಣವನ್ನು ವಿರೋಧಿಸಿದಾಗ ಸರಕಾರ ಶಿಕ್ಷಣಕ್ಕಾಗಿ ಹೆಚ್ಚಿನ ಹಣವನ್ನು ತೊಡಗಿಸಬೇಕಾಗುತ್ತದೆ. ಇದಕ್ಕಾಗಿ ಹೆಚ್ಚಿನ ತೆರಿಗೆ ಹೊರೆಸಬೇಕಾಗುತ್ತದೆ ಅಥವಾ ವಿತ್ತೀಯ ಕೊರತೆಯ ಹೆಚ್ಚಳವಾಗುತ್ತದೆ ಅಥವಾ ಇನ್ನಿತರ ಬಾಬ್ತುಗಳನ್ನು ಕಡಿತಗೊಳಿಸಿ ತೊಡಗಿಸಬೇಕಾಗುತ್ತದೆ. ಹೆಚ್ಚಿನ ತೆ–ರಿಗೆ ಅಥವಾ ಇನ್ನಿತರ ಬಾಬ್ತುಗಳ ಕಡಿತದಿಂದ ಬಡವರಿಗೆ ತೊಂದರೆಯಾಗುವುದಾದರೆ, ಸಹಜವಾಗಿ ಎಡಪಂಥೀಯರು ಅದನ್ನು ವಿರೋಧಿಸುತ್ತಾರೆ. ಆದ್ದರಿಂದ ಇದಕ್ಕೆ ಬೇಕಾಗುವ ಸಂಪತನ್ನು ಶ್ರೀಮಂತರಿಗೆ ತೆರಿಗೆ ವಿಧಿಸುವ ಮೂಲಕ ಅಥವಾ ವಿತ್ತೀಯ ಕೊರತೆಯಿಂದ ನಿಭಾಯಿಸಬೇಕಾಗುತ್ತದೆ. ಈ ಎರಡೂ ಮಾರ್ಗಗಳನ್ನು ಅನುಸರಿಸಿದಾಗ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಕೆಂಗಣ್ಣಿಗೆ ಕಾರಣವಾಗುತ್ತದೆ. ಸಾಲದ ರೇಟಿಂಗ್ ಸಂಸ್ಥೆಗಳು ದೇಶದ ಸಾಲದ ರೇಟಿಂಗ್ ಇಳಿಸುವುದರಿಂದ ಹಣದ ಒಳ–ಹೊರ ಹರಿವುಗಳ ಸಮತೋಲನ ಕೆಡುತ್ತದೆ ಮತ್ತು ನಾಣ್ಯದ ಅಪಮೌಲ್ಯದ ನಿರೀಕ್ಷೆ ಉಂಟಾಗುತ್ತದೆ. ಈ ಕಾರಣದಿಂದಾಗಿ ಜಾಗತೀಕರಣದ ಸಮಯದಲ್ಲಿ ಹಣದ ಹೊರಹರಿವು ಹೆಚ್ಚಾಗಿ ತೊಂದರೆಯಾಗುತ್ತದೆ. ಆದ್ದರಿಂದ ಯಾವುದೇ ದೇಶದಲ್ಲಿ ಪ್ರಗತಿಪರ ಅಜೆಂಡಾ ಹಾಕಿಕೊಳ್ಳಬೇಕಾದರೆ ಆಸ್ತಿ ಹೊರ ಹರಿವು ಅದರಲ್ಲೂ ಹಣದ ಹೊರಹರಿವೂ, ಮತ್ತು ವ್ಯಾಪಾರದ ಹೊರಹರಿವು – ಇವುಗಳನ್ನು ನಿಯಂತ್ರಣ ಮಾಡುವ ನೀತಿ ಅನುಸರಿಸಬೇಕಾಗುತ್ತದೆ. ಈ ನಿಯಂತ್ರಣವನ್ನೇ “ಜಾಗತೀಕರಣದ ಕೊಂಡಿ ಕಳಚುವುದು” ಎನ್ನಲಾಗುತ್ತದೆ. ಇಂತಹ ನಿಯಂತ್ರಣ ಯಾವ ಮಟ್ಟದ್ದು ಇರಬೇಕು ಎನ್ನುವುದು ಆಯಾ ಸಂದರ್ಭನುಸಾರವಾಗಿ ನಿರ್ಧಾರವಾಗುತ್ತದೆ.



ಯಾವುದೇ ದೇಶ ಈ ರೀತಿ “ಜಾಗತೀಕರಣದ ಕೊಂಡಿ ಕಳಚುವುದಕ್ಕೆ” ತಯಾರಿಲ್ಲದಿದ್ದರೆ ಪ್ರಗತಿಪರ ಅಜೆಂಡಾ ಬರೀ ಒಣಮಾತಾಗುತ್ತದೆ. “ಜಾಗತೀಕರಣದ ವಿರುದ್ಧ ಹೋರಾಟ” ಹಾಗೂ “ಜಾಗತೀಕರಣದ ವಿರುದ್ಧ ಪ್ರತಿರೋಧ” ಕೇವಲ ಅರ್ಥಹೀನ ಪದಗಳಾಗುತ್ತವೆ. ಹಣಕಾಸು ಬಂಡವಾಳದ ಪ್ರಭಾವವನ್ನು ಗ್ರೀಕ್ ಆರ್ಥಿಕ ವ್ಯವಸ್ಥೆಯಲ್ಲಿ ಹಿಮ್ಮೆಟಿಸುವ ಭರವಸೆ ನೀಡಿ ಅಧಿಕಾರಕ್ಕೆ ಬಂದ “ಸಿರಿಜಾ” ಜಾಗತೀಕರಣದ ಕೊಂಡಿಯಿಂದ (ಗ್ರೀಸ್ ಸಂದರ್ಭಧಲ್ಲಿ ಅದರರ್ಥ ಯುರೋಕೂಟದಿಂದ ಕಳಚಿಕೊಳ್ಳುವುದು ಆಗುತ್ತದೆ) ಕಳಚಿಕೊಳ್ಳದೇ ಇರುವುದು ನಂಬಿಕೆ ದ್ರೋಹವಾಗಿತ್ತು

ಗ್ರೀಸ್ ಸಣ್ಣ ದೇಶವಾಗಿರುವುದರಿಂದ ಸಿರಿಜಾ ಸರಕಾರಕ್ಕೆ ಇದನ್ನು ಸಾಧಿಸಲು ಸಾಧ್ಯವಾಗುತ್ತಿತ್ತೇ ಎಂಬುದು ಚರ್ಚಾಸ್ಪದ ವಿಷಯ (ಸಣ್ಣ ದೇಶಗಳು ಇಂತಹ ದೇಶಗಳ ಕೂಟ ರಚಿಸಿಕೊಳ್ಳಬೇಕಾಗಬಹುದು) ಎನ್ನುವುದು ನಿಜ. ಆದರೆ ಮೂಲಭೂತ ಅಂಶವೆಂದರೆ, ಜಾಗತೀಕರಣದ ವಿರುದ್ಧ ಹೋರಾಡುವುದು ಎಂದರೆ ಅದರಿಂದ ಕಳಚಿಕೊಳ್ಳುವುದಕ್ಕೆ ತಯಾರಾಗಿರುವುದು ಎಂಬುದು. ಈ ಪ್ರಕ್ರಿಯೆ ಇಂಡಿಯಾದಂತಹ (ದೊಡ್ಡ ಮತ್ತು ವೈವಿಧ್ಯಮಯ ಉತ್ಪಾದನಾ ವ್ಯವಸ್ಥೆ ಇರುವ) ದೊಡ್ಡ ದೇಶಗಳಿಗೆ ಸಾಧ್ಯ. ಮಾತ್ರವಲ್ಲ ಆವಶ್ಯಕ ಕೂಡಾ. ಜಾಗತೀಕರಣದ ದುಷ್ಪರಿಣಾಮಗಳಿಗೆ ದುಡಿಯುವ ವರ್ಗ ತುತ್ತಾಗುವುದರಿಂದ ತಪ್ಪಿಸಲು ಇದು ಅಗತ್ಯ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಣಕಾಸು ಬಂಡವಾಳದ ಅಧಿಪತ್ಯದ ವಿರುದ್ಧ ಎರಡು ಮಾರ್ಗಗಳಿಂದ ಹೋರಾಡಬಹುದಾಗಿದೆ. ದೇಶಗಳಲ್ಲಿ ರೈತ ಕಾರ್ಮಿಕರ ಸಂಘರ್ಷಗಳಿಂದ ಅಥವಾ ಜಾಗತೀಕೃತ ಸಂಘರ್ಷಗಳಿಂದ. ಎರಡನೇಯ ಸಾದ–್ಯತೆಗೆ ಅವಕಾಶ ಕಮ್ಮಿ ಯಾಕೆಂದರೆ ಅಂತರಾಷ್ಟ್ರೀಯವಾಗಿ ಸಂಯೋಜಿತ ಕಾರ್ಮಿಕರ ಸಂಘರ್ಷವೂ ಇಲ್ಲ. ಅಂತರಾಷ್ಟ್ರೀಯ ರೈತ ಹೋರಾಟಗಳ ಮಾತು ದೂರ ಉಳಿಯಿತು. ಅರ್ಥಪೂರ್ಣ ಸಂಘರ್ಷ ಈಗ ಸಾಧ್ಯವಿರುವುದು ರಾಷ್ಟ್ರೀಯ ಮಟ್ಟದಲ್ಲಿ ಮಾತ್ರ ಮತ್ತು ಅದಕ್ಕೆ ಜಾಗತೀಕರಣದ ಕೊಂಡಿಯಿಂದ ಕಳಚಿಕೊಳ್ಳುವುದು ಅತ್ಯವಶ್ಯವಾಗಿದೆ.

ಎಡಪಂಥೀಯರಲ್ಲೇ ಹಲವರು ಇದನ್ನು ಇನ್ನೂ ಅರ್ಥಮಾಡಿಕೊಂಡಿಲ್ಲ. ಎಡಪಂಥೀಯರಲ್ಲೂ ಈ ವಿಷಯದಲ್ಲಿ ಡೋಲಾಯಮಾನ ಧೋರಣೆಯಿದೆ. ದುಡಿಯುವ ಜನತೆ ಜಾಗತೀಕರಣದ ವಿರುದ್ಧ ತಿರುಗಿ ಬಿದ್ದಿದ್ದಾರೆ. ದುಡಿಯುವ ಜನರ ಸಂಕಷ್ಟಗಳಿಗೆ ಹಣಕಾಸು ಬಂಡವಾಳದ ಅಧಿಪತ್ಯಕ್ಕೆ ಬದಲಾಗಿ “ಚೀನಿಯರು”, “ಮೆಕ್ಸಿಕನ್ನರು”, “ಮುಸ್ಲಿಮರು” ಮುಂತಾದ “ಅನ್ಯರು” ಕಾರಣವೆಂದು ಫ್ಯಾಸಿಸ್ಟ್ ಶಕ್ತಿಗಳು ಬಿಂಬಿಸುತ್ತಿವೆ. ಇಂತಹ ಇಂದಿನ ಸಂದರ್ಭದಲ್ಲಿ ಈ ಡೋಲಾಯಮಾನ ಧೋರಣೆ ಬಿಟ್ಟು ಅವರ ಮುಂದೆ ಜಾಗತೀಕರಣದ ಕೊಂಡಿಯಿಂದ ಕಳಚಿಕೊಳ್ಳುವ ಪ್ರಗತಿಪರ ಅಜೆಂಡಾ ಇಡುವುದರ ಮೇಲೆ ಎಡಪಂಥದ ರಾಜಕೀಯ ಮುನ್ನಡೆ ಅವಲಂಬಿಸಿದೆ.

●

ಸಂವಿಧಾನದ ಆಶಯಗಳನ್ನು ಅನುಷ್ಠಾನಕ್ಕೆ ತರುವುದೇ......... ಪುಟ 8 ರಿಂದ

ಸಂವಿಧಾನದ ಕುರಿತು ಎಳ್ಳಷ್ಟು ಗೌರವವೂ ಇರಲಿಲ್ಲ. ಅದರ ಬದಲಿಗೆ ವರ್ಣಾಶ್ರಮ ಧರ್ಮವನ್ನು ಪ್ರತಿಪಾದಿಸುವ ಮನುಸ್ಮೃತಿ ಈ ದೇಶದ ಸಂವಿಧಾನವಾಗಲೆಂದು ಅವರು ಬಯಸಿದ್ದರು. ಭಾರತವನ್ನು ಹಿಂದೂ ರಾಷ್ಟ್ರವಾಗಿಸಬೇಕು, ಅದರಲ್ಲೂ ಮನುವಾದಿ ಆಡಳಿತ ತರಬೇಕು ಅನ್ನುವುದು ಆರೆಸ್ಸೆಸ್ ನ ಮುಖ್ಯ ಉದ್ದೇಶವಾಗಿತ್ತು. ಈಗಲೂ ಅದರ ಉದ್ದೇಶ ಭಾರತದ ಬ್ರಾಹ್ಮಣೀಕರಣವೇ ಆಗಿದೆ. ಆರೆಸ್ಸೆಸ್ ಪ್ರತಿಪಾದಿಸುವ ರಾಷ್ಟ್ರೀಯತೆಯೂ ಪ್ರಜೆಗಳನ್ನು ಕೊನೆಗೆ ಕರೆದೊಯ್ಯುವುದು ಅಲ್ಲಿಗೇ. ಇಷ್ಟಕ್ಕೂ ಸಂಘ ಪರಿವಾರ ರಾಷ್ಟ್ರೀಯತೆಯ ವ್ಯಾಖ್ಯಾನಕ್ಕೆ ಬಳಸಿಕೊಳ್ಳುವ ಸೂತ್ರಗಳನ್ನು ಗಮನಿಸಿ. ಅದು ಹಿಂದುತ್ವವನ್ನೇ ರಾಷ್ಟ್ರೀಯತೆ ಎಂದು ಬಿಂಬಿಸಲು ಹೊರಟಿರುವುದು ಸ್ಪಷ್ಟವಾಗುತ್ತದೆ.

ಜನರಲ್ಲಿ ಬ್ರಾಹ್ಮಣ್ಯ ಚಿಂತನೆಗಳನ್ನು ತುಂಬಲಿಕ್ಕಾಗಿ ಸಂಘಪರಿವಾರವು ಪರಂಪರೆಯನ್ನೇ ತಿರುಚಲು ಹೊರಟಿದೆ. ಈ ಕಾರಣದಿಂದಲೇ ಹಿಂದೆ ಮಾನವ ಸಂಪನ್ಮೂಲ ಸಚಿವೆಯಾಗಿದ್ದ ಸ್ಮೃತಿ ಇರಾನಿ ಮಹಿಷಾಸುರ ಪೂಜೆಯನ್ನು ಖಂಡಿಸಿದ್ದು. ಈ ಕಾರಣದಿಂದಲೇ ತಲತಲಾಂತರದಿಂದ ರಾವಣ ಪೂಜೆಗೊಳ್ಳುತ್ತಿದ್ದ ಮಂದಿರಗಳ ಮೇಲೆ ದಾಳಿ ನಡೆಸಿ, ಇನ್ನು ಮುಂದೆ ಪೂಜೆ ಮಾಡದಂತೆ ಫರ್ಮಾನು ಹೊರಡಿಸಿದ್ದು. ಮತ್ತು ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಷಾ ಬಲಿ ಮಹಾರಾಜನ ಸಂಸ್ಮರಣೆಯ ಓಣಂ ಹಬ್ಬದಂದು ‘ಹ್ಯಾಪಿ ವಾಮನ ಜಯಂತಿ’ ಎಂದು ಶುಭ ಹಾರೈಸಿದ್ದೂ ಇದೇ ಕಾರಣದಿಂದಲೇ.

ಅವರ ರಾಷ್ಟ್ರವಾದ ದಲಿತ ಮುಸ್ಲಿಂ ಮತ್ತಿತರ ಬಹುಸಂಖ್ಯಾತ ದಮನಿತ ಜನರನ್ನು ಒಳಗೊಂಡಿಲ್ಲ. ಮಾತ್ರವಲ್ಲ, ಅದು ಮಹಿಳೆಯರನ್ನು ಹೊರಗಿಡುತ್ತದೆ. ಇದಕ್ಕೆ ಕೆಲವೇ ದಿನಗಳ ಹಿಂದೆ ಹರಿಯಾಣ ಸರಕಾರ ಪತ್ರಿಕೆಗಳಲ್ಲಿ ಇಡೀ ಪುಟದಲ್ಲಿ ರಾಜ್ಯದ ಕೃಷಿ ಪ್ರಗತಿಯನ್ನು ಹೊಗಳುತ್ತಾ “ಹರಿಯಾಣದ ಹೆಮ್ಮೆ” ಎಂದು ಪ್ರಕಟಿಸಿದ ಮಹಿಳೆಯ ಚಿತ್ರವೇ ಉತ್ತಮ ಉದಾಹರಣೆ. ಅದು ಬುಟ್ಟಿಯಲ್ಲಿ ಧಾನ್ಯವನ್ನು ಹೊತ್ತ (ಗೂಂಗಟ್ ಎಂದು ಕರೆಯುವ) ಮುಖ ಮರೆಮಾಡುವ ಸೆರಗು ಹೊದ್ದ ಮಹಿಳೆಯ ಚಿತ್ರವಾಗಿತ್ತು.

“ದೇಶವನ್ನು ಕಟ್ಟಿದ ಮಹನೀಯರ ಚಿಂತನೆಯ ರಾಷ್ಟ್ರೀಯತೆಯಲ್ಲಿ ಸಂಘ ಪರಿವಾರ ಇಂದು ರಾಷ್ಟ್ರಭಕ್ತಿಯ ಹೆಸರಲ್ಲಿ ಮಾಡುತ್ತಿರುವುದೆಲ್ಲವೂ ರಾಷ್ಟ್ರದ್ರೋಹವೇ ಆಗುತ್ತದೆ. ಯಾವ ಜಾತೀಯತೆಯನ್ನು ಅಂಬೇಡ್ಕರ್ ರಾಷ್ಟ್ರದ್ರೋಹದ ಸಾಲಿನಲ್ಲಿ ಮೊದಲನೆಯದು ಅಂದಿದ್ದರೋ ಅದೇ ಜಾತೀಯತೆ ಹೈದರಾಬಾದ್ ಯುನಿವರ್ಸಿಟಿಯ ರೋಹಿತ್ ವೇಮುಲನನ್ನು ಬಲಿ ತೆಗೆದುಕೊಂಡಿತ್ತು. ಹಿಂಸೆ ಮತ್ತು ದ್ವೇಷ ರಾಷ್ಟ್ರವಾದವಾಗುವುದಿಲ್ಲ ಎಂದಿದ್ದರು ಗಾಂಧೀಜಿ. ಆದರೆ ದಾದ್ರಿ ಪ್ರಕರಣ, ದೇಶಭಕ್ತಿಯ ಹೆಸರಲ್ಲಿ ನಡೆಸಲಾಗುವ ಮಾಬ್ ಲಿಂಚಿಂಗ್ ಮೊದಲಾದವುಗಳು ಮತ್ತೊಮ್ಮೆ ಈ ದೇಶದ ಜನರಿಗೆ ರಾಷ್ಟ್ರೀಯತೆಯ ನಿಜಾರ್ಥ ಮನದಟ್ಟು ಮಾಡಿಸುವ ಅಗತ್ಯವನ್ನು ಸಾರುತ್ತವೆ.” ಎನ್ನುತ್ತಾ ತಮ್ಮ ಉದ್ಘಾಟನಾ ಭಾಷಣವನ್ನು ಕಾ. ಸುಭಾ?ಷಿಣಿ ಅಲಿ ಅವರು ಮುಗಿಸಿದರು.

“ಹಿಂದೂ ರಾಷ್ಟ್ರದ ಪರಿಕಲ್ಪನೆ ತೊಲಗಬೇಕು”

ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಮಾತನಾಡಿದ ಹಿರಿಯ ವಕೀಲ ಮತ್ತು ಮಾಜಿ ಅಡ್ವೊಕೇಟ್ ಜನರಲ್ ರವಿವರ್ಮ ಕುಮಾರ್ ಮಾತನಾಡುತ್ತಾ “ಹಿಂದೂ ರಾಷ್ಟ್ರ ಮತ್ತು ಜಾತ್ಯತೀತತೆ ಒಟ್ಟಿಗೆ ಇರುವುದು ಸಾಧ್ಯ ವಿಲ್ಲ. ಭಾರತ ಅಂಗೀಕರಿಸಿದ ಸಂವಿಧಾನದ ಮೂಲಭೂತ ಆಶಯಗಳಲ್ಲಿ ಒಂದು. ಆದ್ದರಿಂದ ಹಿಂದೂ ರಾಷ್ಟ್ರದ ಪರಿಕಲ್ಪನೆ ತೊಲಗಬೇಕು” ಎಂದು ಬಲವಾಗಿ ವಾದಿಸಿದರು. ರಾಷ್ಟ್ರೀಯತೆ ಒಂದು ಕ್ಲಿಷ್ಟವಾದ ಪರಿಕಲ್ಪನೆ. ಅದು 4 ಕುರುಡರು ಆನೆಯನ್ನು ವಿವರಿಸಿದ ಹಾಗೆ. 9 ಧರ್ಮಗಳು, 300ಕ್ಕೂ ಹೆಚ್ಚು ಭಾಷೆಗಳು, 5 ಸಾವಿರ ಜಾತಿಗಳು ಎಂಬ ಅಗಾಧ ವೈವಿಧ್ಯತೆ ಮತ್ತು ಅಸಮಾನತೆಗಳನ್ನು ಹೊಂದಿರುವ ಭಾರತವನ್ನು ರಾಷ್ಟ್ರವಾಗಿ ಹೆಣೆದದ್ದು ಡಾ. ಅಂಬೇಡ್ಕರ್ ರೂಪಿಸಿದ ಸಂವಿಧಾನ ಎಂದರು. ಸಂವಿಧಾನದ ಆಶಯಗಳ ಮೂಲಕ ಡಾ. ಅಂಬೇಡ್ಕರ್ ನಿರೂಪಿಸಿದ ರಾಷ್ಟ್ರೀಯತೆ ಮತ್ತು ಅದನ್ನು ಸಾಕಾರಗೊಳಿಸುವ ಸಂವಿಧಾನದ ಪರಿಚ್ಛೇದಗಳನ್ನು ಅವರು ವಿವರವಾಗಿ ತಿಳಿಸಿದರು.

‘ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿ ಇಫ್ತಾರ್ ಕೂಟ ಏರ್ಪಡಿಸಿ ಇದ್ದಕ್ಕಿದ್ದಂತೆ ಪ್ರಗತಿಪರರಾಗಲು ಹೊರಟಿದ್ದಾರೆ. ಕೂಟದಲ್ಲಿ ಊಟ ಬಡಿಸುವಾಗ ಸ್ವಾಮೀಜಿ ಯಾವ ಮುಸಲ್ಮಾನನನ್ನೂ ಮುಟ್ಟಿಸಿಕೊಂಡಿಲ್ಲ. ನಮಾಜ್ ಮಾಡುವ ಮೂಲಕ ಮುಸಲ್ಮಾನರೇ ಮಠವನ್ನು ಪವಿತ್ರಗೊಳಿಸಿದ್ದಾರೆ. ಈ ಕಾರಣಕ್ಕಾಗಿ ಮುಸ್ಲಿಮರನ್ನು ಸ್ವಾಮೀಜಿ ಅಭಿನಂದಿಸಬೇಕು’ ಎಂದರು.

“ಪೇಜಾವರ ಶ್ರೀಗಳ ಸೋಗಲಾಡಿತನದ ಕುರಿತು ಎಚ್ಚರ ಬೇಕು”

ಬಾಬರೀ ಮಸೀದಿ ಧ್ವಂಸ ಪ್ರಕರಣದ ಪ್ರಮುಖರಲ್ಲಿ ಒಬ್ಬರಾಗಿರುವ ಉಡುಪಿ ಮಠದ ಪೇಜಾವರ ಶ್ರೀಗಳ ಸೋಗಲಾಡಿತನದ ಕುರಿತು ಪ್ರಗತಿಪರರು ಎಚ್ಚರ ವಹಿಸಿದರೆ ಒಳಿತೆಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮಿನ್ ಮಟ್ಟು ಎಚ್ಚರಿಸಿದ್ದಾರೆ. ಮೊದಲ ಗೋಷ್ಠಿಗೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಿಂದೂ ಮತೀಯವಾದಿಗಳು ಕಾಲಕ್ಕೆ ತಕ್ಕಂತೆ ನಡೆದುಕೊಳ್ಳುವಲ್ಲಿ ಜಾಣ–ರಾಗಿದ್ದಾರೆ. ಈ ಕುರಿತು ಎಚ್ಚರ ತಪ್ಪಿ ಅವರನ್ನು ನಂಬಿದರೆ ಅಪಾಯ ತಪ್ಪಿದ್ದಲ್ಲ ಎಂದು ತಿಳಿಸಿದರು.

ಸಂಘಪರಿವಾರ ತನ್ನ ಅನುಕೂಲಕ್ಕೆ ತಕ್ಕಂತೆ ಬಿಜೆಪಿಯ ಪ್ರಮುಖ ನಾಯಕರನ್ನು ಹೇಗೆ ಬೇಕಾದರು ಬಿಂಬಿಸುತ್ತದೆ. ಹೀಗಾಗಿ ಬಿಜೆಪಿ ನಾಯಕರ ಸೋಗಲಾಡಿತನವನ್ನು ಸರಿಯಾಗಿ ಗ್ರಹಿಸದಿದ್ದರೆ ಸಮಸ್ಯೆಗಳಿಗೆ ಈಡಾಗಬೇಕಾಗುತ್ತದೆ. ಆ ರೀತಿಯಲ್ಲಿಯೇ ಪೇಜಾವರ ಶ್ರೀಗಳ ವರ್ತನೆಯನ್ನು ಗ್ರಹಿಸಬೇಕಾಗುತ್ತದೆ. ಜಾತಿ ನಿರ್ಮೂಲನೆ ಬಗ್ಗೆ ಎಂದೂ ಮಾತನಾಡದ ಪೇಜಾವರರನ್ನು ನಂಬುವುದಕ್ಕೆ ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಬಹುಸಂಸ್ಕೃತಿಯ ನೆಲೆಯಾಗಿರುವ ಭಾರತದಲ್ಲಿ ರಾಷ್ಟ್ರೀಯತೆಯ ಕಲ್ಪನೆ ಹುಟ್ಟಿರಲಿಲ್ಲ. 1924ರಲ್ಲಿ ಆರೆಸ್ಸೆಸ್ ಸ್ಥಾಪನೆಯಾದ ನಂತರ ಗೋಳ್ವಾಲ್ಕರ್ ಹಾಗೂ ಸಾವರ್ಕರ್ ತಮ್ಮ ಬ್ರಾಹ್ಮಣ ಸಿದ್ಧಾಂತವನ್ನು ಹಿಂದೂ ಧರ್ಮದ ಹೆಸರಿನಲ್ಲಿ ರಾಷ್ಟ್ರೀಯತೆಯ ಕಲ್ಪನೆಯನ್ನು ಬಿತ್ತಲು ಪ್ರಾರಂಭಿಸಿದರು. ಅಲ್ಲಿಂದ ಇಲ್ಲಿಯವರೆಗೂ ಕೋಮುವಾದಿಗಳು ರಾಷ್ಟ್ರೀಯತೆಯ ಹೆಸರಿನಲ್ಲಿ ಜನಸಾಮಾನ್ಯರನ್ನು ಹಿಂಸಿಸುತ್ತಿದ್ದಾರೆ ಎಂದು ಅವರು ವಿಷಾದಿಸಿದರು.

ಸಂಘಪರಿವಾರ ಪ್ರತಿಬಿಂಬಿಸುವ ಜನವಿರೋಧಿ ರಾಷ್ಟ್ರೀಯವಾದಕ್ಕೂ ವಿವೇಕಾನಂದ ಚಿಂತನೆಯ ಸಕಲ ಜಾತಿ, ಧರ್ಮಗಳನ್ನು ಒಳಗೊಳ್ಳುವ ರಾಷ್ಟ್ರೀಯವಾದಕ್ಕೂ ನಡುವೆ ಸಾಕಷ್ಟು ಅಂತರವಿದೆ. ಆದರೆ, ಸಂಘಪರಿವಾರ ವಿವೇಕಾನಂದರ ಪ್ರತಿಮೆಯನ್ನು ಮಾತ್ರ ಪಡೆದು, ಅದಕ್ಕೆ ಬ್ರಾಹ್ಮಣ ಧರ್ಮದ ರಾಷ್ಟ್ರೀಯತೆಯನ್ನು ಲೇಪಿಸಿ, ಹುಸಿ ರಾಷ್ಟ್ರೀಯತೆಯನ್ನು ಪ್ರಚಾರ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರಗತಿಪರರು ಬುದ್ಧ, ಬಸವಣ್ಣ, ವಿವೇಕಾನಂದ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಪಾದಿಸಿದ ಜನಪರವಾದ ರಾಷ್ಟ್ರೀಯತೆಗಳನ್ನು ಮುನ್ನೆಲೆಗೆ ತರಬೇಕಿದೆ ಎಂದು ಅವರು ಹೇಳಿದರು.

ಎರಡನೇ ಗೋಷ್ಠಿಯಲ್ಲಿ “ಸಾಂಸ್ಕೃತಿಕ ರಾಷ್ಟ್ರೀಯತೆ” ಬಗ್ಗೆ ಅನಸೂಯಾ ಕಾಂಬ್ಳೆ, “ಅಂಬೇಡ್ಕರ್ ರಾಷ್ಟ್ರೀಯತೆ” ಬಗ್ಗೆ ಎ. ನಾರಾಯಣ ಗಟ್ಟಿ, “ಭಾರತವೆಂದರೆ?” ಬಗ್ಗೆ ಅಬ್ದುಸ್ಸಲಾಂ ಪುತ್ತಿಗೆ ಮಾತನಾಡಿದರು.

●

ಇಫ್ತಾರ್ ಕೂಟ ಸಹ ರಾಜಕೀಯ ನಾಟಕವೇ?



ಬಾಬ್ರಿ ಮಸೀದಿ ಉರುಳಿದ ನಂತರ ದೇಶ ಹಿಂದಿನಂತಿರಲು ಸಾಧ್ಯವಿಲ್ಲ ಎಂಬ ಪ್ರಜ್ಞಾವಂತರ ಆತಂಕ ಇಂದು ನಿಜವಾಗಿದೆ. ಉರುಳಿಸುವ ಚಳವಳಿಯ ನೇತಾರರಾಗಿದ್ದ ತಾವು ಮಾತ್ರ ಇಂದು "ಧ್ವಂಸಗೊಳಿಸದಂತೆ ತಡೆಯಲು ಶಕ್ತಿಮೀರಿ ಯತ್ನಿಸಿದೆ. ಹಿಂದು ಮುಸ್ಲಿಮರು ಸೌಹಾರ್ದದಿಂದ ಬದುಕಬೇಕು" ಎಂದು ಕರೆನೀಡುತ್ತಿದ್ದೀರಿ. ಇನ್ನೊಂದೆಡೆ "ರಾಮಮಂದಿರ ಅಲ್ಲೇ ನಿರ್ಮಾಣವಾಗುವುದು ನನ್ನ ಕನಸು" ಅನ್ನುತ್ತೀರಿ. ಆದರೆ ಈಗಲಾದರೂ ತಾವು ಸಂಘಪರಿವಾರ ಮುಸ್ಲಿಂ ವಿರೋಧಿ ರಾಜಕಾರಣವನ್ನು ಕೊನೆಗೊಳಿಸಲು (ಅದು ಅಸಾಧ್ಯ) ಪ್ರಯತ್ನಿಸಬೇಕು. ಸಾಧ್ಯವಿಲ್ಲದಿದ್ದರೆ ಕನಿಷ್ಠ ತಾವಾದರೂ ಪರಿವಾರದಿಂದ ಹೊರಬಂದು ಕೋಮುವಾದದ ಅಪಾಯದ ವಿರುದ್ಧ ಒಂದು ಆಂದೋಲನವನ್ನು ಕೈಗೊಳ್ಳಬೇಕು. ಇದೆಲ್ಲ ಅಸಾಧ್ಯ ಅಂದಾದರೆ ತಮ್ಮ ವಿರೋಧಿಗಳು ಆರೋಪಿಸುವಂತೆ ಇಫ್ತಾರ್ ಕೂಟವು ಸಹ ಅಸ್ಪೃಶ್ಯತೆಯ ವಿರುದ್ಧ ದಲಿತರ ಕೇರಿಯಲ್ಲಿನ ತಮ್ಮ ಪಾದಯಾತ್ರೆಯಂತೆ ರಾಜಕೀಯ ನಾಟಕ, ಸಂಘಪರಿವಾರದ ರಾಜಕೀಯ ತಂತ್ರದ ಒಂದು ಜಾಣ ನಡೆ ಎಂದು ಮುಸ್ಲಿಂ ಸಮುದಾಯ ಭಾವಿಸುವ ಸಾಧ್ಯತೆಯೇ ಹೆಚ್ಚು.

(ಪೇಜಾವರ ಸ್ವಾಮೀಜಿಗಳಿಗೆ ಮುನೀರ್ ಕಾಟಿಪಳ್ಳ ಪತ್ರ)

ಹಿರಿಯರಾದ ಶ್ರೀ ಪೇಜಾವರ ಸ್ವಾಮೀಜಿಗಳಿಗೆ ವಂದನೆಗಳು.

ಮುಸ್ಲಿಮರ ಪಾಲಿಗೆ ಪವಿತ್ರವಾಗಿರುವ ರಂಜಾನ್ ವ್ರತಾಚರಣೆಯ ಕೊನೆಯ ದಿನ ತಾವು ಮಠದಲ್ಲಿ ಇಫ್ತಾರ್ ಕೂಟ ಆಯೋಜಿಸಿದ್ದು, ಇಫ್ತಾರ್ ಗೆ ಆಗಮಿಸಿದ ಮುಸಲ್ಮಾನರಿಗೆ ಮಠದ ಆವರಣದಲ್ಲಿ ನಮಾಜಿಗೆ ಅವಕಾಶ ಕಲ್ಪಿಸಿದ್ದು ತಿಳಿದು ತುಂಬಾ ಖುಷಿ ಪಟ್ಟೆ. ಮುಸ್ಲಿಂ ಸಮುದಾಯದ ವಿರುದ್ಧ ದ್ವೇಷ ಶರವೇಗದಲ್ಲಿ ದೇಶದಲ್ಲಿ ಹಬ್ಬುತ್ತಿದೆ. ಆಹಾರ, ಉಡುಗೆಯ ಕಾರಣಕ್ಕೆ ಮುಸ್ಲಿಮರನ್ನು ಅನುಮಾನಿಸುವ, 'ಸಾರ್ವಜನಿಕರು' ಗುಂಪು ಸೇರಿ ರೈಲು, ಮಾರುಕಟ್ಟೆಗಳಲ್ಲಿ ಹಲ್ಲೆ ನಡೆಸುವ ಅಪಾಯಕಾರಿ ಸಂದರ್ಭದಲ್ಲಿ ಪ್ರಮುಖ ಮಠ, ಹಿರಿಯ ಯತಿಯೊಬ್ಬರು ಇಫ್ತಾರ್ ಕೂಟ ಆಯೋಜಿಸುವುದು ನಿಜಕ್ಕೂ ಆಶಾದಾಯಕ ಬೆಳವಣಿಗೆ. ಅದಕ್ಕಾಗಿ ತಮ್ಮನ್ನು ಮನಪೂರ್ವಕವಾಗಿ ಅಭಿನಂದಿಸುತ್ತೇನೆ. ಅದೇ ಸಂದರ್ಭ ಇಫ್ತಾರ್ ಸಭೆಯಲ್ಲಿದ್ದ ಮುಸ್ಲಿಮರನ್ನುದ್ದೇಶಿಸಿ ತಾವು ಆಡಿದ ಒಂದೆರೆಡು ಮಾತುಗಳು ನನ್ನಲ್ಲಿ ಪ್ರಶ್ನೆಗಳನ್ನು ಹುಟ್ಟಿಸಿವೆ. ಅದನ್ನು ತಮ್ಮಲ್ಲಿ ಹಂಚಿಕೊಳ್ಳುವ ಉದ್ದೇಶದಿಂದ ಈ ಬಹಿರಂಗ ಪತ್ರವನ್ನು ಬರೆಯುತ್ತಿದ್ದೇನೆ.

"ಬಾಬ್ರಿ ಮಸೀದಿ ಧ್ವಂಸಗೊಳ್ಳುವುದನ್ನು ತಪ್ಪಿಸಲು ಶಕ್ತಿಮೀರಿ ನಾನು ಪ್ರಯತ್ನಿಸಿದೆ" ಎಂದು ಹೇಳಿದ್ದೀರಿ. ಸಾಮಾನ್ಯ ತಿಳುವಳಿಕೆಯ ಪ್ರಕಾರ ಬಾಬ್ರಿ ಮಸೀದಿ ಕೆಡವಲಿಕ್ಕಾಗಿಯೇ ಸಂಘ ಪರಿವಾರ ರಾಮಮಂದಿರ ಆಂದೋಲನವನ್ನು ಹುಟ್ಟು ಹಾಕಿತ್ತು. ಮಸೀದಿ ಕೆಡವುವ ಉದ್ದೇಶದಿಂದಲೆ ಅಯೋಧ್ಯೆಯಲ್ಲಿ ಕರಸೇವೆಯ ಹೆಸರಿನಲ್ಲಿ ಲಕ್ಷಾಂತರ ಜನರನ್ನು ಸೇರಿಸಲಾಗಿತ್ತು. (ಹಾಗೆ ಮಸೀದಿ ಕೆಡಹಿಯೇ ಸಿದ್ದ ಎಂದು ದೇಶಾದ್ಯಂತ ಚಳವಳಿಗೆ ಇಳಿದಿದ್ದ ವಿಶ್ವಹಿಂದೂ ಪರಿಷತ್ ಗೆ ತಾವು ಉಪಾಧ್ಯಕ್ಷರು, ಮಾತೃಸಂಸ್ಥೆ ಸಂಘಪರಿವಾರ ತಮ್ಮನ್ನು ಮಾರ್ಗದರ್ಶಕ ಅಂತಲೇ ಸಂಭೋಧಿಸುತ್ತದೆ) ಹಾಗೆ ಸೇರಿಸಲಾದ ಜನಜಂಗುಳಿಯ ನಾಯಕತ್ವ ವಹಿಸಿದವರಲ್ಲಿ ತಾವೂ ಒಬ್ಬರು. ಒಡೆಯಲಿಕ್ಕಾಗಿಯೇ ಕಾರ್ಯಕ್ರಮ ಆಯೋಜಿಸಿ, ಅದಕ್ಕೆ ನಾಯಕತ್ವ ಕೊಟ್ಟು "ನನಗೆ ನೋವಾಗಿದೆ, ತಡೆಯಲು ಯತ್ನಿಸಿದೆ" ಎಂದರೆ ನಂಬುವುದಾದರು ಹೇಗೆ? ಅದಲ್ಲದೆ ಅಂದು ಮಸೀದಿಯ ಮಿನಾರಗಳು ಉರುಳಿ ಬೀಳುತ್ತಿದ್ದಾಗ ತಮ್ಮ ಶಿಷ್ಯೆ ಸಾಧ್ವಿ ಉಮಾಭಾರತಿ, ಹಿರಿಯ ಮುಖಂಡ ಮುರಳಿ ಮನೋಹರ ಜೋಷಿ ಸಹಿತ ಪರಿವಾರದ ಮುಖಂಡರು ಸಂಭ್ರಮಾಚರಣೆಯಲ್ಲಿ ತೊಡಗಿದ್ದ-ಕ್ಕೆ ತಾವು ಪ್ರತ್ಯಕ್ಷ ಸಾಕ್ಷಿಯಾಗಿದ್ದಿರಿ. ಒಂದೆಡೆ ರಾಮಮಂದಿರ ಅಲ್ಲಿಯೇ ನಿರ್ಮಾಣ ಆಗಬೇಕು ಎಂದು ಅಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿದ್ದೀರಿ. ಇನ್ನೊಂದೆಡೆ ಮಸೀದಿ ಉರುಳಿದ್ದು ದುಃಖದ ಸಂಗತಿ ಎನ್ನುತ್ತೀರಿ. ಇದು ಹೇಗೆ ಸಾ ಧ್ಯ? ಈ ರೀತಿಯ ದ್ವಂದ್ವ ನಿಮ್ಮಂತ ಹಿರಿಯರಿಗೆ ಶೋಭಿಸುವುದಿಲ್ಲ.



ಇನ್ನು "ಹಿಂದು ಮುಸ್ಲಿಮರು ಸಹೋದರರಂತೆ ಬಾಳಬೇಕು, ಬಾಂಧವ್ಯ ಬೆಳೆಯಬೇಕು. ಅಂತಹ ಉದ್ದೇಶದಿಂದ ಇಫ್ತಾರ್ ಆಯೋಜಿಸಿದ್ದೇನೆ" ಅಂದಿದ್ದೀರಿ. ಆದರೆ ಅದು ಸಾಧ್ಯ ಅಂತ ತಮಗೆ ಅನಿಸುತ್ತದೆಯೇ ಶ್ರೀಗಳೆ?

ಉತ್ತರ ಪ್ರದೇಶದ ಅಖ್ಲಾಕ್ ನನ್ನು ಫ್ರಿಜ್ಜಲ್ಲಿ ದನದ ಮಾಂಸ ಇರುವ ಅನುಮಾನದಲ್ಲಿ ಮನೆಗೆ ನುಗ್ಗಿ ಥಳಿಸಿ 'ಗ್ರಾಮಸ್ಥರು' ಥಳಿಸಿ ಕೊಂದರು. ರಾಜಸ್ತಾನದ ರೈತ ಪೆಹ್ಲೂ ಖಾನ್ ಪಶುಪಾಲನೆಗೆ ಜಾನುವಾರು ಸಾಗಿಸುತ್ತಿರುವಾಗ ಗೋಹತ್ಯೆಯ ಅನುಮಾನದಲ್ಲಿ ಗೋರಕ್ಷಕ ದಳದವರು ರಸ್ತೆ ಬದಿಯಲ್ಲಿ ಕೊಂದು ಹಾಕಿದರು. ಮೊನ್ನೆ ದೆಹಲಿಯ ರೈಲಿನಲ್ಲಿ ಹದಿನೈದರ ಹರೆಯದ ಬಾಲಕ ಜುನೈದ್ ಮತ್ತವನ ಸಹೋದರರನ್ನು 'ಸಾರ್ವಜನಿಕರು' ತುಂಬಿದ ರೈಲಿನಲ್ಲಿ ಓಡಾಡಿಸಿ ಬಡಿದರು. ಇಫ್ತಾರ್ ಅನ್ನು ತಾಯಿಯೊಂದಿಗೆ ಆಚರಿಸಲು ಧಾವಿಸುತ್ತಿದ್ದ ಜುನೈದ್ ಸತ್ತೇ ಹೋದ. ದೆಹಲಿ ಜೆ ಎನ್ ಯು ವಿದ್ಯಾರ್ಥಿ ನಜೀಬ್ ಕಾಣೆಯಾಗಿ ವರ್ಷವಾಗುತ್ತ ಬಂದಿದೆ. ಈವರೆಗೆ ಆತನ ಸಾವಿನ ಸುದ್ದಿಯನ್ನು ಖಾತರಿ ಪಡಿಸಲು ಆಡಳಿತಕ್ಕೆ ಸಾಧ್ಯವಾಗಲಿಲ್ಲ.

ಇವು ಖಂಡಿತವಾಗಿಯೂ ಬಿಡಿ ಘಟನೆಗಳಲ್ಲ. ದೇಶಾದ್ಯಂತ ವ್ಯಾಪಿಸಿರುವ ಪರಿಸ್ಥಿತಿಯ ಕೆಲ ತುಣುಕುಗಳಷ್ಟೆ. ನಾನು, ನೀವು ಇಬ್ಬರೂ ವಾಸಿಸುತ್ತಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ನಾನು ಪ್ರತ್ಯೇಕ ಹೇಳಬೇಕಿಲ್ಲ. ಇಲ್ಲಿ ಇಂಥ ಘಟನೆಗಳು ದಿನ ನಿತ್ಯದ ವಿದ್ಯಮಾನ. ಜುನೈದ್, ನಜೀಬ್ ತಾಯಂದಿರು ಪುತ್ರಶೋಕದಿಂದಲೆ ಈ ಬಾರಿ ಈದ್ ಆಚರಿಸಿದರು. ಇದು ಆ ತಾಯಂದಿರ ಶೋಕ, ಆತಂಕ ಮಾತ್ರವಲ್ಲ. ಇಡೀ ಇಂಡಿಯಾದ ಮುಸ್ಲಿಮರ ಆತಂಕ. ತಮ್ಮನ್ನು ಈ ಪ್ರಜಾಪ್ರಭುತ್ವ ದೇಶದಲ್ಲಿ ಹೇಗೆ ಬೇಕಾದರು ನಡೆಸಿಕೊಳ್ಳಬಹುದು, 'ಉದ್ರಿಕ್ತ' ಜನಜಂಗುಳಿ ಸಾರ್ವಜನಿಕವಾಗಿಯೇ ಹೊಡೆದು ಸಾಯಿಸಬಹುದು, ಅಡುಗೆ ಮನೆಗೆ ನುಗ್ಗಿ ಪರೀಕ್ಷಿಸಬಹುದು ಎಂಬುದನ್ನು ಅರಗಿಸಿಕೊಳ್ಳಲಾಗದೆ ಸಮುದಾಯ ಚಡಪಡಿಸುತ್ತಿದೆ. ಭಯದಿಂದ ವಿಹ್ವಲಗೊಂಡಿದೆ. ಇನ್ನು ವ್ಯಾಪಕಗೊಳ್ಳುತ್ತಿರುವ ಮುಸ್ಲಿಂ ವಿರೋಧಿ ಅಭಿಯಾನಗಳಿಂದ ಆರ್ಥಿಕವಾಗಿ ತೀರಾ ಹಿಂದುಳಿದಿರುವ ಈ ಸಮುದಾಯದ ಅಭಿವೃದ್ಧಿಗೆ ಬೇಕಾದ ಯಾವ ಯೋಜನೆಯನ್ನೂ ಸರಕಾರಗಳು ಕೈಗೊಳ್ಳದಂತಹ ಸ್ಥಿತಿ ಇಂದು ನಿರ್ಮಾಣವಾಗಿದೆ. ಇದು ಸಾಮಾಜಿಕವಾಗಿ, ಆರ್ಥಿಕವಾಗಿ ಮುಸ್ಲಿಮರನ್ನು ದಲಿತರ ಬದುಕಿಗಿಂತಲೂ ಕೆಳಹಂತಕ್ಕೆ ಬಲವಂತವಾಗಿ ತಳ್ಳುತ್ತಿದೆ.

ಇಷ್ಟೊಂದು ಪ್ರಮಾಣದಲ್ಲಿ ಮುಸ್ಲಿಂ ವಿರೋಧಿ ಭಾವನೆ ಬಹುಸಂಖ್ಯಾತ ಸಮುದಾಯದಲ್ಲಿ ಯಾಕೆ ಗಟ್ಟಿಯಾಗಿ ಬೇರೂರುತ್ತಿದೆ ಎಂದು ಆಲೋಚಿಸಿದ್ದೀರಾ ಪ್ರಿಯ ಸ್ವಾಮೀಜಿ - ಇಂದು ಈ ಮಟ್ಟಿಗಿನ ಸ್ಥಿತಿ ನಿರ್ಮಾಣವಾಗಲು ಎರಡೂವರೆ ದಶಕದ ಹಿಂದೆ ತಾವು ಭಾಗವಾಗಿದ್ದ 'ರಾಮ ಜನ್ಮ ಭೂಮಿ' ಚಳವಳಿಯನ್ನು ಸಂಘಪರಿವಾರ ತೀವ್ರಗೊಳಿಸಿದ್ದು, ಬಾಬ್ರಿ ಮಸೀದಿ ಉರುಳಿ ಬಿದ್ದದ್ದು ಕಾರಣ. ಅಂದು ಮಸೀದಿ ಉರುಳಿಸಿ, ಆ ದ್ವೇಷಪೂರಿತ ವಾತಾವರಣವನ್ನು ಬಳಸಿಕೊಂಡು ಹಿಂದುತ್ವದ ರಾಜಕಾರಣವನ್ನು ಸಂಘಪರಿವಾರ ದೇಶಾದ್ಯಂತ ಹರಡಿತು. ಅಂದು ಹಚ್ಚಿದ ಬೆಂಕಿಯ ಬೆಳಕಿನಲ್ಲಿ ತನ್ನ ಅಜೆಂಡಾದಲ್ಲಿದ್ದ ಗೋಹತ್ಯೆ, ಮತಾಂತರ, ಸಮಾನ ನಾಗರಿಕ ಸಂಹಿತೆ, ರಾಷ್ಟ್ರೀಯತೆ ಮುಂತಾದ ವಿಷಪೂರಿತ ವಿಷಯಗಳನ್ನು ಮುಂದಿಟ್ಟು ದೇಶದಲ್ಲಿ ಮುಸ್ಲಿಂ ವಿರೋಧಿ ಭಾವನೆಯನ್ನು ತಳಮಟ್ಟದಲ್ಲೇ ಗಟ್ಟಿಗೊಳಿಸುವಲ್ಲಿ ಯಶಸ್ವಿಯಾಯಿತು. ಬಾಬ್ರಿ ಮಸೀದಿ ಉರುಳಿದ ನಂತರ ದೇಶ ಹಿಂದಿನಂತಿರಲು ಸಾಧ್ಯವಿಲ್ಲ ಎಂಬ ಪ್ರಜ್ಞಾವಂತರ ಆತಂಕ ಇಂದು ನಿಜವಾಗಿದೆ. ಉರುಳಿಸುವ ಚಳವಳಿಯ ನೇತಾರರಾಗಿದ್ದ ತಾವು ಮಾತ್ರ ಇಂದು "ಧ್ವಂಸಗೊಳಿಸದಂತೆ ತಡೆಯಲು ಶಕ್ತಿಮೀರಿ ಯತ್ನಿಸಿದೆ. ಹಿಂದು ಮುಸ್ಲಿಮರು ಸೌಹಾರ್ದದಿಂದ ಬದುಕಬೇಕು" ಎಂದು ಕರೆನೀಡುತ್ತಿದ್ದೀರಿ. ಇನ್ನೊಂದೆಡೆ "ರಾಮಮಂದಿರ ಅಲ್ಲೇ ನಿರ್ಮಾಣವಾಗುವುದು ನನ್ನ ಕನಸು" ಅನ್ನುತ್ತೀರಿ.

ಮಸೀದಿ ಧ್ವಂಸದ ನಂತರ ಕಾಣಿಸಿಕೊಂಡ ಮತೀಯ ಅಪನಂಬಿಕೆ, ದ್ವೇಷ, ಮತಾಂಧತೆ. ಇದೆಲ್ಲವನ್ನೂ, ತಾವು ಭಾಗಿಯಾಗಿರುವ ಸಂಘಟನೆ ವ್ಯವಸ್ಥಿತವಾಗಿ ಕಟ್ಟಿ ಬೆಳೆಸಿರುವಂತದ್ದು. ಈಗ ತಾವು ತಮ್ಮ ಪರಿವಾರದ ಸಿದ್ದಾಂತಗಳಿಗೆ ವ್ಯತಿರಿಕ್ತವಾಗಿ ಇಫ್ತಾರ್ ಕೂಟ ಆಯೋಜಿಸಿದ್ದೀರಿ. ನಮಾಜ್ ಗೆ ಅವಕಾಶ ಕಲ್ಪಿಸಿದಿರಿ. ಸಂತೋಷ. ದೇಶದಲ್ಲಿ ಮತ್ತೆ ಬಾಬರಿ ಮಸೀದಿ ಧ್ವಂಸದ ಪೂರ್ವ ದಿನಗಳು ಮರಳಲು ಇಂತಹ ಎಷ್ಟು ಕೆಲಸಗಳು ನಡೆದರೂ ಸಾಲದು. ಅದರೊಂದಿಗೆ ಬಾಬರಿ ಮಸೀದಿ ಧ್ವಂಸದ ಆಂದೋಲನದಲ್ಲಿ ಭಾಗಿಯಾಗಿದ್ದಕ್ಕೆ, ಈಗಿನ ಅಸಹಿಷ್ಣು ಸ್ಥಿತಿಯ ಬಗ್ಗೆ ತಮ್ಮ ಆತಂಕ ಪ್ರಾಮಾಣಿಕವಾದದ್ದೇ, ಆದರೆ ಈಗಲಾದರೂ ತಾವು ಸಂಘಪರಿವಾರ ಮುಸ್ಲಿಂ ವಿರೋಧಿ ರಾಜಕಾರಣವನ್ನು ಕೊನೆಗೊಳಿಸಲು (ಅದು ಅಸಾಧ್ಯ) ಪ್ರಯತ್ನಿಸಬೇಕು. ಸಾಧ್ಯವಿಲ್ಲದಿದ್ದರೆ ಕನಿಷ್ಠ ತಾವಾದರೂ ಪರಿವಾರದಿಂದ ಹೊರಬಂದು ಕೋಮುವಾದದ ಅಪಾಯದ ವಿರುದ್ಧ ಒಂದು ಆಂದೋಲನವನ್ನು ಕೈಗೊಳ್ಳಬೇಕು. ಇದೆಲ್ಲ ಅಸಾಧ್ಯ ಅಂದಾದರೆ ತಮ್ಮ ವಿರೋಧಿಗಳು ಆರೋಪಿಸುವಂತೆ ಇಫ್ತಾರ್ ಕೂಟವು ಸಹ ಅಸ್ಪೃಶ್ಯತೆಯ ವಿರುದ್ಧ ದಲಿತರ ಕೇರಿಯಲ್ಲಿನ ತಮ್ಮ ಪಾದಯಾತ್ರೆಯಂತೆ ರಾಜಕೀಯ ನಾಟಕ, ಸಂಘಪರಿವಾರದ ರಾಜಕೀಯ ತಂತ್ರದ ಒಂದು ಜಾಣ ನಡೆ ಎಂದು ಮುಸ್ಲಿಂ ಸಮುದಾಯ ಭಾವಿಸುವ ಸಾಧ್ಯತೆಯೇ ಹೆಚ್ಚು.

ಹಾಗಾಗದಿರಲಿ ಎಂದು ಹಾರೈಸುತ್ತಾ ನನ್ನ ಪತ್ರವನ್ನು ಕೊನೆಗಾಣಿಸುತ್ತೇನೆ.

ನಮಸ್ಕಾರ.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ

ಮುನೀರ್ ಕಾಟಿಪಳ್ಳ,
ರಾಜ್ಯಾಧ್ಯಕ್ಷರು, ಡಿ.ವೈ.ಎಫ್.ಐ.

ಇಫ್ತಾರ್ ಕೂಟಕ್ಕೂ, ವಿವಾದಕ್ಕೂ ರಾಮಮಂದಿರಕ್ಕೂ ಸಂಬಂಧ?

ಸುಪ್ರೀಂ ಕೋರ್ಟ್ ಅಯೋ ಧ್ಯೆ ವಿವಾದವನ್ನು ಮೀಡಿಯೇಷನ್ ಮೂಲಕ ಬಗೆಹರಿಸಲು ಸಲಹೆ ನೀಡಿದೆ. ರಾಮ ದೇವಸ್ಥಾನ ನಿರ್ಮಾಣದ ರೂಪುರೇಷೆ ನವಂಬರ್ ನಲ್ಲಿ ಎಂದಿದ್ದಾನೆ ಸಾಕ್ಷಿ ಮಹಾರಾಜ್. ಮಹತ್ವದ ಸಭೆ ಉಡುಪಿಯಲ್ಲಿ ನಡೆಯಲಿದೆಯಂತೆ. ಈ ಬಾರಿ ರಾಜಧರ್ಮದ ಬಗ್ಗೆ ಮೋದಿ ಮಾತಾಡುತ್ತಿದ್ದಂತೆ ಸಂಘಪರಿವಾರದ ಪೋಲಿ ಪಟಾಲಂ ವಿವಾದಿತ ಜಾಗದಲ್ಲಿ ದೇವಸ್ಥಾನ ನಿರ್ಮಿಸುತ್ತದೆ. ಅದಕ್ಕೂ ಹಿಂದೆ ಮಧ್ಯಸ್ಥಿಕೆ ಪ್ರಯತ್ನವನ್ನು ನಡೆಸಿದರೆ ಅದಕ್ಕೆ ಛೀಫ್ ಮೀಡಿಯೇಟರ್ ಆಗಲು ಈಗ ಪೇಜಾವರ ಸ್ವಾಮೀಜಿ ಸಿದ್ಧರಾಗಿಯೇ ಈ ಇಫ್ತಾರ್ ಕೂಟ ನಡೆಸಿದ್ದು. ಎಲ್ಲವೂ ಸಂಘಪರಿವಾರದ ಮಾಸ್ಟರ್ ಪ್ಲಾನ್ ಗೆ ಅನುಗುಣವಾಗಿ. ಇಫ್ತಾರ್ ವಿರುದ್ಧದ ಪ್ರತಿಭಟನೆಯೂ ಇದರ ಭಾಗವೇ..

-ಬಾಲಕೃಷ್ಣ ಶೆಟ್ಟಿ

ಉಡುಪಿ ಕೃಷ್ಣ ಮಠ ಕಟ್ಟಲು ಮುಸ್ಲಿಮರೇ ಭೂಮಿ ನೀಡಿದ್ದು ಎಂದು ಪೇಜಾವರ ಶ್ರೀಗಳು ಹೇಳುವ ಮೂಲಕ, ಉಡುಪಿಯಲ್ಲಿ ನಡೆಯುವ ರಾಮ ಮಂದಿರ ಕಟ್ಟುವ ಸಭೆಗೆ ಸಿದ್ಧತೆಯೇ?

ಉಡುಪಿ ಕೃಷ್ಣ ಮಠ ಕಟ್ಟಲು ಮುಸ್ಲಿಮರೇ ಭೂಮಿ ನೀಡಿದ್ದು:ಎಂದು ಪೇಜಾವರ ಶ್ರೀಗಳು ಹೇಳುವ ಮೂಲಕ, ಉಡುಪಿಯಲ್ಲಿ ಮುಂದಿನ ದಿನಗಳಲ್ಲಿ ನಡೆಯುವ ರಾಮ ಮಂದಿರ ಕಟ್ಟುವ ಸಭೆಯಲ್ಲಿ ಪೇಜಾವರ ಶ್ರೀಗಳು.. ಇದೇ ರಾಗ ಸಂಯೋಜನೆ ಮಾಡಿ.. ಉಡುಪಿ ಕೃಷ್ಣ ಮಠ ಕಟ್ಟಲು ಭೂಮಿ ಕೊಟ್ಟ ಮುಸ್ಲಿಮರು.. ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟಲು ಮುಸ್ಲಿಮರು ಭೂಮಿ ಬಿಟ್ಟು ಕೊಡಿ ಎಂಬ ವರಸೆಯಲ್ಲಿ ಕ್ಯಾತೆ ತೆಗೆದರು ಅಚ್ಚರಿ ಪಡಬೇಕಾಗಿಲ್ಲ ಎಂದು ನನಗೆ ಅನಿಸುತ್ತಿದೆ.

-ವಾಸುದೇವ ರೆಡ್ಡಿ

'ಮಠದಲ್ಲಿ ಇಫ್ತಾರ್' ಒಂದು ನಾಟಕ ಅಲ್ಲದಿದ್ದರೆ, ತನ್ನ ಸದಸ್ಯರೇ ಬೀದಿ ಜಗಳ ಮಾಡುತ್ತಿರುವಾಗ ಆರೆಸ್ಸೆಸ್ ಯಾರನ್ನಾದರೂ ಕರೆಸಿ ಬುದ್ದಿವಾದ ಹೇಳಿದೆಯೇ? ಯಾರಿಗಾದರೂ ಎಚ್ಚರಿಕೆ ನೀಡಿದೆಯೇ? ಯಾರನ್ನಾದರೂ ಸಂಘದಿಂದ ಉಚ್ಚಾಟಿಸಿದೆಯೇ? ಪೇಜಾವರ ಶ್ರೀಗಳು ಮಾಡಿದ್ದು ಸರಿ ಅಥವಾ ತಪ್ಪು ಎಂದು ಆರೆಸ್ಸೆಸ್ ನ ಉನ್ನತ ಮುಖಂಡರು ಹೇಳಿದ್ದಾರೆಯೇ. ಬಿಜೆಪಿ ಪಕ್ಷದಿಂದ ಮುಂದಿನ ಮುಖ್ಯಮಂತ್ರಿ ಆಗುತ್ತಾರೆಂದು ಬಿಂಬಿಸಲಾಗುವ ಸಂತೋಷ್ ಅವರು ಈ ವಿಷಯದಲ್ಲಿ ಮೌನವಾಗಿರುವುದೇಕೆ? ಕೇಶವ ಕೃಪ ಮೌನವಾಗಿರುವುದೇಕೆ? ಪೇಜಾವರರ ನಡೆ ಸರಿ ಎನ್ನುವುದಾದರೆ ಮುತಾಲಿಕ್, ಶೋಭಾ ರಂತವರ ಬಾಯಿ ಮುಚ್ಚಿಸಲು ಆರೆಸ್ಸೆಸ್ ಮುಂದಾಗುತ್ತಿಲ್ಲವೇಕೆ? ಪೇಜಾವರರ ನಡೆ ಸರಿಯಿಲ್ಲ ಎನ್ನುವುದಾದರೆ ಶ್ರೀಗಳನ್ನು ವಿಶ್ವ ಹಿಂದೂ ಪರಿಷತ್ ನಿಂದ ಉಚ್ಚಾಟಿಸುತ್ತಿಲ್ಲವೇಕೆ? ಅಷ್ಟ ಮಠದ ಸ್ವಾಮೀಜಿಯೊಬ್ಬರು 'ಪೇಜಾವರರ ನಡೆ-ಯೂ ಸರಿ ಇದೆ, ಶ್ರೀರಾಮ ಸೇನೆಯ ಪ್ರತಿಭಟನೆಯೂ ಸರಿ ಇದೆ' ಎಂದು ಹೇಳಿರುವುದು ಏನನ್ನು ಸೂಚಿಸುತ್ತದೆ? ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸರಳ. ಅವರ ಈ ಕಿತ್ತಾಟ ನಿಜವಲ್ಲ. ಅದೊಂದು ನಾಟಕ. ಇವರು ಸಂಘಪರಿವಾರ ರಚಿಸಿದ ನಾಟಕದ ಕತೆಯ ಪಾತ್ರಧಾರಿಗಳಷ್ಟೆ.

-ಸಿ. ಸಿದ್ದಯ್ಯ

ಸಹಕಾರಿ ಬ್ಯಾಂಕುಗಳ 9000 ಕೋಟಿ ರೂ.ಗಳನ್ನು ನಿಷ್ಪ್ರಯೋಜಕಗೊಳಿಸಿಟ್ಟ ಆಡಳಿತ 'ದಕ್ಷತೆ'!

ನೋಟುರದ್ದತಿಯ ದಿನಗಳಲ್ಲಿ ದಿನಕ್ಕೊಂದು ತಿದ್ದುಪಡಿ ಅಧಿಸೂಚನೆ ನೀಡುತ್ತ ತನ್ನ 'ಉತ್ತಮ ಆಳ್ವಿಕೆ'ಯ ನಿಜಬಣ್ಣವನ್ನು ತೋರಿಸಿದ ಕುಖ್ಯಾತಿಯ ಸರಕಾರ ಈಗ ಆರು ತಿಂಗಳ ನಂತರ ಮತ್ತೆರಡು 'ಪರಿಷ್ಕೃತ' ಅಧಿಸೂಚನೆಗಳನ್ನು ಹೊರಡಿಸಿದೆ. ಅದರಲ್ಲಿ ಒಂದು–ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ನವಂಬರ್10ರಿಂದ 14 ರ ನಡುವೆ ಪಡೆದ ಹಳೆಯ 500ಮತ್ತು 1000ರೂ.ಗಳ ನೋಟುಗಳನ್ನು ಜೂನ್ 20ರಿಂದ 30 ದಿನಗಳ ವರೆಗೆ ರಿಝರ್ವ್ ಬ್ಯಾಂಕ್ ಕಚೇರಿಗಳಲ್ಲಿ ವಿನಿಮಯ ಮಾಡಿಕೊಳ್ಳಬಹುದು ಎಂಬುದು. ಈ ಮೂಲಕ ಅದು ಆ 'ಉತ್ತಮ ಆಳ್ವಿಕೆ'ಯನ್ನು ಮತ್ತೆ ನೆನಪಿಸಿದೆ, ಪುನರಾವರ್ತಿಸಿದೆ.

ಏಳೂವರೆ ತಿಂಗಳ ಹಿಂದೆ ನೋಟುರದ್ದತಿಯ ನಂತರ ಹಳೆಯ ನೋಟು ವಿನಿಮಯ ಆರಂಭವಾದ 4ನೇ ದಿನ ಸರಕಾರ ಸಹಕಾರಿ ಬ್ಯಾಂಕುಗಳು ಹಳೆಯ ರದ್ದಾದ ನೋಟುಗಳ ವಿನಿಮಯ ಮಾಡುವಂತಿಲ್ಲ ಎಂದು ಪ್ರಕಟಿಸಿತು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು. ಸಹಕಾರಿ ಬ್ಯಾಂಕುಗಳು ಮತ್ತು ಕೇರಳ ಮತ್ತಿತರ ರಾಜ್ಯ ಸರಕಾರಗಳು ಈ ಕ್ರಮ ಅನ್ಯಾಯದ್ದು ಎಂದು ಆಕ್ಷೇಪ ಎತ್ತಿದರೂ ಈ ನಿಷೇಧ ಮುಂದುವರೆಯಿತು–ಗ್ರಾಮೀಣ ಜನಗಳ ನೋಟುರದ್ದತಿಯ ಬವಣೆಗಳನ್ನು ಮತ್ತಷ್ಟು ಹೆಚ್ಚಿಸುತ್ತ.

ಈಗ ಈ 'ಪರಿಷ್ಕೃತ' ಅಧಿಸೂಚನೆ ಏಕೆ ಬಂತು? ಆ ನಾಲ್ಕು ದಿನಗಳಲ್ಲಿ ಸಹಕಾರಿ ಬ್ಯಾಂಕುಗಳು 9000 ಕೋಟಿ ರೂ. ಸಂಗ್ರಹಿಸಿದ್ದವು. ಇದು ಅಧಿಸೂಚನೆಯ ಪ್ರಕಾರ ಕಾನೂನುಬದ್ಧವಾಗಿಯೇ ಸಂಗ್ರಹಿಸಿದ ಹಣವಾದರೂ ರಿಝರ್ವ್ ಬ್ಯಾಂಕ್ ಇದನ್ನು ವಿನಿಮಯ ಮಾಡಲು ನಿರಾಕರಿಸಿತು. ಈ ಮೌಲ್ಯ ಕಳೆದುಕೊಂಡ ಹಣದ ಭಾರ ಹೊರಬೇಕಾದ ಸಹಕಾರಿ ಬ್ಯಾಂಕುಗಳು ನಿರ್ವಾಹವಿಲ್ಲದೆ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದವು. ಸಹಕಾರಿ ಬ್ಯಾಂಕುಗಳು ತಮ್ಮ ಗಿರಾಕಿಗಳ ಬಗ್ಗೆ ಜಾಗರೂಕತೆ ವಹಿಸುವುದಿಲ್ಲ(ಕೆವೈಸಿ ನಿಯಮಗಳನ್ನು ಪಾಲಿಸುವದಿಲ್ಲ) ವಾದ್ದರಿಂದ ಕಪ್ಪು ಹಣಕ್ಕೆ ಅವಕಾಶವಾಗುತ್ತದೆ ಎಂಬುದು ಈ ನಿಷೇಧಕ್ಕೆ ಕೊಟ್ಟ ಕಾರಣವಾಗಿತ್ತು. ಸುಪ್ರಿಂ ಕೋರ್ಟ್ ಈ ಬಗ್ಗೆ ತನಿಖೆ ಮಾಡಿ ರಿಝರ್ವ್ ಬ್ಯಾಂಕ್‌ಗೆ ವರದಿ ಸಲ್ಲಿಸಬೇಕು ಎಂದು ನಬಾರ್ಡ್‌ಗೆ ಆದೇಶ ನೀಡಿತು, ಅನಂತರ ರಿಝರ್ವ್ ಬ್ಯಾಂಕ್ ಈ ಸಹಕಾರಿ ಬ್ಯಾಂಕುಗಳ ನೋಟುಗಳನ್ನು ವಿನಿಮಯ ಮಾಡಬೇಕು ಎಂದು ಹೇಳಿತು.

ನಬಾರ್ಡ್ ಈ ವರದಿಯನ್ನು ಸಲ್ಲಿಸಿ ಎರಡು ತಿಂಗಳಾದರೂ ರಿಝರ್ವ್ ಬ್ಯಾಂಕ್ ಅ ವರದಿಯ ಮೇಲೆ ಏನೂ ಮಾಡಲಿಲ್ಲ. ಈ ವರದಿ ಸಹಕಾರಿ ಬ್ಯಾಂಕುಗಳಲ್ಲಿ ಇಂತಹ ಯಾವುದೇ ನಿಯಮಬಾಹಿರತೆ ಕಂಡು ಬಂದಿಲ್ಲ ಎಂದು ಹೇಳಿರುವುದಾಗಿ ಮಾಧ್ಯಮಗಳಲ್ಲಿ ವರದಿಗಳು ಬರಲಾರಂಭಿಸಿದಾಗ ಕೊನೆಗೂ ಈ ನೋಟುಗಳ ವಿನಿಮಯ ಮಾಡಲು ಸರಕಾರ ಅಧಿಸೂಚನೆ ಹೊರಡಿಸಬೇಕಾಗಿ ಬಂತು ಎಂದು ವರದಿಯಾಗಿದೆ.


ಸಹಕಾರಿ ಬ್ಯಾಂಕುಗಳ ಪಾತ್ರ ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವಪೂರ್ಣ. 17% ದಷ್ಟು ಗ್ರಾಮೀಣ ಸಾಲಗಳು ಈ ಬ್ಯಾಂಕುಗಳ ಮೂಲಕವೇ ಕೊಡಲ್ಪಡುವುದು. ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಇದು 50% ದವರೆಗೂ ಹೋಗುತ್ತದಂತೆ.ಇಂತಹ ಸನ್ನಿವೇಶದಲ್ಲಿ ಈ ಆರು ತಿಂಗಳ ಕಾಲ, ಈ ಬ್ಯಾಂಕುಗಳಲ್ಲಿ ಒಟ್ಟು 9000 ಕೋಟಿ ರೂ. ಗಳು ಸರಕಾರದ ಅದಕ್ಷತೆಯಿಂದಾಗಿ ನಿಷ್ಪ್ರಯೋಜಕವಾಗಿ ಬಿದ್ದಿದುದು ನೋಟುರದ್ದತಿಯ ಮುಂದುವರೆಯುತ್ತಿರುವ ಬವಣೆಗಳನ್ನು ಮತ್ತಷ್ಟು ಹೆಚ್ಚಿಸಿದೆ ಎಂಬುದು ಸ್ಪಷ್ಟ.

ನೋಟು ರದ್ಧತಿ ಕಪ್ಪು ಹಣವನ್ನು ಹೊರ ತಂದಿಲ್ಲ ಎಂಬ ಸಂಗತಿಯನ್ನು ಮರೆ ಮಾಚಲು ಬ್ಯಾಂಕಿಂಗ್ ವ್ಯವಸ್ಥೆಗೆ ಈ ಕ್ರಮದ ನಂತರ ಮರಳಿದ ಒಟ್ಟು ಮೊತ್ತ ಎಷ್ಟು ಎಂಬುದರ ಲೆಕ್ಕ ಇನ್ನೂ ಮುಗಿದಿಲ್ಲ ಎಂದು ತೋರಿಸುವುದಕ್ಕಾಗಿಯೇ ಈ ರೀತಿ 9000 ಕೋಟಿ ರೂ. ನಿಷ್ಪ್ರಯೋಜಕವಾಗಿ ಬಿದ್ದಿರಲು ಬಿಡಲಾಗಿರಬಹುದೇ ಎಂಬ ಸಂದೇಹ ಹಲವರಿಗೆ.

ಹೌದು, ಈ ಸರಕಾರಕ್ಕೆ ಬಿಕ್ಕಟ್ಟನ್ನು ಪರಿಹರಿಸುವ ಸಾಮರ್ಥ್ಯ ಇಲ್ಲದಿದ್ದರೂ ಅನಗತ್ಯ ಬಿಕ್ಕಟ್ಟನ್ನು ಸೃಷ್ಟಿಸುವ ಸಾಮರ್ಥ್ಯವಂತೂ ಇದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಒಬ್ಬ ಸಂಶೋಧಕರು (ನ್ಯೂಸ್‌ಕ್ಲಿಕ್, ಜೂನ್24) ಅಭಿಪ್ರಾಯ ಪಟ್ಟಿದ್ದಾರೆ.

ರಾಷ್ಟ್ರಭಾಷೆ ಎಂದು ಮತ್ತೊಂದು ವಿವಾದ ಇದೇ ಸಂದರ್ಭದಲ್ಲಿ ಸೃಷ್ಟಿಯಾಗಿರುವುದು ಇದನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ.

ವಾಚಾಳಿತನಕ್ಕೆ ಇನ್ನೊಂದು ಹೆಸರಾದ ಅಚ್ಛೇ ದಿನ್ ಮಂತ್ರಿಗಳಲ್ಲಿ ಬಹಳ ಹಿರಿಯರೊಬ್ಬರು, ಕಳೆದ ವಾರ ಸಾಲಮನ್ನಾ ಕೇಳುವುದು ಫ್ಯಾಶನ್ ಆಗಿದೆ ಎಂದವರು, ನಂತರ ಹಿಂದಿ ನಮ್ಮ ರಾಷ್ಟ್ರಭಾಷೆ, ನಮ್ಮ ಅಸ್ಮಿತೆ ಎಂದು ಹೇಳಿ ಸುದ್ದಿ ಮಾಡಿದರು. ನಮ್ಮ ಸಂವಿಧಾನದ ಪ್ರಕಾರ ಭಾರತದ ಎಲ್ಲ ಭಾಷೆಗಳೂ ರಾಷ್ಟ್ರಭಾಷೆಗಳೇ, ಅತಿ ಹೆಚ್ಚು ಜನರಾಡುವ ಹಿಂದಿ ಒಂದು ಸಂಪರ್ಕ ಭಾಷೆಯಷ್ಟೇ ಎಂದು ಅವರಿಗೆ ಗೊತ್ತಿಲ್ಲದೇನಲ್ಲ. **ಆದರೆ 'ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ 'ಎಂಬ ತಮ್ಮ ಅಜೆಂಡಾವನ್ನು ಜನರಿಗೆ ಆಗಾಗ ನೆನಪಿಸುತ್ತಿರಬೇಕಲ್ಲವೇ?**



'ಉಪಾಯವಾಗಿ' ರೈಲುದರಗಳನ್ನು ಏರಿಸುವ ಹುನ್ನಾರ!

ಗೋರಕ್ಷಣೆ, ರಾಷ್ಟ್ರಭಾಷೆ ಇತ್ಯಾದಿಗಳ ನಡುವೆ ಆರ್ಥಿಕ ರಂಗದಲ್ಲಿ ನವ–ಉದಾರವಾದದ ರಥ ತನ್ನ ಎಂದಿನ ವೇಗದಲ್ಲೇ ಸಾಗುತ್ತಿರುವಂತಿದೆ. ರೈಲು ದರಗಳಲ್ಲಿ 'ಉಪಾಯವಾಗಿ ಹೆಚ್ಚಳ' ಮಾಡಲು ಪ್ರಧಾನ ಮಂತ್ರಿಗಳ ಕಚೇರಿ(ಪಿಎಂಒ) ಮಂಜೂರಾತಿ ನೀಡಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಕುರಿತು ಎಪ್ರಿಲ್ 25ರಂದು ಸ್ವತಃ ಪ್ರಧಾನಿಗಳ ಅಧ್ಯಕ್ಷತೆಯಲ್ಲೇ ಮೂಲರಚನೆ ಮಂತ್ರಾಲಯಗಳ ಸಭೆ ನಡೆದ ನಂತರ ಈ ಮಂಜೂರಾತಿ ಬಂದಿರುವುದಾಗಿ ವರದಿಯಾಗಿದೆ. ಪ್ರಯಾಣಿಕ ದರಗಳಲ್ಲಿ 'ಕ್ರೀಪಿಂಗ" ಹೆಚ್ಚಳವನ್ನು ಜಾರಿಗೆ ತನ್ನಿ ಎಂಬುದು ಪಿಎಂಒ ಮಂಜೂರಾತಿಯಂತೆ. ಆದರೆ ರೈಲ್ವೆ ಇಲಾಖೆ ಇದನ್ನು 'ಅಧಿಕೃತ'ವಾಗಿ ನಿರಾಕರಿಸಿದೆಯಂತೆ.

ಕ್ರೀಪಿಂಗ್ ಅಂದರೆ ತೆವಳಿಕೊಂಡು, ಉಪಾಯವಾಗಿ ಎಂದು ಅರ್ಥ. ಒಬ್ಬ ಹಿರಿಯ ರೈಲ್ವೆ ಮಂಡಳಿ ಸದಸ್ಯರು "ಇದರ ಅರ್ಥ ಏನೆಂಬುದು ಸ್ಪಷ್ಟ. ನಾವೀಗ ಅದನ್ನು ರೂಪಿಸಬೇಕಾಗಿದೆ. ಆದರೆ ಇನ್ನೂ ಏನೂ ಅಂತಿಮಗೊಳಿಸಿಲ್ಲ" ಎಂದು ಹೇಳಿರುವುದಾಗಿ 'ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಹೇಳುತ್ತದೆ. ಬಹುಶಃ ಬಹಳ ವರ್ಷಗಳಿಂದ ಏರಿಸಿರದ ಎಸಿಯೇತರ ದರಗಳಿಂದ ಆರಂಭಿಸಬಹುದು ಎಂದು ಅವರು ಸಂಕೇತ ನೀಡಿದರಂತೆ.

ಇದರ ಅರ್ಥ ಏನೆಂದು ಸ್ವಲ್ಪ ಕಾಯಬೇಕಾದೀತು. ಕಳೆದ ಸಪ್ಟಂಬರ್‌ನಲ್ಲಿ 'ಫ್ಲೆಕ್ಸಿ' ದರ ಪದ್ಧತಿ ಎಂಬ ಹೆಸರಿನಲ್ಲಿ ಸೂಪರ್ ಎಕ್ಸ್‌ಪ್ರೆಸ್‌ಗಳಲ್ಲಿ ದರ ಏರಿಕೆ ಮಾಡಲಾಯಿತು, ಬಹುಶಃ ಈ ಸಪ್ಟಂಬರ್‌ನಲ್ಲಿ ಇಂತಹುದೇ ಇನ್ನೇನಾದರೂ 'ಉಪಾಯ' ಪ್ರಕಟವಾಗಬಹುದೇನೋ, ಕಾದು ನೋಡಬೇಕು.

ಈ ನಡುವೆ ರೈಲ್ವೆ ಖಾಸಗೀಕರಣದ ಕೆಲಸ ಆರಂಭವಾಗಿದೆ. ದೇಶದಲ್ಲಿ 23 ರೈಲು ನಿಲ್ದಾಣಗಳ ಹರಾಜಿಗೆ ಮೋದಿ ಸರಕಾರ ಸಿದ್ಧವಾಗುತ್ತಿದೆ. ಪಿಪಿಪಿ ಆಧಾರದಲ್ಲಿ 15 ವರ್ಷಗಳ ಲೀಸ್ ಪಡೆಯುವ ಖಾಸಗಿಯವರು ಇದನ್ನು ಆಧುನೀಕರಿಸುತ್ತಾರಂತೆ. ಇಂತಹ ಪಿಪಿಪಿ ಆಧುನೀಕರಣ ಯಾರಿಗೆ ಅಚ್ಛೇ ದಿನ್ ತರಬಹುದು ಎಂಬುದು ಈ ಮೂರನೇ ವರ್ಷದ ಅಂತ್ಯದಲ್ಲಿ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಅಂತೂ ಸಮಾಜದ ಸೇವೆಯ ವ್ಯವಸ್ಥೆಯಾಗಿರುವ ಭಾರತೀಯ ರೈಲ್ವೆಯನ್ನು ನಮ್ಮ ಸಮಾಜದ 'ಆಧ್ಯಾತ್ಮಿಕ' ಶಕ್ತಿಯ ಬಗ್ಗೆ ದೊಡ್ಡ–ದೊಡ್ಡ ಮಾತುಗಳನ್ನಾಡುವ ಸರಕಾರ ಈ ಖಾಸಗೀಕರಣದ ಮೂಲಕ ಅದನ್ನು ಹಣ ಉಗುಳುವ ಒಣ ಭೌತಿಕ ಯಂತ್ರವಾಗಿಸುವ ನಿಟ್ಟಿನಲ್ಲಿ ಒಯ್ಯುತ್ತಿದೆ

***

'ನಾನು ಬಡವ' ಎಂದು ಬಿಪಿಎಲ್ ಕುಟುಂಬದವರು ಮನೆಮುಂದೆ ಬರೆಸಬೇಕು ಎಂದು ತಾಕೀತು ಮಾಡಿರುವುದು ಮಾನವ ಘನತೆಯ ಉಲ್ಲಂಘನೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ರಾಜಸ್ತಾನದ ಬಿಜೆಪಿ ಸರಕಾರಕ್ಕೆ ನೋಟೀಸು ಕೊಟ್ಟಿದೆ.

***

ಚುನಾವಣಾ ಆಯೋಗ 'ಕಾಸಿಗಾಗಿ ಸುದ್ದಿ'ಯ ಆರೋಪಕ್ಕೆ ಒಳಗಾಗಿದ್ದ ಮಧ್ಯಪ್ರದೇಶದ ಹಿರಿಯ ಬಿಜೆಪಿ ಮಂತ್ರಿಯೊಬ್ಬರನ್ನು ಚುನಾವಣೆಗೆ ಅನರ್ಹಗೊಳಿಸಿದೆ.

ಪ್ರಧಾನ ಮಂತ್ರಿಗಳು ಅಮೆರಿಕಾಕ್ಕೆ ತನ್ನ 5ನೇ ಭೇಟಿಯ ಮೊದಲ ದಿನ ಘಟಾನುಘಟಿ ಉದ್ಯಮಿಗಳು ಮತ್ತು ಅಲ್ಲಿನ ಭಾರತೀಯ ಮೂಲದವರನ್ನು ಉದ್ದೇಶಿಸಿ ಮಾತಾಡುತ್ತ ತನ್ನ ಸರಕಾರಕ್ಕೆ ಈ ಮೂರು ವರ್ಷಗಳಲ್ಲಿ ಒಂದೇ ಒಂದು ಕಪ್ಪು ಕಲೆ ಅಂಟಿಕೊಂಡಿಲ್ಲ ಎಂದು ಹೇಳಿದರು – ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಕಾವಲುಕೋರತನದ ದಿನಗಳಲ್ಲಿ ತುರ್ತು ಪರಿಸ್ಥಿತಿಯ ನೆನಪು

ಈ ವಾರ ಜೂನ್ 26ರಂದು 42 ವರ್ಷಗಳ ಹಿಂದೆ ಈ ದಿನ ಹೇರಲ್ಪಟ್ಟ ಆಂತರಿಕ ತುರ್ತು ಪರಿಸ್ಥಿತಿಯನ್ನು ನೆನಪಿಸಿಕೊಳ್ಳಲಾಯಿತು. ಹಿರಿಯ ಮಂತ್ರಿಗಳೊಬ್ಬರು ಆ ತುರ್ತು ಪರಿಸ್ಥಿತಿಯಲ್ಲಿ ಪ್ರತಿಭಟಿಸದವರಿಗೆ ಈಗ ನಾಗರಿಕ ಹಕ್ಕುಗಳ ಬಗ್ಗೆ ಮಾತಾಡುವ ಹಕ್ಕಿಲ್ಲ ಎಂದಿದ್ದಾರೆ. ಆನಂತರ ಹುಟ್ಟಿದವರಿಗೆ ನಾಗರಿಕ ಹಕ್ಕುಗಳು ಬೇಕಿಲ್ಲ ಎಂದಿರಬಹುದೇ?

ಮತ್ತೊಬ್ಬ ಮಂತ್ರಿಗಳು ನಮ್ಮ ಪಠ್ಯಕ್ರಮದಲ್ಲಿ ಇದನ್ನು ಸೇರಿಸಬೇಕು ಎಂದಿದ್ದಾರೆ. ಖಂಡಿತಾ ಸೇರಿಸಬೇಕು, ಆಗಿನ ಘೋಷಿತ ತುರ್ತು ಪರಿಸ್ತಿತಿಯನ್ನು,ನಂತರದ 1984ರ, 2002ರ ಮತ್ತು ಈಗ ವಿಶೇಷವಾಗಿ ದಲಿತರು ಮತ್ತು ಅಲ್ಪಸಂಖ್ಯಾತರ ಮಟ್ಟಿಗೆ ಅಘೋಷಿತವಾಗಿರುವ ತುರ್ತು ಪರಿಸ್ತಿತಿಗಳನ್ನು ಕೂಡ ಸೇರಿಸಬೇಕು ಎಂದು ವ್ಯಂಗ್ಯಚಿತ್ರಕಾರರೊಬ್ಬರು ಹೇಳಿದ್ದಾರೆ.

ಇನ್ನೊಬ್ಬ ವ್ಯಂಗ್ಯಚಿತ್ರಕಾರ, ಹೇಮಂತ ಮೊರ್‍ಪಾರಿಯ ಆಗಿನ ಖ್ಯಾತ ವ್ಯಂಗ್ಯಚಿತ್ರಕಾರ ಅಬು ಅಬ್ರಹಾಂ ಆಗಿನ ತುರ್ತು ಪರಿಸ್ಥಿತಿ ಸರಕಾರ ರಾಷ್ಟ್ರಪತಿಗಳಿಂದ ಬೇಕಾದಾಗಲೆಲ್ಲ ಸಹಿಮಾಡಿಸಿಕೊಂಡ ಸುಗ್ರೀವಾಜ್ಞೆಗಳ ಆಳ್ವಿಕೆಯ ಬಗ್ಗೆ ಟಿಪ್ಪಣಿ ಮಾಡಿದ ವ್ಯಂಗ್ಯಚಿತ್ರದಲ್ಲಿ ಬಾತ್‌ರೂಂನಿಂದ ರಾಷ್ಟ್ರಪತಿಗಳು 'ಇನ್ನೇನಾದರೂ ಸುಗ್ರೀವಾಜ್ಞೆಗಳಿದ್ದರೆ ತುಸು ಕಾಯಲು ಹೇಳಿ' ಎನ್ನುತ್ತಾರೆ. ಆದರೆ ಈಗಿನ ಸರಕಾರ ರಾಷ್ಟ್ರಪತಿಗಳಿಗೆ ಆ ತೊಂದರೆಯನ್ನೂ ಕೊಡಬೇಕಾಗಿಲ್ಲ. ಅವರು ಅಬು ಅವರ ಕ್ಷಮೆ ಕೋರಿ ಬರೆದ ವ್ಯಂಗ್ಯಚಿತ್ರವಿದು.



ಈ ನಡುವೆ ಕೆಲವು ದಿನಗಳ ಹಿಂದಷ್ಟೇ ಆರು ರೈತರ ಪ್ರಾಣ ಬಲಿ ಪಡೆದಿರುವ ಮಧ್ಯಪ್ರದೇಶದ ಬಿಜೆಪಿ ಸರಕಾರ ಜುಲೈ 1ರಿಂದ ಸಪ್ಟಂಬರ್ 30ರ ವರೆಗೆ ಜಿಲ್ಲಾ ಕಲೆಕ್ಟರುಗಳು ಯಾವುದೇ ಆರೋಪ, ಯಾವುದೇ ವಿಚಾರಣೆಯಿಲ್ಲದೆ ನಾಗರಿಕರನ್ನು ಬಂಧಿಸಬಹುದು ಎಂದು ಅಧಿಸೂಚನೆ ಹೊರಡಿಸಿದೆ. ರೈತರ ಚಳುವಳಿಯಿಂದ ಮತ್ತು ಜಿಎಸ್‌ಟಿಯ ವಿರುದ್ಧವೂ ಇಂತಹ ಚಳುವಳಿ ಭುಗಿಲೇಳಬಹುದು ಎಂದಬ ಭೀತಿಯಿಂದ ಅದು ಇಂತಹ ಕರಾಳ ಕ್ರಮಕ್ಕೆ ಇಳಿದಿದೆ ಎನ್ನಲಾಗುತ್ತಿದೆ.

ಅಚ್ಛೇ ದಿನ್‌ಗಳ 19 ಸ್ಕೀಮ್‌ಗಳು ಹಿಂದಿನ ದಿನಗಳ ಹೆಸರು ಬದಲಿಸಿದ ಸ್ಕೀಮುಗಳಷ್ಟೇ

ಪದಗಳ ಕಸರತ್ತು ಅಚ್ಛೇ ದಿನ್‌ಗಳ ಒಂದು ಎದ್ದು ಕಾಣುವ ಅಂಶ. ಇದು ಈ ಮೂರು ವರ್ಷಗಳಲ್ಲಿ ಪ್ರಧಾನ ಮಂತ್ರಿಗಳು ಪ್ರಕಟಿಸಿರುವ 23 ಸ್ಕೀಮುಗಳು ಯುಪಿಎ ಸರಕಾರದ ಸ್ಕೀಮುಗಳೇ, ಅಬ್ಬರದ ಹೆಸರುಗಳಷ್ಟೇ ಅವುಗಳಲ್ಲಿನ ಹೊಸತನ ಎಂದು ಕಾಂಗ್ರೆಸ್ ಸಂಸದ ಮತ್ತು ಮಾಜೀ ಯುಪಿಎ ಮಂತ್ರಿ ಶಶಿ ತರೂರ್ ಹೇಳಿದ್ದರು.

ಇದನ್ನು ಪರೀಕ್ಷಿಸಲು ಹೊರಟ ಫ್ಯಾಕ್ಟ್‌ಚೆಕ್.ಇನ್ ವೆಬ್ ತಾಣದ ಸಿಬ್ಬಂದಿಯ ಪ್ರಕಾರ ಇವುಗಳಲ್ಲಿ 19 ಸ್ಕೀಮುಗಳ ವಿಷಯದಲ್ಲಿ 19ರಲ್ಲಿ ಅವರು ಹೇಳಿದ್ದು ನಿಜ. ಕೆಲವು ಸ್ಕೀಮುಗಳ ಹೆಸರು ಮಾತ್ರ ಬದಲಾಗಿದ್ದರೆ, ಇನ್ನು ಕೆಲವುಗಳಲ್ಲಿ ಹೆಸರು ಬದಲಾವಣೆಯೊಂದಿಗೆ ಕೆಲವು ಹೆಚ್ಚಿನ ಸೌಲಭ್ಯಗಳನ್ನು ಕಾಲಕ್ಕೆ ಅನುಗುಣವಾಗಿ ಸೇರಿಸಲಾಗಿದೆಯಷ್ಟೇ.

ಉಳಿದವುಗಳಲ್ಲಿ ಎರಡರ ಬಗ್ಗೆ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ, ಏಕೆಂದರೆ ಆ ವಿಷಯದ ಸ್ಕೀಮುಗಳಿದ್ದರೂ ಭಿನ್ನವಾಗಿದ್ದಂತೆ ಕಾಣುತ್ತದೆ. ಇನ್ನೆರಡಲ್ಲಿ ಒಂದು ಹಿಂದಿನ ಎನ್‌ಡಿಎ ಸರಕಾರ ತಂದ ಯೋಜನೆಯಾದರೆ, ಮತ್ತೊಂದು ಈ ಸರಕಾರವೇ ತಂದ ಸ್ಕೀಮು.

ಜಿಎಸ್‌ಟಿ-ರಾಜ್ಯಗಳ ಹಕ್ಕುಗಳ ಮೇಲೆ ಅಭೂತಪೂರ್ವ ಪ್ರಹಾರ



ಜುಲೈ 1, 2017ರಿಂದ ತರುತ್ತಿರುವ 'ಗೂಡ್ಸ್ ಅಂಡ್ ಸರ್ವಿಸಸ್ ಟ್ಯಾಕ್ಸ್', ಅಂದರೆ , ಸರಕು ಮತ್ತು ಸೇವೆಗಳ ತೆರಿಗೆ, ಸಂಕ್ಷಿಪ್ತವಾಗಿ, ಜಿಎಸ್‌ಟಿ, ರಾಜ್ಯಗಳ ಹಕ್ಕುಗಳ ಮೇಲಿನ ಪ್ರಹಾರವನ್ನು ಒಂದು ಅಭೂತಪೂರ್ವ ಮಟ್ಟಕ್ಕೆ ಒಯ್ಯುತ್ತಿದೆ. ಇದು ಸುಸ್ಪಷ್ಟ, ಸ್ವಯಂವೇದ್ಯ ಮತ್ತು ವಿವಾದಾತೀತ, ಯಾರೂ ಕೂಡ ಇದನ್ನು ನಿರಾಕರಿಸುತ್ತಿಲ್ಲ, ಆದರೆ 'ಅಭಿವೃದ್ಧಿ' ಹೆಸರಲ್ಲಿ ಸಮರ್ಥಿಸುತ್ತಿದ್ದಾರೆ.

'ಅಭಿವೃದ್ಧಿ'ಯ ಈ ವಿಚಾರ ಸಂವಿಧಾನಿಕ ಮೌಲ್ಯಗಳಿಂದ ಭಿನ್ನವಾಗಿ, ಕೇವಲ ಜಿಡಿಪಿ ಆಧಾರದಲ್ಲೇ ನಿರೂಪಿಸಿರುವಂತದ್ದು. ಅಷ್ಟೇ ಅಲ್ಲ, ರಾಜ್ಯಗಳನ್ನು ಸಂಪನ್ಮೂಲಗಳಿಗಾಗಿ ಕೇಂದ್ರದ ಮುಂದೆ ಕೈಚಾಚುವ ಸ್ಥಾನಕ್ಕೆ ಇಳಿಸಿದರೆ, ತನ್ಮೂಲಕ ಒಕ್ಕೂಟ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಿದಂತಾಗುತ್ತದೆ ಎಂಬ ನಮ್ಮ ಸಂವಿಧಾನದ ಅರಿವಿನ ಉಲ್ಲಂಘನೆ ಕೂಡ,

———— ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್

ಭಾರತೀಯ ಸಂವಿಧಾನ ರಾಜಕೀಯ ಒಕ್ಕೂಟ ರಚನೆಗೆ ಪೂರಕವಾಗಿ ಒಂದು ವಿತ್ತೀಯ ಒಕ್ಕೂಟ ರಚನೆಯನ್ನೂ ಸ್ಥಾಪಿಸಿದೆ. ರಾಜ್ಯಗಳನ್ನು ಸಂಪನ್ಮೂಲಗಳಿಗಾಗಿ ಕೇಂದ್ರದ ಮುಂದೆ ಕೈಚಾಚುವ ಸ್ಥಾನಕ್ಕೆ ಇಳಿಸಿದರೆ ಅದು ತನ್ಮೂಲಕ ಒಕ್ಕೂಟ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಿದಂತಾಗುತ್ತದೆ ಎಂಬ ಅರಿವು ಸಂವಿಧಾನಕ್ಕೆ ಇತ್ತು. ಆದ್ದರಿಂದಲೇ ಅದು ಕೇಂದ್ರಕ್ಕೆ ವಿಧಿಸಲು ಬಿಟ್ಟ ತೆರಿಗೆಗಳಿಗಿಂತ ಭಿನ್ನವಾಗಿ, ಕೆಲವು ನಿರ್ದಿಷ್ಟ ತೆರಿಗೆಗಳನ್ನು ರಾಜ್ಯಗಳು ವಿಧಿಸಬೇಕು ಮತ್ತು ಹಣಕಾಸು ಆಯೋಗ ಎಂಬ ಸಂಸ್ಥೆಯನ್ನು ಐದು ವರ್ಷಕೊಮ್ಮೆ ರಚಿಸಬೇಕು ಎಂದು ನಿರ್ದಿಷ್ಟಪಡಿಸಿತು. ಈ ಆಯೋಗದ ಆವಶ್ಯಕತೆ ಕಂಡು ಬಂದದ್ದು, ಕೇಂದ್ರಕ್ಕೆ ಬಿಟ್ಟ ತೆರಿಗೆಗಳಿಂದ ಅದರ ಖರ್ಚಿನ ಜವಾಬ್ದಾರಿಗಳಿಗಿಂತ ಹೆಚ್ಚಿನ ಮೊತ್ತ ಬರುತ್ತದೆ, ಅದರೆ ರಾಜ್ಯಗಳ ವಿಷಯದಲ್ಲಿ ಅದು ತದ್ವಿರುದ್ಧವಾಗಿದೆ ಎಂಬ ಸಂಗತಿಯಿಂದಾಗಿ.

ಆದರೆ ಕೇಂದ್ರ ನಂತರದ ವರ್ಷಗಳಲ್ಲಿ ರಾಜ್ಯಗಳಿಗೆ ಸಂಪನ್ಮೂಲಗಳ ಕೊರತೆ ಉಳಿಯುವಂತೆ, ಅವು ಕೇಂದ್ರದ ಸದಾಶಯದ ಮೇಲೆ ಅವಲಂಬಿಸಿರುವಂತೆ, ಮತ್ತು ಸಾಧ್ಯವಾದಷ್ಟೂ ಅವುಗಳನ್ನು ಯಾಚನೆಯ ಮಟ್ಟಕ್ಕೆ ಇಳಿಸುವಂತೆ ಹಲವು ಸಾಧನಗಳನ್ನು ಬಳಸಿದೆ. ಅವನ್ನಿಲ್ಲಿ ನಾವು ಚರ್ಚಿಸಬೇಕಾಗಿಲ್ಲ. ಉದಾಹರಣೆಗೆ, ಹಣಕಾಸು ಆಯೋಗದ ವ್ಯಾಪ್ತಿ ಕೇಂದ್ರದ ಪಾಲಿಗೆ ಬರುವ ಎಲ್ಲ ಸಂಪನ್ಮೂಲಗಳನ್ನು ತಲುಪದಂತೆ(ಒಂದು ಗಮನಾರ್ಹ ಭಾಗ ಕೇಂದ್ರ ಇಲಾಖೆಗಳ ಮೂಲಕ, ಅಂದರೆ ಕೇಂದ್ರದ ಮರ್ಜಿಗೆ ಅನುಸಾರವಾಗಿಯೇ, ರಾಜ್ಯಗಳಿಗೆ ವರ್ಗಾವಣೆಯಾಗುವುದು ಮುಂದುವರಿಯುವಂತೆ) ಮತ್ತು ಹಣಕಾಸು ಆಯೋಗದ ಸ್ವರೂಪ ಹಾಗೂ ಅದರ ಕಾರ್ಯಕ್ಷೇತ್ರವನ್ನು ತಾನೇ ಏಕಪಕ್ಷೀಯವಾಗಿ ನಿರ್ಧರಿಸುವಂತೆ ನೋಡಿಕೊಂಡಿದೆ. ಇದು ಸಂವಿಧಾನದ ಆಶಯದ ಉಲ್ಲಂಘನೆಯಾಗಿದ್ದು, ಇದನ್ನು ಸತತವಾಗಿ ಎತ್ತುತ್ತಲೇ ಬರಲಾಗಿದೆ.

ಸಂವಿಧಾನದ ಮೂಲರಚನೆಯ ಪ್ರಶ್ನೆ

ಜುಲೈ 1, 2017ರಿಂದ ತರುತ್ತಿರುವ 'ಗೂಡ್ಸ್ ಅಂಡ್ ಸರ್ವಿಸಸ್ ಟ್ಯಾಕ್ಸ್'(ಅಂದರೆ , ಸರಕು ಮತ್ತು ಸೇವೆಗಳ ತೆರಿಗೆ-ಅನು) ಈ ಪ್ರಹಾರವನ್ನು ಒಂದು ಅಭೂತಪೂರ್ವ ಮಟ್ಟಕ್ಕೆ ಒಯ್ಯುತ್ತಿದೆ. ಇದು ರಾಜ್ಯಗಳ ಸಂವಿಧಾನಿಕ ಹಕ್ಕುಗಳ ಒಂದು ಔಪಚಾರಿಕ ಮೊಟಕು ಎಂದೇ ಹೇಳಬೇಕು. ಇದು ಸುಸ್ಪಷ್ಟ, ಸ್ವಯಂವೇದ್ಯ ಮತ್ತು ವಿವಾದಾತೀತ, ಯಾರೂ ಕೂಡ ಇದನ್ನು ನಿರಾಕರಿಸುತ್ತಿಲ್ಲ(ಆದರೆ 'ಅಭಿವೃದ್ಧಿ' ಹೆಸರಲ್ಲಿ ಸಮರ್ಥಿಸುತ್ತಿದ್ದಾರೆ). ಸಂವಿಧಾನ ನಿರ್ದಿಷ್ಟವಾಗಿ ರಾಜ್ಯಗಳಿಗೆಂದೇ ಕೊಡಮಾಡಿರುವ, **ರಾಜ್ಯಗಳ ಆದಾಯಗಳ ಪ್ರಮುಖ ಮೂಲವಾಗಿರುವ(ಸುಮಾರು 80%ದಷ್ಟು) ಮಾರಾಟ ತೆರಿಗೆಯ ಜಾಗದಲ್ಲಿ ಜಿಎಸ್‌ಟಿಯನ್ನು ಕೂರಿಸಿ ಮತ್ತು ಜಿಎಸ್‌ಟಿ ದರಗಳನ್ನು ಜಿಎಸ್‌ಟಿ ಮಂಡಳಿ ಮಾತ್ರವೇ ನಿರ್ಧರಿಸಬಹುದೆಂದು ವಿಧಿಸಿರುವುದು ರಾಜ್ಯಗಳ ಅಧಿಕಾರಗಳನ್ನು ತೆಗೆದು ಹಾಕುವ ಕ್ರಮ ಎಂಬುದು ಸುಸ್ಪಷ್ಟ;** ಏಕೆಂದರೆ ಈ ಜಿಎಸ್‌ಟಿ ಮಂಡಳಿಯಲ್ಲಿ ಪ್ರತಿಯೊಂದು ರಾಜ್ಯ ಕೇಂದ್ರದೊಂದಿಗೆ ಒಂದು ಸದಸ್ಯ ಮಾತ್ರ ಆಗಿರುವುದರಿಂದ ತಾನು ವಿಧಿಸಬಹುದಾದ ದರಗಳನ್ನು ಬದಲಿಸುವ ಶಕ್ತಿ ಅದಕ್ಕೆ ಉಳಿಯುವುದಿಲ್ಲ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ರಾಜ್ಯಗಳ ತೆರಿಗೆ ವಿಧಿಸುವ ಅಧಿಕಾರದ ನಷ್ಟಕ್ಕೆ ಪರಿಹಾರ ಕೊಡಲಾಗುತ್ತದೆಯೇ, ಎಂದಿನ ವರೆಗೆ ಮತ್ತು ಎಷ್ಟರ ಮಟ್ಟಿಗೆ ಕೊಡಲಾಗುತ್ತದೆ, ಮತ್ತು ಈ ಅಧಿಕಾರಗಳನ್ನು ಈಗಿರುವಂತೆ ರಚಿತವಾಗಿರುವ ರಾಜ್ಯ ಸರಕಾರಗಳು ತಮ್ಮ ಆದಾಯಗಳನ್ನು ಸ್ವಲ್ಪ ಕಾಲದ ವರೆಗೆ ಉಳಿಸಿ ಕೊಡುವ ಆಶ್ವಾಸನೆಗಳಿಗೆ ಪ್ರತಿಯಾಗಿ ಬಿಟ್ಟು ಕೊಡಲು ಸಿದ್ಧ ಇವೆಯೇ ಎಂಬುದು ಇಲ್ಲಿನ ಪ್ರಶ್ನೆ ಅಲ್ಲವೇ ಅಲ್ಲ. **ರಾಜ್ಯಗಳ ಹಕ್ಕುಗಳ ಪ್ರಶ್ನೆ ರಾಜ್ಯ ಸರಕಾರಗಳು ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಬಿಟ್ಟು ಕೊಡಲು ಅಥವ ಕೊಡದಿರಲು ಸಿದ್ಧ ಇವೆಯೇ ಎಂಬುದನ್ನು ಮೀರಿ ಹೋಗುತ್ತದೆ. ಇದು ಸಂವಿಧಾನದ ಮೂಲ ರಚನೆಗೆ ಸಂಬಂಧಪಟ್ಟ ಪ್ರಶ್ನೆ.** ಯಾರಾದರೂ ದೇಶವನ್ನು ಒಂದು 'ಹಿಂದೂರಾಷ್ಟ್ರ' ಎಂದು ಘೋಷಿಸಲು, ಒಂದು ನಿರ್ದಿಷ್ಟ ಸಮಯದಲ್ಲಿ ಎಲ್ಲ ರಾಜ್ಯ ಸರಕಾರಗಳು ಒಮ್ಮತದಿಂದ ಒಪ್ಪಿದರೂ ಕೂಡ (ಅದು ಸಂವಿಧಾನದ ಮೂಲ ರಚನೆಯನ್ನು ಉಲ್ಲಂಘಿಸುವುದರಿಂದಾಗಿ) ಹೇಗೆ ಸಾಧ್ಯವಿಲ್ಲವೋ, ಹಾಗೆಯೇ, ಕೇಂದ್ರ ಮತ್ತು ಎಲ್ಲ ರಾಜ್ಯ ಸರಕಾರಗಳು ಒಂದು ನಿರ್ದಿಷ್ಟ ಸಮಯದಲ್ಲಿ ಅಂತಹ ಒಂದು ವ್ಯವಸ್ಥೆಯನ್ನು ಸ್ಥಾಪಿಸಲು ಒಮ್ಮತ ಹೊಂದಿದರೂ ಕೂಡ ರಾಜ್ಯಗಳ ಅಧಿಕಾರಗಳನ್ನು ಯಾರೂ ತೆಗೆದು ಹಾಕಲು ಸಾಧ್ಯವಿಲ್ಲ, ಏಕೆಂದರೆ ಅಂತಹ ಒಂದು ವ್ಯವಸ್ಥೆ ಸಂವಿಧಾನದ ಮೂಲರಚನೆಯನ್ನು ಉಲ್ಲಂಘಿಸುತ್ತದೆ.

ಜಿಡಿಪಿ ವೃದ್ಧಿ ತರುತ್ತದೆಯೇ?

ಜಿಎಸ್‌ಟಿ ಎಂಬುದು ಜಿಡಿಪಿಯ ವೃದ್ಧಿಗೆ ಬಹಳಷ್ಟು ಕೊಡುಗೆ ನೀಡುತ್ತದೆ ಎಂಬುದು ಸಂಪೂರ್ಣವಾಗಿ ಒಂದು ಖೋಟಾ ಆರ್ಥಿಕ ಲೆಕ್ಕಾಚಾರದ ಕಸರತ್ತು. ಜಿಡಿಪಿ ವೃದ್ಧಿ 2ರಿಂದ 3% ಏರುತ್ತದೆ ಎಂಬ ಮಾತೆಲ್ಲವೂ ವಾಸ್ತವ ಸಂಗತಿಗಳನ್ನು ಆಧರಿಸಿರದ ಊಹೆಗಳ ಮೇಲೆ ನಿಂತಿರುವ ಸೈದ್ಧಾಂತಿಕ ಮಾದರಿಗಳಿಂದ ಪಡೆದವುಗಳೇ. ಉದಾಹರಣೆಗೆ, ಆರ್ಥಿಕ ವ್ಯವಸ್ಥೆಯಲ್ಲಿ ಬೇಡಿಕೆಯ ಮೇಲೆ ಯಾವುದೇ ನಿರ್ಬಂಧಗಳಿಲ್ಲ, ಬಂಡವಾಳಿಗರ ಹೂಡಿಕೆ ನಿರ್ಧಾರಗಳು ಮಾರುಕಟ್ಟೆ ಬೆಳವಣಿಗೆಯ ನಿರೀಕ್ಷೆಗೆ ಸಂಬಂಧಪಟ್ಟ ಪರಿಗಣನೆಗಳನ್ನು ಆಧರಿಸಿರುವುದಿಲ್ಲ, ಇತ್ಯಾದಿ ಇತ್ಯಾದಿ. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನಿಂದ ಭಾರತದ ವೃದ್ಧಿ ದರ ನಿಧಾನಗೊಂಡರೆ, ಆಗ ಬಂಡವಾಳಿಗರ ಹೂಡಿಕೆಗಳು ಇಳಿಯುತ್ತವೆ, ಆಗ ಎಷ್ಟೇ ತೆರಿಗೆ ಸುಧಾರಣೆ ಕೈಗೊಂಡರೂ ಅವರ 'ಗೂಳಿ ಚೈತನ್ಯ'ಗಳನ್ನು ಉದ್ದೀಪಿಸಿ ಅವರು ಹೆಚ್ಚು ಹೂಡಿಕೆ ಮಾಡುವಂತೆ ಮಾಡಲಾಗದು. ಸಂಕ್ಷಿಪ್ತವಾಗಿ ಹೇಳುವುದಾದರೆ, ತೆರಿಗೆ ಸುಧಾರಣೆಗಳು ಬಂಡವಾಳಿಗರ ಹೂಡಿಕೆ ವರ್ತನೆಯಲ್ಲಿ ಎಳ್ಳಷ್ಟೂ ಬದಲಾವಣೆ ತರಲಾರವು, ಅದು ಮೂಲತಃ ಮಾರುಕಟ್ಟೆ ಬೆಳವಣಿಗೆಯ ನಿರೀಕ್ಷೆಯ ಮೇಲೆಯೇ ನಡೆಯುವಂತದ್ದು. ನಿಜ, ಬಂಡವಾಳಿಗರು ಜಿಎಸ್‌ಟಿಯಂತಹ ತಮಗೆ ಅನುಕೂಲಕರವಾದ ತೆರಿಗೆ ಸುಧಾರಣೆಗಳ ಮೇಲೆ ಒತ್ತಡ ಹಾಕುತ್ತಾರೆ. ಇಂತಹ ಸುಧಾರಣೆಗಳ ಗಳಿಕೆಗಳನ್ನು ಅವರು ತಮ್ಮ ಜೇಬಿಗೆ ಸೇರಿಸಿಕೊಳ್ಳುತ್ತಾರೆ, ಆದರೆ ಅದು ಹೆಚ್ಚಿನ ಹೂಡಿಕೆ ಮತ್ತು ವೃದ್ಧಿಯನ್ನೇನೂ ಪ್ರೋತ್ಸಾಹಿಸುವುದಿಲ್ಲ.

ಇಷ್ಟೇ ಅಲ್ಲ, ಸಂವಿಧಾನಿಕ ಮೌಲ್ಯಗಳಿಂದ ಭಿನ್ನವಾಗಿ, ಕೇವಲ ಜಿಡಿಪಿ ಆಧಾರದಲ್ಲೇ ನಿರೂಪಿಸಿರುವ 'ಅಭಿವೃದ್ಧಿ'ಯ ವಿಚಾರವನ್ನು ತಿರಸ್ಕರಿಸಬೇಕಾಗಿದೆ. ಕಾರ್ಮಿಕರ ಮುಷ್ಕರಗಳನ್ನು, ಮತ್ತು ಒಟ್ಟಾರೆಯಾಗಿ ಸಾರ್ವಜನಿಕರ ಪ್ರತಿಭಟನೆಗಳನ್ನು ತಡೆದರೆ ಹೂಡಿಕೆ ಮತ್ತು ಬೆಳವಣಿಗೆಯನ್ನು ಏರುತ್ತದೆ, ಆದ್ದರಿಂದ ಅಂತಹ ವ್ಯವಸ್ಥೆ ಮಾಡಬೇಕು ಎಂಬ ತರ್ಕವನ್ನು ಹೇಗೆ ತಿರಸ್ಕರಿಸಬೇಕೋ, ಹಾಗೆಯೇ, **ಜಿಎಸ್‌ಟಿ ಉನ್ನತ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದರಿಂದ ಅದನ್ನು ಅಂಗೀಕರಿಸಬೇಕು ಎಂಬ ತರ್ಕವನ್ನೂ ತಿರಸ್ಕರಿಸ ಬೇಕಾಗಿದೆ.**

ಏಕೆಂದರೆ ಇಂತಹ ಉನ್ನತ ಬೆಳವಣಿಗೆಯ ದಾವೆಗಳು ಹುಸಿ ದಾವೆಗಳಷ್ಟೇ ಅಲ್ಲ, 'ಅಭಿವೃದ್ಧಿ'ಯ ವಿಚಾರದಲ್ಲಿ ಪ್ರಜಾಪ್ರಭುತ್ವ ಎಂಬುದೂ ಸೇರಿರಬೇಕು. ರಾಜ್ಯಗಳ ಹಕ್ಕುಗಳನ್ನು ಮೊಟಕು ಮಾಡುವುದು ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು ಅಥವ ನಾಗರಿಕ ಹಕ್ಕುಗಳನ್ನು ಮೊಟಕು ಮಾಡುವಂತೆಯೇ, ಪ್ರಜಾಪ್ರಭುತ್ವ ವಿರೋಧಿಯಾದದ್ದು ಮತ್ತು ಒಂದು ಸರ್ವಾಧಿಕಾರಶಾಹಿ ಕೇಂದ್ರೀಕೃತ ರಾಜಕೀಯ ವ್ಯವಸ್ಥೆಯತ್ತ ಸಾಗುವಂತದ್ದು.

ಅಮೆರಿಕಾದ ಉದಾಹರಣೆ

ಈ ಸಂದರ್ಭದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಉದಾಹರಣೆಯಿಂದ ಬಹಳಷ್ಟು ಅಂಶಗಳನ್ನು ತಿಳಿಯಬಹುದು. ಎಲ್ಲ ರಾಜ್ಯಗಳಿಗೆ ಅನ್ವಯವಾಗುವ ಒಂದು ಸಮರೂಪದ ಜಿಎಸ್‌ಟಿಯಲ್ಲಿ ವಿವಿಧ ದರಗಳಿದ್ದರೂ(ಸದ್ಯಕ್ಕೆ ಸರಕುಗಳ ಮೇಲೆ ನಾಲ್ಕು ದರಗಳನ್ನು ಸೂಚಿಸಲಾಗಿದೆ), ಒಂದು ರಾಷ್ಟ್ರೀಯ ಮಾರುಕಟ್ಟೆಯನ್ನು ನಿರ್ಮಿಸಲು ಅಗತ್ಯ ಎಂಬ ತರ್ಕವನ್ನು ಹೂಡಲಾಗುತ್ತದೆ. ಕುತೂಹಲದ ಸಂಗತಿಯೆಂದರೆ, ಅಮೆರಿಕಾದಲ್ಲಿ ಇಂತಹ ಒಂದು ಸಮರೂಪದ ತೆರಿಗೆ ದರ ಇಲ್ಲ, ಅದರ ವಿವಿಧ ಸಂಸ್ಥಾನಗಳಲ್ಲಿ ಮತ್ತು ಸರಕುಗಳಲ್ಲಿ ಹಲವಾರು ದರಗಳಿವೆ. ಇಂತಹ, ಜಗತ್ತಿನ ಅತ್ಯಂತ ಬಲಿಷ್ಟ ಬಂಡವಾಳಶಾಹಿ ದೇಶ ಒಂದು ಏಕೀಕೃತ ಮಾರುಕಟ್ಟೆ ಹೊಂದಿಲ್ಲ ಎಂದು ಹೇಳುವುದು ಹಾಸ್ಯಾಸ್ಪದ ತಾನೇ!

ಅಮೆರಿಕಾ ಏಕೆ ನಮ್ಮ ಜಿಎಸ್‌ಟಿಯಂತಹ ಒಂದು ಸಮರೂಪದ ದರವನ್ನು ಹೊಂದಿಲ್ಲ ಎಂಬುದಕ್ಕೆ ಕಾರಣ ಅದು ಒಕ್ಕೂಟ ತತ್ವಕ್ಕೆ ಅಪಾರ ಬೆಲೆ ಕೊಡುತ್ತದೆ. ಅಲ್ಲಿ ಈ ತತ್ವವನ್ನು ಎಷ್ಟು ಗಂಭೀರವಾಗಿ ಪರಿಗಣಿಸಲಾಗುತ್ತದೆ ಎಂಬುದರ ಒಂದು ಸಂಕೇತ ಎಂದರೆ, ಸೆನೆಟ್‌ನಲ್ಲಿ ಪ್ರತಿಯೊಂದು ಸಂಸ್ಥಾನಕ್ಕೆ, ಅದು ದೊಡ್ಡದಿರಲಿ, ಸಣ್ಣದಿರಲಿ, ಸಮಾನವಾಗಿ ಇಬ್ಬರು ಪ್ರತಿನಿಧಿಗಳಿದ್ದಾರೆ. ನ್ಯೂಯಾರ್ಕ್, ಕ್ಯಾಲಿಫೋರ್ನಿಯದಂತಹ ದೊಡ್ಡ ಸಂಸ್ಥಾನಗಳೂ, ದೆಲವೇರ್ ಅಥವ ರ್‍ಹೋಡ್ಸ್ ಐಲ್ಯಾಂಡ್ ನಂತಹ ಪುಟ್ಟ ಸಂಸ್ಥಾನಗಳಂತೆ ಇಬ್ಬರೇ ಪ್ರತಿನಿಧಿಗಳನ್ನು ಹೊಂದಿವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, **ಜಗತ್ತಿನ ಅತ್ಯಂತ ಶಕ್ತಿಶಾಲಿ ಬಂಡವಾಳಶಾಹಿ ದೇಶ ಕೂಡ, ಅದು ಯಾವ ಬುನಾದಿಯ ಮೇಲೆ ಸ್ಥಾಪನೆಗೊಂಡಿದೆಯೋ, ಅಂತಹ ಒಕ್ಕೂಟ ತತ್ವದಂತಹ ಕೆಲವು ಸಂವಿಧಾನಿಕ ಮೌಲ್ಯಗಳನ್ನು ಬಂಡವಾಳಿಗರ ಆದ್ಯತೆಗಳಿಗಿಂತ ಮೇಲೆ ಇಡಬಯಸುತ್ತದೆ.**

ಭಾರತ ಹಾಗೆ ತನ್ನ ಸಂವಿಧಾನಿಕ ಮೌಲ್ಯಗಳನ್ನು ಮೇಲೆಂದು ಭಾವಿಸದಿರಲು ಕಾರಣಗಳೇನಿಲ್ಲ. ಸರಕುಗಳು ಮತ್ತು ಸೇವೆಗಳ ತೆರಿಗೆ ವ್ಯವಸ್ಥೆಯನ್ನು ತರುತ್ತಿರುವುದು ಸಂವಿಧಾನದ ಮೂಲರಚನೆಗೆ ವಿರುದ್ಧವಾದದ್ದು ಮಾತ್ರವಲ್ಲ, ದೇಶದ ಐಕ್ಯತೆಗೂ ಒಂದು ಗಂಭೀರ ಬೆದರಿಕೆ ಒಡ್ಡುತ್ತದೆ. ವಿರೋಧಾಭಾಸವೆಂದರೆ ಇದು ವಿತ್ತೀಯ ವ್ಯವಸ್ಥೆಯ ಮೂಲಕ ದೇಶವನ್ನು ಏಕೀಕರಿಸುತ್ತದೆ ಎಂದು ಅದನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಅದು ರಾಜ್ಯಗಳ ಹಕ್ಕುಗಳನ್ನು ಮೊಟಕು ಮಾಡುತ್ತದೆ ಮತ್ತು ಆಮೂಲಕ ಒಂದು ಸರ್ವಾಧಿಕಾರಶಾಹಿ ರಾಜಕೀಯ ವ್ಯವಸ್ಥೆಯತ್ತ ಒಯ್ಯುವಂತಾಗುವುದು ಒಂದು ಅಪಾಯಕಾರಿ ಬೆಳವಣಿಗೆ.

ರಾಜ್ಯಗಳಿಗೆ ಸಂಪನ್ಮೂಲಗಳನ್ನು ಎತ್ತುವ ದಾರಿ ಇಲ್ಲವಾದ್ದರಿಂದ ಅವು ತಮ್ಮನ್ನು ಪಾರು ಮಾಡಲು ಕೇಂದ್ರದತ್ತವೇ ತಿರುಗಬೇಕಾಗುತ್ತದೆ. ಇದು ಕೇಂದ್ರಕ್ಕೆ ತನಗೆ ಪ್ರಿಯವೆನಿಸಿದವುಗಳನ್ನು ಎತ್ತಿ ಹಿಡಿಯಲು, ರಾಜ್ಯ ಸರಕಾರಗಳನ್ನು ತನ್ನ ಕೈಬೆರಳುಗಳಲ್ಲಿ ಕುಣಿಸಲು ಅವಕಾಶ ಕಲ್ಪಿಸುತ್ತದೆ. ಆಗ 'ನಮ್ಮ ರಾಷ್ಟ್ರಪತಿ ಅಭ್ಯರ್ಥಿಯನ್ನು ಬೆಂಬಲಿಸಿದರೆ, ನಾವು ನಿಮಗೆ ಅನುಕೂಲ ಮಾಡಿ ಕೊಡಬಹುದು', ಅಥವ 'ನಮ್ಮ ರಾಷ್ಟ್ರದ ಹಿಂದೂಕಾರಣವನ್ನು ಬೆಂಬಲಿಸಿದರೆ, ನಾವು ನಿಮಗೆ ಅನುಕೂಲ ಮಾಡಿ ಕೊಡಬಹುದು' ಇತ್ಯಾದಿ, ಇತ್ಯಾದಿ ಸಂಕೇತಗಳನ್ನು ತೋರಿಸಲು ಅವಕಾಶ ಸಿಗುತ್ತದೆ.

ಪ್ರಜಾಪ್ರಭುತ್ವಕ್ಕಾಗಿ ಹೋರಾಟದ ಭಾಗ

ಸಂಕ್ಷಿಪ್ತವಾಗಿ, **ಜಾತ್ಯತೀತತೆಗಾಗಿ ಹೋರಾಟ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಟ ನಮ್ಮ ಒಕ್ಕೂಟವಾದಿ ರಾಜಕೀಯ ವ್ಯವಸ್ಥೆಯ, ಆಮೂಲಕ ಜಿಎಸ್‌ಟಿ ಬುಡಮೇಲು ಮಾಡಬೇಕೆಂದಿರುವ ವಿತ್ತೀಯ ಒಕ್ಕೂಟತತ್ವದ ರಕ್ಷಣೆಗೆ ಹೋರಾಟದೊಂದಿಗೆ ಅವಿಭಾಜ್ಯ ಕೊಂಡಿಯನ್ನು ಹೊಂದಿದೆ.**

ಈಗಾಗಲೇ ಕೇಂದ್ರೀಕರಣದ ಈ ಸಂಗತಿ ಬೃಹತ್ ಪ್ರಮಾಣದ ವಿರೋಧ, ವಿಶೇಷವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭುಗಿಲೇಳುವಂತೆ ಮಾಡಿದೆ. ಜಿಎಸ್‌ಟಿ ಆ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಕುರಿತ ಸಂವಿಧಾನದ 370ನೇ ವಿಧಿಯನ್ನು ಉಲ್ಲಂಘಿಸುತ್ತದೆ ಎಂದು ವಾದ ಹೂಡಲಾಗುತ್ತಿದೆ. ಇದು ಸಮರ್ಥನೀಯ ವಾದ. ಆದರೂ ಅದನ್ನು ಎಳ್ಳಷ್ಟೂ ಪರಿಗಣಿಸದೆ ಒಂದು ನಿರ್ದಿಷ್ಟ ಗಡುವಿನ ನಂತರ ಜಿಎಸ್‌ಟಿಯನ್ನು ತಂದೇ ತೀರಬೇಕೆಂದು ಮುಂದೊತ್ತುತ್ತಿರುವುದು ಆ ರಾಜ್ಯದಲ್ಲಿ ಜನಗಳ ನಡುವೆ ಹರಡಿರುವ ವೈಷಮ್ಯದ ಭಾವನೆಯ ಬಗ್ಗೆ ಭಾರತೀಯ ಆಳುವ ವರ್ಗಗಳಿಗೆ ಮತ್ತು ಕಾರ್ಪೊರೇಟ್ ಹತೋಟಿಯ ಮಾಧ್ಯಮಗಳಿಗೆ ಏನೇನೂ ಕಾಳಜಿ ಇಲ್ಲ ಎಂಬುದನ್ನು ಸೂಚಿಸುತ್ತದೆ. ನಿಜ ಹೇಳಬೇಕೆಂದರೆ, ನವದೆಹಲಿಯಲ್ಲಿ ಜಿಎಸ್‌ಟಿ ಸಂವಿಧಾನದ 370ನೇ ವಿಧಿಯ ಮೇಲೆ ಏನು ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಚರ್ಚೆಯನ್ನೇ ಮಾಡಲಾಗಿಲ್ಲ.

ಜಿಎಸ್‌ಟಿ ವ್ಯವಸ್ಥೆ ಒಂದು ಕನಿಷ್ಟ ಜಿಎಸ್‌ಟಿಯನ್ನು ನಿಗದಿ ಮಾಡಿ, ಅದಕ್ಕಿಂತ ಹೆಚ್ಚಿನ ದರಗಳನ್ನು ವಿಧಿಸಲು ರಾಜ್ಯ ಸರಕಾರಗಳು ಸ್ವತಂತ್ರವಾಗಿವೆ ಎಂದಿದ್ದರೆ ಸಂಗತಿ ಬೇರೆಯೇ ಆಗುತ್ತಿತ್ತು. ಆದರೆ ತೆರಿಗೆ ದರಗಳನ್ನು ನಿಗದಿ ಪಡಿಸುವ ವಿಷಯದಲ್ಲಿ ರಾಜ್ಯಗಳನ್ನು ಜಿಎಸ್‌ಟಿ ಮಂಡಳಿಗೆ ಅಡಿಯಾಳಾಗಿಸಿ, ಅದು ರಾಜ್ಯಗಳ ಹಕ್ಕುಗಳ ಮೇಲೆ ಪ್ರಹಾರ ಮಾಡಿದೆ. ಇದನ್ನು ಒಪ್ಪಲಾಗದು.

ರಾಜ್ಯಗಳ ಸುತ್ತ

'ನಾನು ಬಡವ' ಎಂದು ಮನೆಯ ಮುಂದೆ ಬರೆಯಲು ತಾಕೀತು: ರಾಜಸ್ತಾನ ಸರಕಾರಕ್ಕೆ ಮಾನವ ಹಕ್ಕುಗಳ ಆಯೋಗದ ನೋಟೀಸು

'ನಾನು ಬಡವ, ನಾನು ರಾಷ್ಟ್ರೀಯ ಆಹಾರ ಭದ್ರತೆಯ ಕಾನೂನಿನ ಅಡಿಯಲ್ಲಿ ರೇಶನ್ ಪಡೆಯುತ್ತೇನೆ' ಎಂದು ನಂತರ ಪ್ರತಿಯೊಬ್ಬ ಫಲಾನುಭವಿಯ ಹೆಸರು ಮತ್ತು ಬಿಪಿಎಲ್ ನಂಬರನ್ನು ಬರೆದಿರುವುದು ರಾಜಸ್ತಾನದ ದೌಸಾ ಜಿಲ್ಲೆಯ ಸುಮಾರು 50,000 ಬಡವರ ಮನೆಗಳ ಗೋಡೆಗಳ ಮೇಲೆ ಹಳದಿ ಬಣ್ಣದ ಪೇಂಟ್‌ನಲ್ಲಿ ಕಾಣಿಸುತ್ತಿದೆ ಎಂಬ ವರದಿಯನ್ನು ಪರಿಶೀಲಿಸಿದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ರಾಜಸ್ತಾನದ ಬಿಜೆಪಿ ಸರಕಾರಕ್ಕೆ ನೋಟೀಸು ಕಳಿಸಿದೆ ಎಂದು ವರದಿಯಾಗಿದೆ.

ಇದು ಫಲಾನುಭವಿಗಳ ಘನತೆಯ ಹಕ್ಕಿನ ಉಲ್ಲಂಘನೆ, ಯಾವ ನಾಗರಿಕ ಸಮಾಜವೂ ಪ್ರಭುತ್ವದಿಂದ ಇಂತಹ ವಿವೇಚನಾಹೀನ, ತರ್ಕಹೀನ ಕೃತ್ಯವನ್ನು ಒಪ್ಪುವುದಿಲ್ಲ ಎಂದಿರುವ ಆಯೋಗ ನಾಲ್ಕು ವಾರದೊಳಗೆ ಈ ಬಗ್ಗೆ ವಿವರವಾದ ವರದಿ ನೀಡಬೇಕು, ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಕೈಗೊಂಡಿರುವ ಕ್ರಮದ ಮಾಹಿತಿ ನೀಡಬೇಕು ಎಂದು ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಈ ನೋಟೀಸು ಕೊಟ್ಟಿದೆ.

ಈ ವರದಿ ಪತ್ರಿಕೆಗಳಲ್ಲಿ ಕಳೆದ ವಾರ ಪ್ರಕಟವಾದಾಗ ಜಿಲ್ಲೆಯ ಅಡಿಶನಲ್ ಕಲೆಕ್ಟರ್ ಜಿಲ್ಲಾ ಆಡಳಿತ ಇಂತಹ ಆದೇಶ ನೀಡಿಲ್ಲ ಎಂದರು, ರಾಜ್ಯ ಪಂಚಾಯತು ರಾಜ್ಯ ಮಂತ್ರಿಗಳು ರಾಜ್ಯ ಸರಕಾರ ಇಂತಹ ಆದೇಶ ನೀಡಿಲ್ಲ ಎಂದರು. ಆದರೆ ಇಂತಹ ಬರಹಗಳು 50ಸಾವಿರಕ್ಕೂ ಹೆಚ್ಚು ಮನೆಗಳ ಗೋಡೆಗಳ ಮೇಲಿರುವುದು, ಇದರಿಂದ ಹಲವರು ಅವಮಾನ ಅನುಭವಿಸಿರುವುದು, ಅದರಿಂದಾಗಿ ಕೆಲವರು ಈ ಕಾಯ್ದೆಯ ಅಡಿಯಲ್ಲಿ ಪ್ರಯೋಜನ ಪಡೆಯಲು ನಿರಾಕರಿಸಿರುವುದಂತೂ ನಿಜ. ಹಾಗಿದ್ದರೆ ಇದನ್ನು ಬರೆಯಿಸಿದವರು ಯಾರು ಎಂಬುದೇ ಪ್ರಶ್ನೆ.



ಈ ಕಾಯ್ದೆಯ ಅಡಿಯಲ್ಲಿ ರೇಶನ್ ಪಡೆಯುವುದು ಯಾರ ಭಿಕ್ಷೆಯೂ ಅಲ್ಲ, ಅದು ಆ ಕುಟುಂಬದ ಹಕ್ಕು ಎಂಬುದನ್ನು ಇಲ್ಲಿ ಗಮನಿಸಬೇಕು. ಅದರೆ ಕಾರ್ಮಿಕರ, ಬಡವರ ಹಕ್ಕುಗಳನ್ನು ಮೊಟಕು ಮಾಡುವ ಮಾದರಿಯನ್ನು ಮೋದಿ ಸರಕಾರಕ್ಕೆ ತೋರಿಸಿಕೊಟ್ಟ ಈ ರಾಜ್ಯದಲ್ಲಿ ಇಂತಹ ಅವಿವೇಕದ ಕ್ರಮವನ್ನೂ ತಂದಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ ಎಂದು ವಿಮರ್ಶಕರು ಹೇಳುತ್ತಿದ್ದಾರೆ.

ಕಾಶ್ಮೀರದಲ್ಲಿ ಪೋಲಿಸ್ ಅಧಿಕಾರಿಯನ್ನು ಬಡಿದು ಸಾಯಿಸಿದ ಘಟನೆ: ತರಿಗಾಮಿ ಖಂಡನೆ

ಶ್ರೀನಗರದಲ್ಲಿ ಜೂನ್ 22ರ ರಾತ್ರಿ ಪೋಲೀಸ್ ಡಿವೈಎಸ್‌ಪಿ ಮಹಮ್ಮದ್ ಅಯೂಬ್ ಪಂಡಿತ್ ಅವರನ್ನು ಜನಜಂಗುಳಿ ಬಡಿದು ಸಾಯಿಸಿರುವುದು ಒಂದು ಹೀನ ಕೃತ್ಯ, ಅದನ್ನು ಖಂಡಿಸಲು ಶಬ್ದಗಳೇ ಸಾಲದು ಎಂದು ಜಮ್ಮು-ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ. ಇದು ದುರದೃಷ್ಟಕರ, ಇಂತಹ ಘಟನೆಗಳಿಂದ ಕಾಶ್ಮೀರದ ಜನತೆಯ ಹಿತಸಾಧನೆಯಾಗುವುದಿಲ, ಕಾಶ್ಮೀರದ ಜನತೆ ಇವನ್ನು ಬಲವಾಗಿ ಖಂಡಿಸಬೇಕು ಎಂದು ಅವರು ಹೇಳಿದ್ದಾರೆ.

"ನಾವು, ಸಿಪಿಐ(ಎಂ), ಪ್ರಭುತ್ವ ಮತ್ತು ಸರಕಾರ ನಡೆಸುವ ಯಾವುದೇ ಅನ್ಯಾಯವನ್ನು ಖಂಡಿಸುತ್ತೇವೆ ಮತ್ತು ಇಂತಹ ಬರ್ಬರ ಕೃತ್ಯಗಳನ್ನು ಖಂಡಿಸಬೇಕು ಎಂದು ಜನತೆಗೆ ಮನವಿ ಮಾಡುತ್ತೇವೆ" ಎಂದು ತರಿಗಾಮಿ ಹೇಳಿದ್ದಾರೆ.

ಸಂಘಪರಿವಾರದ ವಿಷಪ್ರಚಾರ ಭೀತಿಯ ಸನ್ನಿವೇಶ ಸೃಷ್ಟಿಸಿದೆ

-ಸಂತ್ರಸ್ತ ಕುಟುಂಬದ ಮನೆಗೆ ಭೇಟಿ ನೀಡಿದ ಸಿಪಿಐ(ಎಂ) ನಿಯೋಗ

ಪುಟ 2 ರಿಂದ

ಉಪವಾಸ ಮುಗಿಸಲು ಅವರು ಮನೆಗೆ ಧಾವಿಸಿದ್ದರು, ಆದರೆ ಅವನಿಗೆ ಕೊನೆಯ ತುತ್ತನ್ನೂ ಕೊಡಲಾಗಲಿಲ್ಲ ಎಂದರು.

ಈ ಘಟನೆಯ ಬಗ್ಗೆ ಖೇದ ವ್ಯಕ್ತಪಡಿಸಲಾದರೂ ಸರಕಾರದ ಅಥವ ಆಳುವ ಪಕ್ಷದ ಯಾರೂ ಕೂಡ ಕುಟುಂಬದವರನ್ನು ಸಂಪರ್ಕಿಸಿಲ್ಲ ಎಂದು ತಿಳಿದು ಬಂತು ಎಂದಿರುವ ನಿಯೋಗ ತಂದೆ ಮತ್ತು ಸೋದರರನ್ನು ಪೋಲೀಸ್ ಠಾಣೆಗೆ ಹಲವು ಬಾರಿ ಕರೆಯಲಾಗಿದೆ, ಆದರೆ ಇದುವರೆಗೆ ಒಬ್ಬ ಕ್ರಿಮಿನ???ನನ್ನು ಮಾತ್ರ ಬಂಧಿಸಲಾಗಿದೆ ಎಂದಿದೆ.

ಮುಸ್ಲಿಮರೆಂದು ಟೋಪಿ, ಗಡ್ಡದಿಂದ ಗುರುತಿಸಬಹುದಾದ ಯುವಕರು ದಿಲ್ಲಿಗೆ ಹೋಗುವ, ಅಲ್ಲಿಂದ ಬರುವ ರೈಲುಗಳಲ್ಲಿ ಕೆಲವು ಗುಂಪುಗಳ ಕೋಮುವಾದಿ ಬೈಗುಳಗಳಿಗೆ ಗುರಿಯಾಗುತ್ತಿದ್ದಾರೆ ಎಂದು ಅಲ್ಲಿಯ ಜನ ನಿಯೋಗಕ್ಕೆ ತಿಳಿಸಿದರು.

ಬ್ಯಾಟರಿ ಚಾಲಿತ ಮೈಕ್‌ಗಳನ್ನು ಹಿಡಿದ ಭಜನಾ ಮಂಡಳಿಗಳು ಹಲವು ರೈಲು ಬೋಗಿಗಳನ್ನು ಧಾರ್ಮಿಕ ವಲಯಗಳಾಗಿ ಪರಿವರ್ತಿಸಿವೆ, ಯಾರಾದರೂ ಮುಸ್ಲಿಮರು ಪ್ರವೇಶಿಸಿದಾಗ ಅವರ ಬಗ್ಗೆ ಅವಹೇಳನಕಾರಿ ಟಿಪ್ಪಣಿಗಳನ್ನು ಮಾಡುತ್ತಾರೆ. ಇಂತಹ ಕಿರುಕುಳಗಳು ಈಗ ಸಾಮಾನ್ಯ ಸಂಗತಿಯಾಗಿದ್ದು ಪ್ರಯಾಣ ಮಾಡುವಾಗ ಭೀತಿ, ಭಯ ಕಾಡುತ್ತಿರುತ್ತದೆ, ಪೋಲೀಸರಿಗೆ ಹಲವು ಬಾರಿ ದೂರು ನೀಡಿದರೂ ಅದನ್ನು ಕಿವಿಗೆ ಹಾಕಿಕೊಂಡಿಲ್ಲ ಎಂದೂ ನಿಯೋಗಕ್ಕೆ ತಿಳಿದು ಬಂತು.


ಜೂನ್ 22ರ ಘಟನೆಯಂತೂ ಸಂಪೂರ್ಣವಾಗಿ ಕೋಮುವಾದಿ ಪರಿಗಣನೆಗಳಿಂದಲೇ ನಡೆದದ್ದು, ಇಲ್ಲವಾದರೆ ಸಶಸ್ತ್ರ ಮಂದಿಯನ್ನು ರೈಲಿನೊಳಕ್ಕೆ ಹೇಗೆ ಬಿಡಲಾಗುತ್ತದೆ ಎಂದು ಕೇಳಿರುವ ನಿಯೋಗ ಆರಂಭದಲ್ಲಿ ಹಲ್ಲೆ ಮಾಡಿದ ಎಲ್ಲರ ಬಳಿಯೂ ದೊಡ್ಡ ಚಾಕುಗಳಿದ್ದವು ಎಂದಿದೆ. ಈ ಮೂವರನ್ನು ಬಡಿಯುವಂತೆ ಅವರು ಇತರ ಪ್ರಯಾಣಿಕರನ್ನೂ ಉದ್ರೇಕಿಸಿದರು. ಜನರಿಂದ ತುಂಬಿದ ರೈಲಿನಲ್ಲಿ ಇಂತಹ ಘಟನೆಗಳು ನಡೆಯುತ್ತವೆಂದರೆ, ಅದನ್ನು ಎಸಗುವವರಿಗೆ ರಾಜಕೀಯ ಬೆಂಬಲ ಮತ್ತು ಪೋಷಣೆಯಿದೆ ಎಂದೇ ಅರ್ಥ.

ಅಲ್ಪಸಂಖ್ಯಾತ ಸಮುದಾಯಗಳ ವಿರುದ್ಧ ಸಂಘ ಪರಿವಾರದ ನಿರಂತರ ವಿಷಪೂರಿತ ಅಪಪ್ರಚಾರದಿಂದಲೇ ಇಂತಹ ಸನ್ನಿವೇಶಗಳು, ಮುಸ್ಲಿಮರು ಸಾರ್ವಜನಿಕ ಸ್ಥಳಗಳಲ್ಲಿ ತಾವು ಸುರಕ್ಷಿತರಲ್ಲ ಎಂಬ ಭಾವನೆ ಉಂಟಾಗುವ, ಇಂತಹ ಸ್ಥಳಗಳನ್ನು ಕೋಮುಗ್ರಸ್ತಗೊಳಿಸಿರುವ ಪರಿಸ್ಥಿತಿ ಸೃಷ್ಟಿಯಾಗಿದೆ. ಇದೀಗ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್'ನ ವಾಸ್ತವ ಎಂದು ನಿಯೋಗ ಟಿಪ್ಪಣಿ ಮಾಡಿದೆ.

ಈ ನಿಯೋಗದ ಭೇಟಿಯ ನಂತರ ಸಿಪಿಐ(ಎಂ) 1. ಅಪರಾಧಿಗಳನ್ನು ತಕ್ಷಣವೇ ಬಂಧಿಸಬೇಕು, 2. ಕ್ರಿಮಿನಲ್‌ಗಳ ರಾಜಕೀಯ ಸಂಪರ್ಕಗಳನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು, 3. ಈ ಮಾರ್ಗದಲ್ಲಿ ಸಂಚರಿಸುವ ಎಲ್ಲ ರೈಲುಗಳಲ್ಲಿ ಭದ್ರತೆ ಒದಗಿಸಬೇಕು, 4. ಕುಟುಂಬದವರಿಗೆ ಪರಿಹಾರ ಒದಗಿಸಬೇಕು ಮತ್ತು 5. ಶಕೀಲ್ ಮತ್ತು ಹಾಶಿಂಗೆ ಸರಿಯಾದ ಪುಕ್ಕಟೆ ಚಿಕಿತ್ಸೆ ಒದಗಿಸಬೇಕು ಎಂದು ಆಗ್ರಹಿಸಿದೆ.

ಸಿಪಿಐ(ಎಂ) ಈ ಘಟನೆ ಮತ್ತು ಇತರ ಇಂತಹ ಘಟನೆಗಳ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಹೇಳಿದೆ.





ಜುನೈದ್ ತಂದೆಯೊಂದಿಗೆ ಮಹಮ್ಮದ್ ಸಲೀಮ್, ಬೃಂದಾಕಾರಟ್ ಮತ್ತು ಸಿಪಿಐ(ಎಂ) ನಿಯೋಗದ ಇತರರು

'ಕಾಸಿಗಾಗಿ ಸುದ್ದಿ':ಹಿರಿಯ ಮ.ಪ್ರ. ಬಿಜೆಪಿ ಮಂತ್ರಿಯ ಚುನಾವಣೆ ಅಸಿಂಧು

ಉತ್ತಮ ಮತ್ತು ಶುದ್ಧ ಆಳ್ವಿಕೆ ಎಂಬುದು ಬಿಜೆಪಿಯ ಇನ್ನೊಂದು ಸೋಗು ಎಂಬುದು ಈವಾರ ಇನ್ನೊಂದು ಸುದ್ದಿಯಲ್ಲಿ ಬಯಲಾಗಿದೆ. ಚುನಾವಣಾ ಆಯೋಗ ಜೂನ್ 24ರಂದು ಮಧ್ಯಪ್ರದೇಶ ಸರಕಾರದ ಹಿರಿಯ ಮಂತ್ರಿ ನರೋತ್ತಮ ಮಿಶ್ರ ಅವರನ್ನು 2008ರ ಚುನಾವಣಾ ಖರ್ಚು ಕುರಿತಂತೆ ತಪ್ಪು ಲೆಕ್ಕಾಚಾರವನ್ನು ಸಲ್ಲಿಸಿದ್ದಾರೆ ಎಂದು ಚುನಾವಣೆಗೆ ಸ್ಪರ್ಧಿಸಲು ಮೂರು ವರ್ಷಗಳ ವರೆಗೆ ಅನರ್ಹಗೊಳಿಸಿದೆ.

ಈ ಮೂಲಕ ಅವರು ದತಿಯ ಚುನಾವಣಾ ಕ್ಷೇತ್ರದಿಂದ ಚುನಾಯಿತರಾಗಿರುವುದೂ ರದ್ದಾಗಿದೆ ಎಂದು ವರದಿಯಾಗಿದೆ.

ಚುನಾವಣಾ ಆಯೋಗ 2013ರಲ್ಲಿ ಇವರಿಗೆ ನೋಟೀಸು ಕೊಟ್ಟಿತ್ತು, ಆದರೆ ಅವರು ಇದರ ವಿರುದ್ಧ ಹೈಕೋರ್ಟಿಗೆ, ಸುಪ್ರಿಂ ಕೋರ್ಟಿಗೂ ಹೋಗಿದ್ದರು. ಆದರೆ ಅಲ್ಲಿಂದ ಏನೂ ಪರಿಹಾರ ಸಿಗದ್ದರಿಂದ ಚುನಾವಣಾ ಆಯೋಗ ಕೊನೆಗೆ ಈ ತೀರ್ಪನ್ನು ನೀಡಿದೆ.

ಇವರು ತಾನು ಚುನಾವಣೆಗೆ ಖರ್ಚು ಮಾಡಿದ್ದು 2,40,827 ರೂ. ಎಂದು ಲೆಕ್ಕ ಕೊಟ್ಟಿದ್ದರು. ಆದರೆ ಅವರು 13,50,780ರೂ.ಗಿಂತ ಕಡಿಮೆಯೇನೂ ಖರ್ಚು ಮಾಡಿಲ್ಲ(ಆಯೋಗ ಹಾಕಿರುವ ಮಿತಿ 10ಲಕ್ಷರೂ.), ಇದರಲ್ಲಿ ಅವರು ತಮ್ಮ ಪರವಾದ ಸುದ್ದಿ ಪ್ರಕಟಿಸಲು ಕೊಟ್ಟ ಕಾಸನ್ನು ಸೇರಿಸಿಲ್ಲ ಎಂಬ ದೂರಿತ್ತು. ಈ ಬಗ್ಗೆ 8 ವರ್ಷಗಳ ದೀರ್ಘ ವಿಚಾರಣೆಯ ನಂತರ ಚುನಾವಣಾ ಆಯೋಗ ಕೊನೆಗೂ ಅವರ ವಿರುದ್ಧ ತೀರ್ಪಿತ್ತಿದೆ.

ಈ ಹಿರಿಯ ಬಿಜೆಪಿ ಮಂತ್ರಿ ಈಗ ಚುನಾವಣಾ ಆಯೋಗದ ತೀರ್ಪಿನ ವಿರುದ್ಧವೂ ಅಪೀಲು ಹೋಗಬಹುದು ಎನ್ನಲಾಗುತ್ತಿದೆ.

ಕೇರಳದಲ್ಲಿ ಮೂರು ದಿನಗಳ ಬೃಹತ್ ಸ್ವಚ್ಛತಾ ಆಂದೋಲನ

ಬೇಸಗೆ, ನಂತರ ಮಳೆಗಾಲದಲ್ಲಿ ಜ್ವರದ ಭರ ಹೆಚ್ಚುತ್ತಿರುವಂತೆ ಅದನ್ನು ತಡೆಯಲು, ಅದಕ್ಕೆ ಮೂಲವಾದ ಸೊಳ್ಳೆಗಳ ಕಾಟವನ್ನು ತಡೆಯಲು ಕೇರಳ ಸರಕಾರ ಜೂನ್ 27 ರಿಂದ 29 ರ ವರೆಗೆ ರಾಜ್ಯಾದ್ಯಂತ ಸ್ವಚ್ಛತಾ ಆಂದೋಲನವನ್ನು ನಡೆಸಿದೆ.

ರಾಜ್ಯದ ಉತ್ತರ ಭಾಗದ ಕಣ್ಣೂರು ಜಿಲ್ಲೆಯ ಒಂದು ಮಸೀದಿಯ ಆವರಣದಲ್ಲಿ ಕಸದ ರಾಶಿಯನ್ನು ತೆಗೆಯುವ ಮೂಲಕ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಉದ್ಘಾಟಿಸಿದ ಈ ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ ಸಾವಿರಾರು ಜನ, ಮಂತ್ರಿಗಳು, ಶಾಸಕರು, ರಾಜಕೀಯ ಮುಖಂಡರು, ಸಾಮಾಜಿಕ-ಸಾಂಸ್ಕೃತಿಕ ಕಾರ್ಯಕರ್ತರು, ಎನ್‌ಜಿಒಗಳು, ಸರಕಾರೀ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಲಿಸರು ಮತ್ತು ಸಾರ್ವಜನಿಕರು ಭಾಗವಹಿಸಿದರು.



ಈ ಕಾರ್ಯಕ್ರಮವನ್ನು ಇತ್ತೀಚೆಗೆ ನಡೆದ ಒಂದು ಸರ್ವಪಕ್ಷ ಸಭೆಯಲ್ಲಿ ನಿರ್ಧರಿಸಲಾಯಿತು. ಸ್ಥಳೀಯ ಮಟ್ಟದಲ್ಲೂ ಇಂತಹ ಸರ್ವಪಕ್ಷ ಸಭೆಗಳು ನಡೆದವು. ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶಾಲಾ ಮುಖ್ಯಸ್ಥರುಗಳಿಗೆ ಮನವಿ ಕಳಿಸಲಾಗಿತ್ತು. ಅವರೊಂದಿಗೆ ಗರಿಷ್ಟ ಸಂಖ್ಯೆಯಲ್ಲಿ ಸಾರ್ವಜನಿಕರು ಇದರಲ್ಲಿ ಭಾಗವಹಿಸಿದ್ದಾರೆ.

ಕತಾರ್ ಪ್ರತ್ಯೇಕಿಸುವ–ಸೌದಿ ಅರೇಬಿಯಾ ಆಶಯ ಈಡೇರುವುದೇ?



ನಾಗರಾಜ್ ನಂಜುಂಡಯ್ಯ

ಸೌದಿ ಅರೇಬಿಯಾ ಮತ್ತು ಆ ಪ್ರದೇಶದ ಅದರ ಮಿತ್ರ ದೇಶಗಳು 'ಕತಾರ' ನಿಂದ ಎಮಿರೇಟ್ಸ್ (ಯು.ಎ.ಇ)ನ್ನು ಪ್ರತ್ಯೇಕಿಸಲು ಹಾಗೂ ಕತಾರನ್ನು ದುರ್ಬಲಗೊಳಿಸಲು ಸಲುವಾಗಿ 'ಅಲ್ಲಿನ ಆಡಳಿತವನ್ನು ಬದಲಾವಣೆ ಮಾಡಬೇಕೆಂಬ ನಿರ್ಧಾರವನ್ನು ತೆ–ಗೆದುಕೊಂಡಿದೆ. ಸೌದಿ ಅರೇಬಿಯಾದ ಈ ನಿರ್ಧಾರವನ್ನು ಗಲ್ಫ–ಕೋ–ಆಪರೇಷನ್ ಕೌನ್ಸಿಲ್ (ಜಿ.ಸಿ.ಸಿ)ನ ಒಳಗಿರುವ ಓಮಾನ್ ಮತ್ತು ಕುವೈತ್ ದೇಶಗಳು ಬೆಂಬಲಿಸದಿರುವುದು ಸೌದಿಗೆ ಮುಜುಗರವಾಗಿದೆ. ಇದರಿಂದ ಸೌದಿ ಅರೇಬಿಯಾದ ಆಶಯವು ವಿಫಲಗೊಳ್ಳುವ ಆತಂಕ ಹೆಚ್ಚಾಗಿದೆ. ಕತಾರ್ ನಲ್ಲಿ ನೆಲೆ ಹೊಂದಿರುವ ಅಮೆರಿಕಾದ ಮಿಲಿಟರಿ, ಕತಾರ್ ನ ಆಡಳಿತ ಬದಲಾವಣೆಗೆ ಗಮನ ಹರಿಸುತ್ತಿಲ್ಲ. .ಮಾತ್ರವಲ್ಲದೆ, ಟ್ರಂಪ್ ನ ವಿರುದ್ಧವೇ ಸದ್ಯದ ಪರಿಸ್ಥಿತಿಯಲ್ಲಿ ನಡೆದುಕೊಳ್ಳುತ್ತಿರುವುದರಿಂದ – ಸೌದಿಯ ಆಶಯ ವಿಫಲವಾಗುವ ಸಾಧ್ಯತೆಯೇ ಹೆಚ್ಚಾಗಿದೆ.

ಅಮೆರಿಕಾವು 36 ಈ–15 ಜೆಟ್ಸ್ ಫೈಟರ್ ವಿಮಾನಗಳನ್ನು 'ಕತಾರ್' ಗೆ ಮಾರುವ 12 ಬಿಲಿಯನ್ ಡಾಲರ್ ನ ಒಪ್ಪಂದಕ್ಕೆ ಸಹಿ ಮಾಡಿರುವುದೂ ಈ ಬಿಕ್ಕಟ್ಟಿನೊಂದಿಗೆ ತಾಳೆಹಾಕಿಕೊಂಡಿದೆ. ಈ ಬಿಕ್ಕಟ್ಟಿನ ಹುಟ್ಟಿಗೆ ಕತಾರ್ ದೊರೆ "ಇರಾನ್ ನೊಂದಿಗೆ ಜಿ.ಸಿ.ಸಿ.ಯ ಘರ್ಷಣೆಯ ನೀತಿಯನ್ನು ಪ್ರಶ್ನೆ ಮಾಡಿದ್ದು, 'ಹಾಮಾಸ್' ಮತ್ತು ಹೆಜ್ಬುಲ್ಲಾ ಗಳ ಕತಾರ್ ಪರವಾದ ಕಾರ್ಯಯೋಜನೆಗಳನ್ನು ಬಹಿರಂಗವಾಗಿ ಪ್ರಶಂಸಿದ್ದು ಮೂಲ ಕಾರಣವಾಯಿತು.

ಇರಾಕ್ ನಲ್ಲಿನ "ಶಿಯಾ" ಭಯೋತ್ಪಾದಕ ಗುಂಪುಗಳಿಗೆ 'ಸುಲಿಗೆ ಹಣ' (ಡಿಚಿಟಿಚಿಂಟ) ವನ್ನು ಪಾವತಿಸುತ್ತಿದೆ ಎಂಬ ಆರೋಪವನ್ನು ಕತಾರ್ ಎದುರಿಸುತ್ತಿದೆ. ಸುಮಾರು 500 ಮಿಲಿಯನ್ ಡಾಲರ್‌ನಷ್ಟು ಹಣವನ್ನು ಇರಾಕಿನ ಸೆಂಟ್ರಲ್ ಬ್ಯಾಂಕ್ ಗೆ, ಸೆರೆಮನೆಯಲ್ಲಿರುವ 25 ಕತಾರಿ ಒತ್ತೆಯಾಳುಗಳ ಬಿಡುಗಡೆಗೆ ಪಾವತಿ ಮಾಡಲಾಗಿದೆ ಎಂಬ ಇರಾಕಿನ ಪ್ರಧಾನಮಂತ್ರಿ 'ಕತಾರ್' ಮೇಲೆ ಹೊರಿಸಿದ್ದಾರೆ. ಜಿ.ಸಿ.ಸಿ.ಯ ನಿಲುವನ್ನು ಕಾರ್ಯರೂಪಕ್ಕೆ ತರುವ ಕತಾರ್ ಉಲ್ಲಂಘಿಸಿದೆ. ಇದು ಸೌದಿಯ ಪ್ರಮುಖ ಆರೋಪವಾಗಿದೆ.

ಕತಾರ್ ಮೇಲಿನ ಮತ್ತೊಂದು ಆರೋಪವೆಂದರೆ 'ಹಮಾಸ್' ಹಾಗೂ 'ಮುಸ್ಲಿಂ ಬ್ರದರ್ ಹುಡ್' ನಂತಹ ಸಂಘಟನೆಗಳಿಗೆ ನಿರಂತರವಾಗಿ ಕತಾರ್ ನ ಬೆಂಬಲ. ಇವುಗಳನ್ನು ಇಸ್ರೇಲ್, ಸೌದಿ ಮತ್ತಿತರ ಮಿತ್ರದೇಶಗಳು 'ಭಯೋತ್ಪಾದಕ'ರೆಂದು ಗುರುತಿಸಿದ್ದಾರೆ. ಇಸ್ರೇಲಿನ ದಿಗ್ಭಂಧನದಲ್ಲಿರುವ 'ಗಾಜಾ' ದಲ್ಲಿ 'ಹಮಾಸ್'ರು ಅಧಿಕಾರದಲ್ಲಿದ್ದಾರೆ. ಹಾಗೆಯೇ ಟುನಿಷಿಯಾ, ಮೊರಾಕೋ, ಜೋರ್ಡಾನ್ ಹಾಗೂ ಇನ್ನಿತರ ಅರಭ್ ರಾಷ್ಟ್ರಗಳಲ್ಲಿ 'ಮುಸ್ಲಿಂ ಬ್ರದರ್ ಹುಡ್' ಗುಂಪುಗಳನ್ನು ಬೆಂಬಲಿಸುತ್ತಿದೆ. ಈಜಿಪ್ಟ್‌ನಲ್ಲಿ 'ಮುಸ್ಲಿಂ ಬ್ರದರ್ ಹುಡ್' ನ ನಾಯಕರು ಬಂಧನದಲ್ಲಿದ್ದು, ಹಲವರು ಮರಣದಂಡನೆ ಎದುರಿಸುತ್ತಿದ್ದಾರೆ.

'ಮುಸ್ಲಿಂ ಬ್ರದರ್ ಹುಡ್' ಈಜಿಪ್ಟ್‌ನಲ್ಲಿ ಮೂರು ವರ್ಷಗಳ ಹಿಂದೆ ನಡೆದ ಚುನಾವಣೆಯಲ್ಲಿ ಅಲ್ಲಿನ ಜನರಿಂದ ಆಯ್ಕೆಗೊಂಡು, ಅಧಿಕಾರಕ್ಕೆ ಬಂದಿತು. ಪುನಃ ಈಜಿಪ್ಟ್‌ನಲ್ಲಿ ಮುಕ್ತ ಹಾಗೂ ನ್ಯಾಯೋಜಿತ ಚುನಾವಣೆಗಳು ಏನಾದರೂ ನಡೆದರೆ ಅನೇಕ ರಾಜಕೀಯ ವೀಕ್ಷಕರ ಪ್ರಕಾರ ದು ಪುನಃ ಆಯ್ಕೆಯಾಗುವ ಸಂಭವವೇ ಹೆಚ್ಚಾಗಿದೆ. ಹಿಂದಿನ ಅಮೆರಿಕಾದ ಅಧ್ಯಕ್ಷರಾದ ಒಬಾಮಾ ಆಡಳಿತವೂ ಇವರೊಂದಿಗೆ ವ್ಯವಹರಿಸುತ್ತಿದ್ದರು. 2006 ರಲ್ಲಿ ಪಶ್ಚಿಮ್ ಬ್ಯಾಂಕ್ ಮತ್ತು ಗಾಜಾ ಪಟ್ಟಿಯಲ್ಲಿ ನಡೆದ ಚುನಾವಣೆಯಲ್ಲಿ ಇಲ್ಲಿಯವರೆಗೂ ನಡೆದ ಏಕೈಕ ಚುನಾವಣೆಯಲ್ಲಿ 'ಹಮಾಸ್' ದಿಗ್ವಿಜಯ ಸಾಧಿಸಿತ್ತು.

ಈಜಿಪ್ಟ್‌ನಲ್ಲಿ ಅಲ್ಪಾವಧಿಯ 'ಮುಸ್ಲಿಂ ಬ್ರದರ್ ಹುಡ್' ಸರ್ಕಾರಕ್ಕೆ ಕತಾರ್ ಸರ್ಕಾರವು ನೀಡಿದ್ದ ಬೆಂಬಲಕ್ಕೆ ಸೌದಿ ಅರೇಬಿಯಾವು ತಮ್ಮ ಅಸಮಾಧಾನವನ್ನೂ ವ್ಯಕ್ತಪಡಿಸಿತ್ತು.

ಈ ಸಂಘಟನೆಗಳಿಗೆ ಬೆಂಬಲ ನಿಲ್ಲಿಸುವುದಲ್ಲದೆ, ಸೌದಿ ಅರೇಬಿಯಾದ ಮತ್ತಷ್ಟು ಬೇಡಿಕೆಗಳೆಂದರೆ, ತಕ್ಷಣದಿಂದಲೇ ಇರಾನ್‌ನೊಂದಿಗೆ ಕತಾರ್ ಎಲ್ಲಾ ರಾಜತಾಂತ್ರಿಕ ಸಂಬಂಧಗಳಿಂದ ಹೊರಬರಬೇಕು. ಕತಾರ್ ಮಾಲಿಕತ್ವದ ಪ್ರಸಿದ್ಧ ಜಜೀರಾ ಟಿವಿ ವಾಹಿನಿಯ ಪ್ರಸಾರ ನಿಲ್ಲಿಸಬೇಕು.. ಜೊತೆ–ಗೆ ವಿಶ್ವದ ಅತಿದೊಡ್ಡ ದೈತ್ಯ ದಕ್ಷಿಣ ಪಾರಸ್ ಅನಿಲ್ ಕ್ಷೇತ್ರವನ್ನು ಹಂಚಿಕೊಳ್ಳಬೇಕು. ಹಾಗೂ ಎರಡೂ ದೇಶಗಳಿಗೂ ನಿರ್ಣಾಯಕವಾಗಿರುವ ಹೈಡ್ರೋ–ಕಾರ್ಬನ್ ವಲಯದಲ್ಲಿ ಎಲ್ಲರೊಂದಿಗೂ ಸಹಕರಿಸಬೇಕು. ಇದರ ಹೊರತಾಗಿಯೂ, ಗಲ್ಫ ಪ್ರದೇಶದಲ್ಲಿನ ಇತರ ರಾಷ್ಟ್ರಗಳಾದ ಓಮಾನ್, ಕುವೈತ್ ಹಾಗೂ ಇರಾನ್‌ನೊಂದಿಗೆ ದೂರವಿರಬೇಕು. (ದುಬೈ ಇರಾನ್‌ನೊಂದಿಗೆ ಉತ್ತಮ ಸಂಬಂಧಗಳನ್ನು ಬಯಸುತ್ತದೆ ಎಂಬುದನ್ನೂ ಇಲ್ಲಿ ಗಮನಿಸಬೇಕಾಗಿದೆ). ಇಲ್ಲಿ ಯು.ಎ.ಇ. ಯ ಅಪಾರ ಪ್ರಮಾಣದ ಸಂಪತ್ತನ್ನು ಸೌದಿ ಅರೇಬಿಯಾ ಮತ್ತು ಅಬುದಾಭಿ ನಿಯಂತ್ರಿಸುತ್ತದೆ. ಇದು ಪ್ರಸ್ತುತ ಜಿ.ಸಿ.ಸಿ.ಯ ವಿದೇಶಾಂಗ ನೀತಿಗೆ ಚಾಲನೆ ಒದಗಿಸುತ್ತದೆ.

ಉದ್ಭವಗೊಂಡಿರುವ ಕತಾರ್ – ಎಮಿರೇಟ್ಸ್‌ನ ಬಿಕ್ಕಟ್ಟಿನಲ್ಲಿ ಅಮೇರಿಕಾದ ಪಾತ್ರವೇನು? ಅಮೆರಿಕಾದ ಹೊಸ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೌದಿ ಅರೇಬಿಯಾಕ್ಕೆ ಬೇಟಿಯಾದ ನಂತರ, ಆ ಕೂಡಲೇ ಸೌದಿ ಹಾಗೂ ಅದರ ಮಿತ್ರ ರಾಷ್ಟ್ರಗಳು ಕತಾರ್ ವಿರುದ್ಧ ಜಿ.ಸಿ.ಸಿ. ಯೊಳಗೆ ತಮ್ಮ ಬೇಡಿಕೆಗಳು ಹಾಗೂ ಆರೋಪಗಳನ್ನು ಮಂಡಿಸಿದವು. ಕತಾರ್ ಅನ್ನು ಎಮಿರೇಟ್ಸ್‌ನಿಂದ ಪ್ರತ್ಯೇಕಿಸುವ ಸೌದಿಯ ಈ ಕ್ರಮವನ್ನು ಕನಿಷ್ಠ ಮೇಲ್ನೋಟಕ್ಕೆ ಎಲರಿಗೂ ಒಂದು ಆಶ್ಚರ್ಯಕರವಾದ ವರ್ತನೆಯಂತೆ ಕಂಡಿತು. ಏಕೆ–ಂದರೆ ಕತಾರ್ ನ ಪ್ರದೇಶದಲ್ಲಿಯೇ, ಅಮೆರಿಕಾವು ತನ್ನ ಮಿಲಿಟರಿಯ ಅತಿದೊಡ್ಡ ನೆಲೆಯನ್ನು ಹೊಂದಿದೆ. ಅದು 10,000 ಕ್ಕಿಂತ ಹೆಚ್ಚು ಅಮೆರಿಕಾದ ಸೇನಾ ಪಡೆಗಳು ಹಾಗೂ ಅತಿದೊಡ್ಡ ಅಮೆರಿಕನ್ ಅಲ್ ಯುಡೈಡ್ ಎಂಬ ಏರ್‌ಪೋರ್ಸ್ ಬೇಸ್ ನೆಲೆ ಹೊಂದಿದೆ.

ಅಮೆರಿಕಾದ ಸೇನೆ ಸೆಂಟ್‌ಕಾಮ್, ಕತಾರನಲ್ಲಿ ಮುಂಚೂಣಿಯಲ್ಲಿದೆ. ಪೆಂಟಗನ್ ಹೇಳಿಕೆಯಂತೆ "ಸಿರಿಯಾ ಮೇಲಿನ ಸೇನಾ ಕಾರ್ಯಚರಣೆಗಳಿಗೆ ಅಮೆರಿಕನ್ ಹೇಳಿಕೆಯಂತೆ "ಸಿರಿಯಾ ಮತ್ತು ಇರಾಕ್ ಮೇಲಿನ ಸೇನಾ ಕಾರ್ಯಚರಣೆಗಳಿಗೆ ಅಮೆರಿಕನ್ ಮಿಲಿಟರಿಗೆ ಕತಾರ್ ನ ಈ ನೆಲೆ ನಿರ್ಣಾಯಕವಾಗಿದೆ. ಅಮೆರಿಕಾದ ರಾಜ್ಯ ಕಾರ್ಯದರ್ಶಿ ರೆಕ್ಸ್ ಟೆಲ್ಲರ್‌ಸರ್ನ್ ಕೂಡ ಈ ಬಗ್ಗೆ ಪ್ರಸ್ತಾಪಿಸುತ್ತ ಗಲ್ಫ ನ ನೆರೆಹೊರೆಯವರ ಮಧ್ಯೆ ಸಮಾಲೋಚನೆಯ ಒಪ್ಪಂದ ಅಗತ್ಯತೆಯ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷ ಟ್ರಂಪ್‌ರ ಇಬ್ಬಂದಿತನ ಬಯಲಿಗೆ:

ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಸೌದಿ ರಾಜಧಾನಿ ರಿಯಾದ್ ನ ಎಲ್ಲ ಅಭಿಪ್ರಾಯಗಳಿಗೂ ತನ್ನ ಸಂಪೂರ್ಣ ಒಪ್ಪಿಗೆ ಸೂಚಿಸುತ್ತಾ, ಭಯೋತ್ಪಾದನೆಯ ಪ್ರಮುಖ ಪ್ರಾಯೋಜಕತ್ವದಲ್ಲಿ ಇರಾನ್ ದೇಶವು ಪ್ರಮುಖ ಸ್ಥಾನದಲ್ಲಿದೆ ಎಂಬ ಸೌದಿಯ ಬಲವಾದ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಇದೇ ಟ್ರಂಪ್ 2011 ರಲ್ಲಿ ಸೌದಿ ಅರೇಬಿಯಾವನ್ನು "ಜಗತ್ತಿನ ಅತಿದೊಡ್ಡ ಭಯೋತ್ಪಾದಕ ದೇಶ"ವೆಂದಿದ್ದರು. ಇತ್ತೀಚಿಗಿನ ಟ್ರಂಪ್‌ನವರ "ರಿಯಾದ್" ಬೇಟಿಯ ಸಂದರ್ಭದಲ್ಲಿ ಸೌದಿಯು ಅಮೇರಿಕಾದೊಂದಿಗೆ 110 ಶತಕೋಟಿ ಡಾಲರ್‌ನಷ್ಟು ಮೊತ್ತದ ಶಸ್ತ್ರಾಸ್ತ್ರ ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಪ್ಲೇಟು ಬದಲಿಸಿದ್ದಾರೆ. ಟ್ರಂಪರ ಇಬ್ಬಂದಿತನಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?

ಕತಾರ್ ಸುಮಾರು ಮೂರು ಮಿಲಿಯನ್ ಜನಸಂಖ್ಯೆಯನ್ನುಹೊಂದಿರುವ ಒಂದು ದೇಶವಾಗಿದೆ. ಅದರಲ್ಲಿ ಎರಡು ಮಿಲಿಯನ್ ವಿದೇಶಿಯರಿದ್ದಾರೆ. ಅವರಲ್ಲಿ ಭಾರತೀಯ ಉಪಖಂಡದ ಹೆಚ್ಚಿನ ಕೆಲಸಗಾರರಿದ್ದಾರೆ. ಅನಿಲ ಸಮೃದ್ಧ ಈ ಎಮಿರೇಟ್ ದೇಶ ಆಹಾರ ಪದಾರ್ಥಗಳನ್ನು ಆಮದಿನ ಮೇಲೆ ಅವಲಂಬಿತವಾಗಿದೆ. ಸೌದಿ ಮತ್ತು ಮಿತ್ರ ರಾಷ್ಟ್ರಗಳು ಸರಕು ಸಾಗಣೆ ಮತ್ತು ವಾಣಿಜ್ಯ ಪ್ರಯಾಣ ನಡೆಸಲು ಭೂ ಮತ್ತು ವಾಯು ಪ್ರದೇಶದ ಬಳಕೆಯನ್ನು ನಿಷೇದಿಸಿದ್ದಾರೆ. ಇದೀಗ ತನ್ನ ವಿಮಾನದ ಮೂಲಕ ಟರ್ಕಿ ಹಾಗೂ ಅದರ ಮಿತ್ರರು ಕತಾರಿಗೆ ಆಹಾರ ಸರಬರಾಜು ಮಾಡುತ್ತಿವೆ. ಇರಾನ್ ಕೂಡ ತನ್ನ ಅರಬ್ ಮಿತ್ರ ರಾಷ್ಟ್ರಗಳಿಗೆ ಅಗತ್ಯವಿರುವ ಆಹಾರ ಸರಕುಗಳನ್ನು ವಿಮಾನದ ಮೂಲಕ ತಲುಪಿಸುತ್ತಿದೆ.

ಟ್ರಂಪ್ಪಿಕೇಷನ್

ಇದೀಗ ಜರ್ಮನ ವಿದೇಶಾಂಗ ಸಚಿವ ಸಿಗ್ಮಾರ್ ಗೇಬ್ರಿಯಲ್, ಗಲ್ಫ್‌ನಲ್ಲಿನ ಈ ಹೊಸ ಬಿಕ್ಕಟ್ಟಿನಲ್ಲಿ ಅಮೇರಿಕಾದ ಅಧ್ಯಕ್ಷರ ಪಾತ್ರದ ಬಗ್ಗೆ ತೀವ್ರವಾಗಿ ಟೀಕೆ ಮಾಡಿದ್ದಾರೆ. ಈ ವಿವಾದದ ಉದ್ಭವಕ್ಕೆ "ಟ್ರಂಪ್ಪಿಕೇಷನ್" ಎಂಬುದಾಗಿ ಬಯಲುಗೊಳಿಸಿದ್ದಾರೆ. ಪ್ರಾದೇಶಿಕ ರಾಜಕೀಯದಲ್ಲಿ ಮೂಗು ತೂರಿಸಿ, ಅಪಾಯಕಾರಿ ಬೆಳವಣಿಗೆಗೆ ಕಾರಣರಾದ ಟ್ರಂಪ್‌ರ ನೀತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಜರ್ಮನಿಯೊಂದಿಗೆ, ಟರ್ಕಿ ಮತ್ತು ಇರಾನ್ ಕೂಡ ಕತಾರ್ ಗೆ ಮುಕ್ತ ಬೆಂಬಲ ವ್ಯಕ್ತಪಡಿಸಿದೆ. ಜರ್ಮನಿ ಮತ್ತು ಟರ್ಕಿ ನ್ಯಾಟೋ ನ ಸದಸ್ಯ ರಾಷ್ಟ್ರಗಳಾಗಿವೆ ಎಂಬುದನ್ನೂ ಇಲ್ಲಿ ಗಮನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕತಾರ್ ವಿರುದ್ಧ ಯಾವುದೇ ಮಿಲಿಟರಿ ಪ್ರಯೋಗ ಗಲ್ಫ ಮೈತ್ರಿ ಕೂಟದಲ್ಲಿ ಮಾತ್ರವಲ್ಲದೆ ಪಶ್ಚಿಮ ಮಿಲಿಟರಿ ಮೈತ್ರಿಗಳ ಮೇಲೆಯೂ ಗಂಭೀರವಾಗಿ ಛಿದ್ರಗಳನ್ನು ಉಂಟಾಗುವ ಸಂಭವವಿದೆ. ಟರ್ಕಿಯು ಕೂಡ ಒಂದು ಸಣ್ಣ ಮಿಲಿಟರಿ ನೆಲೆಯನ್ನೂ ಕತಾರ್‌ನಲ್ಲಿ ಹೊಂದಿದೆ. ಎಮಿರೇಟ್ಸ್ (ಯು.ಎ.ಇ.) ಹೆಚ್ಚುವರಿ ಸೈನಾಪಡೆಗಳನ್ನು ಕತಾರ್‌ಗೆ ಕಳುಹಿಸಲು ನಿರಾಕರಿಸಿದೆ.

ಸೌದಿ ಅರೇಬಿಯಾಕ್ಕೆ ಮುಕ್ತವಾಗಿ ಬೆಂಬಲ ಸೂಚಿಸುವ ಏಕೈಕ ಪ್ರಮುಖ ದೇಶ ಈಜಿಪ್ಟ್. ಅವರಿಗೆ ಕತಾರ್ ಮೇಲೆ ಕೋಪಕ್ಕೆ ಕಾರಣ 'ಮುಸ್ಲಿಂ ಬ್ರದರ್ ಹುಡ್' ಹಾಗೂ ಆಲ್–ಜಜೀರಾ ವಾಹಿನಿಗಳಿಗೆ ಕತಾರ್ ನ ಬೆಂಬಲ.

ಆದರೆ ಜಿಸಿಸಿ ಯ ಈ ಎಲ್ಲಾ ರಾಷ್ಟ್ರಗಳು ಲಿಬಿಯಾದ ಭಯೋತ್ಪಾದಕ ಗುಂಪುಗಳಿಗೆ ಬೆಂಬಲ ನೀಡಿದ್ದಾರೆ. ಇದು ಸಿರಿಯಾ ಪ್ರಕರಣ–ಕ್ಕೂ ಅನ್ವಯಿಸುತ್ತದೆ. ಈ ಪ್ರದೇಶದಲ್ಲಿ ಇದೀಗ ಸೌದಿಯವರಿಗೆ ಸವಾಲು ಒಡ್ಡುವ ಏಕೈಕ ರಾಷ್ಟ್ರವಾಗಿ ಕತಾರ್ ನಿಂತಿದೆ. ಯು.ಎ.ಇ.ಯು, ಸಿರಿಯಾ, ಲಿಬಿಯಾ ಮತ್ತು ಇತರೆ ಪ್ರದೇಶಗಳಲ್ಲಿ ಸೌದಿ ಅರೇಬಿಯಾದ ಬಲವಾದ ಮಿತ್ರದೇಶ ಆಗಿದೆ. ಇದು ಯೆಮೆನ್, ಲಿಬಿಯಾ ಮತ್ತು ಆಫ್ರಿಕಾದ ಕೆಲವು ದೇಶಗಳಲ್ಲಿ ತನ್ನ ಪ್ರಭಾವ ರೂಪಿಸಲು ಪ್ರಯತ್ನಿಸುತ್ತಿದೆ. ಆದ ಕಾರಣ ತನ್ನದೇ ಆದ ಅಜೆಂಡಾವನ್ನು ಯು.ಎ.ಇ. ಹೊಂದಿದೆ. ಈ ಹಿನ್ನೆಲೆಯಲ್ಲಿ ಕತಾರ್ ನಿಂದ ಎಮಿರೇಟ್ಸ್ ಪ್ರತ್ಯೇಕಿಸುವ ಸೌದಿ ಅರೇಬಿಯಾದ ಬೇಡಿಕೆಗೆ ಬೆಂಬಲವಾಗಿ ನಿಂತಿದೆ.

ಸೌದಿಯಿಂದ–ಕತಾರ್ ಆಡಳಿತ ಪ್ರತೇಕಿಸಲು ಕೋರಿ–ಕೆಗೆ ಟ್ರಂಪ್ ಬೆಂಬಲ

ಸೌದಿ ಮತ್ತು ಎಮಿರೇಟ್ಸ್ (ಯು.ಎ.ಇ.) ಇಬ್ಬರೂ ಕತಾರ್ ಸರಕಾರ ಬದಲಾವಣೆಯ ವಿಚಾರದಲ್ಲಿ ಒಂದಾಗಿದ್ದಾರೆ. ರಾಜವಂಶದ ವಂಶಾವಳಿಯಿಂದ ಪ್ರಸ್ತುತ ಆಡಳಿತವನ್ನು ಬದಲಿಸಲು ಯಾರನ್ನಾದಾರೂ ಹುಡುಕುತ್ತಿರುವುದು ಸ್ವಷ್ಟವಾಗಿ ಕಂಡುಬರುತ್ತಿದೆ. ಇಂಥಹ ಆಂತರಿಕ ಬದಲಾವಣೆ ದಂಗೆಗಳು 1996 ರಲ್ಲಿ ಮಾಡಲ್ಪಟ್ಟಿತ್ತು. ಕತಾರೀಸ್ ವಿದೇಶಾಂಗ ಸಚಿವ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ ರಹಮಾನ್ ರವರು "ನಮ್ಮ ದೇಶವೂ ಎಂದಿಗೂ ಶರಣಾಗುವುದಿಲ್ಲ" ಎಂದು ಪ್ರತಿಪಾದಿಸಿದ್ದಾರೆ. ತಮ್ಮ ಪರವಾಗಿ ಬೆಂಬಲವನ್ನು ರಷ್ಯಾ ಮತ್ತು ಜರ್ಮನಿಯಂಥ ದೇಶಗಳೂ ಇವೆ ಎಂದಿದ್ದಾರೆ.

ಅರಭ್ ಜನರಲ್ಲಿ ಗಲ್ಫ್ ನ ಈ ಬಿಕ್ಕಟ್ಟಿನ್ ಇತ್ತೀಚಿನ ಬೆಳವಣಿಗೆಗಳು ಯಾವುದೇ ಸಹಾನುಭೂತಿ ಮೂಡಿಸಿಲ್ಲ. ಈ ಬಿಕ್ಕಟ್ಟಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಎಲ್ಲಾ ದೇಶಗಳು ಸಿರಿಯಾ, ಇರಾಕ್, ಮತ್ತು ಯೆಮೆನ್ ನಲ್ಲಿನ ಗಂಭೀರವಾದ ಮಾನವೀ ದುರಂತಕ್ಕೆ ಪರಿಸ್ಥಿತಿಗೆ ಭಾರೀ ಪ್ರಮಾಣದಲ್ಲಿ ಜವಾಬ್ಧಾರರಾಗಿದ್ದಾರೆ. ಯೆಮೆನ್ ಮೇಲೆ ನಡೆಸಿದ ಸೌದಿ ಬಾಂಬ್ ದಾಳಿ ಮತ್ತು ದಿಗ್ಭಂದನವು ಇಂದು ವಿಶ್ವವು ಎದುರಿಸುತ್ತಿರುವ ಕೆಟ್ಟ ಮಾನವೀಯ ಬಿಕ್ಕಟ್ಟಿಗೆ ಕಾರಣವಾಗಿದೆ. ಸಿರಿಯಾ ಮತ್ತು ಲಿಬಿಯಾಗಳಿಗೆ – ಶಸ್ತ್ರಾಸ್ತ್ರ ಮತ್ತು ಹಣಕಾಸನ್ನು ಉಗ್ರವಾದಿಗಳ ಗುಂಪುಗಳಿಗೆ ಒದಗಿಸುವಲ್ಲಿ ಕತಾರ್ ಮುಂಚೂಣಿಯಲ್ಲಿತ್ತು.

ಇಸ್ರೇಲ್‌ಗೆ ಮೊದ–ಮೊದಲು ಕತಾರ್ ಸ್ನೇಹ ದಿಂದ ಇತ್ತು. ಇದೀಗ ಇಸ್ರೇಲಿ ತಂತ್ರಗಳಿಗೆ ಗು–ರಿಯಾಗಿದೆ. ಪ್ಯಾಲೇಸ್ಟೇನಿಯನ್ ಭಯೋತ್ಪಾದನೆಗೆ ಬೆಂಬಲಿಸಿದ್ದಕ್ಕಾಗಿ ಅಮೇರಿಕಾದ ದಿಗ್ಭಂದನದ ಹೇರಿಕೆಯನ್ನು ಎದುರಿಸುತ್ತಿದೆ. ಇಸ್ರೇಲಿ ಗುಂಪುಗಳು ಈಗ ಸೌದಿ ಅರೇಬಿಯಾ ಮತ್ತು ಯುಎಇಗಳ ಪರ ಬಹಿರಂಗವಾಗಿಯೇ ಅಭಿಯಾನ ಆರಂಭಿಸಿದೆ.

ಈ ತ್ರಿಪಕ್ಷಿಯ ಒಕ್ಕೂಟದ ಕಾರ್ಯತಂತ್ರಗಳು ಕತಾರ್ ವಿರುದ್ಧ ಯಶಸ್ವಿಯಾಗುವುದೇ? ಬಿಕ್ಕಟ್ಟಿನಿಂದ ಕತಾರ್ ಹೊರ ಬರುವುದೇ? ಕಾದು ನೋಡಬೇಕಾಗಿದೆ.

●

JANASHAKTHI KANNADA VARA PATRIKE JULY 03-09 2017 Price : Rs. 10/- Date of Publication : 30 JUN 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283







ಹೈದರಾಬಾದ್

ದ್ವೇಷದ ವಿರುದ್ಧ ನಮ್ಮೆಲ್ಲರ ದನಿ- ನನ್ನ ಹೆಸರಲ್ಲಿ ಬೇಡ ಹೊಲಸು ಕೃತ್ಯಗಳು

ಕೊನೆಗೂ ದ್ವೇಷ ಹರಡುವವರ ವಿರುದ್ಧ ಪ್ರತಿಭಟನೆ ಮೊಳಗಲಾರಂಭಿಸಿದೆ



ಲಕ್ನೌ



ಮುಂಬೈ



ಅಲಹಬಾದ್



ಬೆಂಗಳೂರು



ಪಾಟ್ನ



ಕೊಲ್ಕತ

ಜೂನ್ 28 ರಂದು ರಾಜಧಾನಿ ದಿಲ್ಲಿ ಸೇರಿದಂತೆ ದೇಶದ 12 ಪ್ರಮುಖ ನಗರಗಳಲ್ಲಿ ಸಾಮಾನ್ಯ ನಾಗರಿಕರು ಗೋರಕ್ಷಣೆಯ ಹೆಸರಿನ ದುಷ್ಕೃತ್ಯಗಳ ವಿರುದ್ಧ ತಮ್ಮ ಮೌನ ಮುರಿದಿದ್ದಾರೆ. ದೇಶದ ಪ್ರಧಾನ ಮಂತ್ರಿಗಳೂ ತಮ್ಮ ದಿವ್ಯಮೌನವನ್ನು ಪರೋಕ್ಷವಾಗಿಯಾದರೂ ಮುರಿಯುವಂತೆ ಮಾಡಿದ್ದಾರೆ. ವಿದ್ಯಾರ್ಥಿಗಳು, ಶಿಕ್ಷಕರು, ಪತ್ರಕರ್ತರು, ರಾಜಕೀಯ ಕಾರ್ಯಕರ್ತರು ಮತ್ತು ಸಾಮಾನ್ಯ ನಾಗರಿಕರು 'ನನ್ನ ಹೆಸರಲ್ಲಿ ಬೇಡ' ಎಂದು ಈ ದುಷ್ಟತನದ ವಿರುದ್ಧ ದನಿಯೆತ್ತಿದ್ದಾರೆ.

ಜೂನ್ 22ರ ಸಂಜೆ ದಿಲ್ಲಿ ಮಹಾನಗರದ ವ್ಯಾಪ್ತಿಯಲ್ಲೇ 15 ವರ್ಷದ ಬಾಲಕ ಜುನೈದ್‌ನನ್ನು ಗೋಮಾಂಸ ತಿನ್ನುವವನೆಂದು ಒಂದು ಗುಂಪು ರೈಲ್ವೆ ಬೋಗಿಯಲ್ಲೇ ಬಡಿದು ಸಾಯಿಸಿ, ಅದನ್ನು ಹೆದರಿ ಮೌನವಾಗಿ ನೋಡುತ್ತಿದ್ದ ಸುಮಾರು 200 ಜನರ ಮುಂದೆಯೇ ರೈಲು ನಿಲ್ದಾಣಕ್ಕೆ ಎಸೆದರು ಎಂಬ ಭೀಕರ ಸುದ್ದಿ ಕೊನೆಗೂ ದೇಶದ ಪ್ರಜ್ಞೆಯನ್ನು ಬಡಿದೆಬ್ಬಿಸಿರುವಂತೆ ಕಾಣುತ್ತದೆ.

'ಸಿಟಿಝನ್' ವೆಬ್ ಪತ್ರಿಕೆ ಗಮನಿಸಿದಂತೆ ಈ ಮೌನವನ್ನು ಮೊದಲು ಮುರಿದದ್ದು ಸುಮಾರಾಗಿ ಕೂಡಲೇ ಸಿಪಿಐ(ಎಂ)ನ ಬೃಂದಾ ಕಾರಟ್ ಮತ್ತು ಸಂಗಾತಿಗಳು ಜುನೈದ್‌ನಂತಹ ಸಾವಿನಿಂದ ಹೇಗೋ ಪಾರಾಗಿ ಆಸ್ಪತ್ರೆಯಲ್ಲಿದ್ದ ಆತನ ಸೋದರರನ್ನು ಭೇಟಿಯಾಗಲು ಧಾವಿಸಿದಾಗ. ಮರುದಿನವೇ ಅವರ ನೇತೃತ್ವದ ಸಿಪಿಐ(ಎಂ)ನ ನಿಯೋಗ ಜುನೈದನ ಮನೆಗೆ ಹೋಗಿ ಬಂದು ಪತ್ರಿಕಾ ಹೇಳಿಕೆ ನೀಡಿತು(ಈ ಸಂಚಿಕೆಯ ಪುಟ 2 ನೋಡಿ)

ಇದರ ಬೆನ್ನಲ್ಲೇ ಫೇಸ್‌ಬುಕ್‌ನಲ್ಲಿ ಸುದ್ದಿ ಹರಿದಾಡಿತು. ಇಬ್ಬರು ವ್ಯಕ್ತಿಗಳು, ಒಬ್ಬ ಕಲಾವಿದೆ ಸಬಾ ದಿವಾನ್ ಮತ್ತು ಒಬ್ಬ ಕಾರ್ಯಕರ್ತೆ ರಾಹುಲ್ ರಾಯ್ ಜಂತರ್ ಮಂತರ್‌ನಲ್ಲಿ 'ನಾಟ್ ಇನ್ ಮೈ ನೇಮ್' 'ದ್ವೇಷದ ವಿರುದ್ಧ ನಮ್ಮೆಲ್ಲರ ದನಿ' ಎಂಬ ಹೆಸರಲ್ಲಿ ಮೌನ ಮುರಿಯಲು ಕರೆ ನೀಡಿದರು. ಈ ಕರೆ ದಿಲ್ಲಿಯ ಜನಗಳ ನಡುವೆ ಮಾತ್ರವಲ್ಲ ದೇಶಾದ್ಯಂತ ಹರಡಿತು.

ಜೂನ್ 28ರಂದು ದೇಶದ ಹನ್ನೆರಡು ನಗರಗಳಲ್ಲಿ ಸಾವಿರಾರು ಮಂದಿ ಸುರಿಯುತ್ತಿರುವ ಮಳೆಯನ್ನೂ ಲೆಕ್ಕಿಸದೆ ಬೀದಿಗಿಳಿದರು.

ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಜುನೈದ್‌ನ ಕುಟುಂಬದವರು ಮತ್ತು ಕೆಲವು ದಿನಗಳ ಹಿಂದೆ ರಾಜಸ್ತಾನದಲ್ಲಿ ಗೋರಕ್ಷಕರು ಬಡಿದು ಸಾಯಿಸಿದ ಹರ್ಯಾಣದ ರೈತ ಪಹ್ಲೂ ಖಾನ್ ಕುಟುಂಬದವರೂ ಭಾಗವಹಿಸಿದರು.

ಜುನೈದನ 22 ವರ್ಷಗಳ ಸೋದರ ಸಂಬಂಧಿ ಮಹಮ್ಮದ್ ಅಸರುದ್ದೀನ್ 'ಸ್ವರ್ಗದಲ್ಲಿರುವ ಜುನೈದನಿಂದ ತಾಯಿಗೆ' ಎಂಬ ಕವನ ಓದಿದರು.

ಬಡಿದು ಸಾಯಿಸುವ ಜನಜಂಗುಳಿ ತಂತ್ರ ಸಂಘ ಪರಿವಾರ ಅಂಗೀಕರಿಸಿರುವ ಹೊಸ ಕಾರ್ಯತಂತ್ರ. ಅಲ್ಪಸಂಖ್ಯಾತರು ಅಭಿಪ್ರಾಯ ತಿಳಿಸಲು, ಪ್ರತಿಭಟಿಸಲು ಆಗಬಾರದು, ಪ್ರತಿಯೊಬ್ಬರನ್ನೂ ಹೆದರಿಸಿಡಬೇಕು, ಜನ ಪ್ರತಿಭಟಿಸಲು ಹೆದರುವಂತಹ ವಾತಾವರಣ ಸೃಷ್ಟಿಸುವುದು ಅವರ ಕಾರ್ಯಕತಂತ್ರ ಎಂದು ಒಬ್ಬ ಪ್ರಾಧ್ಯಾಪಕರು ಹೇಳಿದರು.

"ಬಹಳಷ್ಟು ಜನ ಸರಕಾರ ಏನು ಮಾಡಬೇಕು, ಏನು ಮಾಡಬಾರದು ಎಂದು ಹೇಳುತ್ತಿದ್ದಾರೆ. ಆದರೆ ಸರಕಾರ ತಾನೇನು ಮಾಡಬೇಕೆಂದು ಯೋಜಿಸಿದೆಯೋ ಅದನ್ನೇ ಮಾಡುತ್ತಿದೆ. ಜನ ಅದರ ಅಜೆಂಡಾವನ್ನು ಅರಿಯಬೇಕಾಗಿದೆ' ಎಂದರು ಸುಭಾಷಿಣಿ ಅಲಿ.

ಜನ ಈ ಅಜೆಂಡಾವನ್ನು ಅರಿಯ ಲಾರಂಭಿಸಿದ್ದಾರೆಯೇ, ಜನರು ಬಾಯಿಮುಚ್ಚಿ ಕೊಂಡಿರುವಂತೆ ಮಾಡುವ ಕಾರ್ಯತಂತ್ರ ವಿಫಲವಾಗಲಾರಂಭಿಸಿದೆಯೇ, ಕಾದು ನೋಡಬೇಕು.

ಗೋವಿನ ಹೆಸರಲ್ಲಿ ಮೂರು ವರ್ಷಗಳಲ್ಲಿ 61 ಹಿಂಸಾಚಾರ, ಬಲಿಯಾದವರಲ್ಲಿ 86% ಮುಸ್ಲಿಮರು

ವ್ಯಂಗ್ಯ ಚಿತ್ರ: ಸತೀಶ್ ಆಚಾರ್ಯ



2010ರ ನಂತರ ಜೂನ್ 25, 2017ರ ವರೆಗೆ ಸುಮಾರು 8 ವರ್ಷಗಳಲ್ಲಿ ಗೋವಿನ ಹೆಸರಲ್ಲಿ 63 ಹಿಂಸಾತ್ಮಕ ಘಟನೆಗಳು ವರದಿಯಾಗಿವೆ. ಇದರಲ್ಲಿ 61 ಅಂದರೆ 97% ಮೋದಿಯವರ 'ಅಚ್ಛೇ ದಿನ್'ಗಳು ಆರಂಭವಾದ ಮೇಲೆ 3 ವರ್ಷಗಳಲ್ಲಿ ನಡೆದವುಗಳು. ಇವುಗಳಲ್ಲಿ 28 ಅಮಾಯಕ ಭಾರತೀಯರು ಬಲಿಯಾಗಿದ್ದಾರೆ. ಇವರಲ್ಲಿ 23 ಮಂದಿ ಅಂದರೆ 86% ಮುಸ್ಲಿಮರು. ಗಾಯಗೊಂಡಿರುವ ಭಾರತೀಯರ ಸಂಖ್ಯೆ 124. ನಿಜ ಇದು ಸರಕಾರೀ ಅಂಕಿ–ಅಂಶವಲ್ಲ. ಅವರಲ್ಲಿ ಇಂತಹ ಅಂಕಿ–ಅಂಶಗಳಿಲ್ಲ. ಇದು ಕಳೆದ ಹತ್ತು ವರ್ಷಗಳಲ್ಲಿ ಇಂಗ್ಲಿಷ್ ಮಾಧ್ಯಮಗಳಲ್ಲಿ ವರದಿಯಾದ ಘಟನೆಗಳನ್ನು ಕಲೆ ಹಾಕಿ 'ಇಂಡಿಯಾಸ್ಪೆಂಡ್'ನ ಓಜಸ್ವಿ ರಾವ್ ಮತ್ತು ಡೆಲ್ನಾ ಅಬ್ರಹಾಂ ಕಂಡ ಸಂಗತಿಗಳಲ್ಲಿ ಎರಡು.

ಇನ್ನಷ್ಟು ನೋಡಿ:

* ಭಾರತದ 29 ರಾಜ್ಯಗಳಲ್ಲಿ 19 ರಲ್ಲಿ ಇಂತಹ ಹಿಂಸಾಚಾರಗಳು ನಡೆದಿವೆ. ಅತಿ ಹೆಚ್ಚು ಉತ್ತರ ಪ್ರದೇಶದಲ್ಲಿ (10), ನಂತರದ ಸ್ಥಾನಗಳು ಹರ್ಯಾಣ (9), ಗುಜರಾತ್ (6), ಕರ್ನಾಟಕ (6), ಮಧ್ಯಪ್ರದೇಶ (4), ರಾಜಸ್ತಾನ (4) ಮತ್ತು ದಿಲ್ಲಿ (4). ಇವುಗಳಲ್ಲಿ ಕರ್ನಾಟಕ ಮತ್ತು ದಿಲ್ಲಿ ಬಿಟ್ಟು ಉಳಿದವೆಲ್ಲ ಬಿಜೆಪಿ ಆಳ್ವಿಕೆಯ ರಾಜ್ಯಗಳು. ಇವೆರಡು ಬಿಜೆಪಿ ಅಧಿಕಾರಕ್ಕೆ ಏನಕೇನ ಪ್ರಕಾರೇಣ ಬರಲು ಬಲವಾದ ಹೊಂಚು ಹಾಕಿರುವ ರಾಜ್ಯಗಳು ಎಂಬುದು ಆಕಸ್ಮಿಕವಲ್ಲ.
* 79% ಉತ್ತರ ಭಾರತದಲ್ಲೇ ನಡೆದಿವೆ, 21% ದಕ್ಷಿಣ, ಪೂರ್ವ ಮತ್ತು ಈಶಾನ್ಯ ರಾಜ್ಯಗಳಲ್ಲಿ ನಡೆದಿವೆ. ಈ ಪ್ರದೇಶಗಳಲ್ಲಿ ನಡೆದ 13 ಹಿಂಸಾಚಾರಗಳಲ್ಲಿ ಕರ್ನಾಟಕದಲ್ಲಿಯೇ 6 ನಡೆದಿವೆ ಎಂಬದು ಗಮನಾರ್ಹ.
* ಇವುಗಳಲ್ಲಿ 33, ಅಂದರೆ 52% ಸುಳ್ಳು ಊಹಾಪೋಹಗಳಿಂದ ನಡೆಸಿದವುಗಳು.
* ಈ ಹಿಂಸಾಚಾರಗಳಲ್ಲಿ 32ರ (51%) ಗುರಿ ಮುಸ್ಲಿಮರು, 5 ಹಲ್ಲೆಗಳ ಗುರಿ ದಲಿತರು(8%), 3ರಲ್ಲಿ(5%) ಸಿಖ್ಖರು ಇರಬಹದು(ಆದರೆ ಇದು ಸ್ಪಷ್ಟವಾಗಿಲ್ಲ), ಒಂದು ಕ್ರೈಸ್ತರ ವಿರುದ್ಧ. 13 ಘಟನೆಗಳಲ್ಲಿ(21%) ಹಲ್ಲೆಯ ಗುರಿ ಯಾವ ಧರ್ಮದವರೆಂದು ವರದಿಯಾಗಿಲ್ಲ.
* ಇವುಗಳಲ್ಲಿ 3 ಕೇಸುಗಳಲ್ಲಿ ಯಾರನ್ನೇ ಆಗಲಿ ಬಂಧಿಸಿದ ವರದಿಗಳಿಲ್ಲ, 13 ಕೇಸುಗಳಲ್ಲಿ ಹಲ್ಲೆಗೆ ಗುರಿಯಾದವರ ಮೇಲೆಯೇ ಕೇಸು ಹಾಕಲಾಗಿದೆ.
* ಇವುಗಳಲ್ಲಿ 23ರಲ್ಲಿ ಹಲ್ಲೆಕೋರರಲ್ಲಿ ಹಿಂದೂ ಬಲಪಂಥೀಯ ಗುಂಪುಗಳು, ವಿಹೆಚ್‌ಪಿ, ಭಜರಂಗ ದಳ ಮತ್ತು ಗೋರಕ್ಷಕರು ಎಂದು ಸ್ಪಷ್ಟವಾಗಿದೆ.
* ಮೋದಿಯವರು ಪ್ರಧಾನಿಯಾದ ಮೇಲೆ ನಡೆದ 61 ಘಟನೆಗಳಲ್ಲಿ ಮೊದಲ 19 ತಿಂಗಳಲ್ಲಿ ನಡೆದದ್ದು 16, 2016ರಲ್ಲಿ 25 ಮತ್ತು 2017ರಲ್ಲಿ ಜೂನ್ 25ರ ವರೆಗೆ ಇನ್ನೂ ಅರ್ಧ ವರ್ಷ ಕಳೆಯುವ ಮೊದಲೇ ಕಳೆದ ವರ್ಷದ 75% ದಷ್ಟು ಅಂದರೆ 20 ಆಗಲೇ ನಡೆದಿವೆ.

ಈ ವರದಿ ಬಂದ ಮೇಲೆ ಮತ್ತೊಂದು ದಾಳಿ ಬಿಜೆಪಿಯ ಆಳ್ವಿಕೆಯ ಝಾರ್ಖಂಡ್‌ನಿಂದ ಜೂನ್ 27ರಂದು ವರದಿಯಾಗಿದೆ. ಹೈನುಗಾರಿಕೆಯಲ್ಲಿ ತೊಡಗಿರುವ ಮುಸ್ಲಿಮ್ ಕುಟುಂಬವೊಂದರ ಮೇಲೆ ದಾಳಿ ನಡೆದು ಅವರ ಮನೆಯನ್ನು ಸುಟ್ಟು ಹಾಕಲಾಗಿದೆ.

ಪ್ರಧಾನಿಗಳ ಸ್ವಂತ ರಾಜ್ಯದ ಉನಾದಲ್ಲಿ ನಾಲ್ವರು ದಲಿತರ ಮೇಲೆ ಅಮಾನುಷ ದಾಳಿ ಜಗಜ್ಜಾಹೀರಾದ ಮೇಲೆ ಭುಗಿಲೆದ್ದ ಆಕ್ರೋಶದಿಂದಾಗಿ ಮಾನ್ಯ ಪ್ರಧಾನಿಗಳು ಬಾಯಿ ತೆರೆದು ಅವರು ಸಾಚಾ ಗೋರಕ್ಷಕರಲ್ಲ ಎಂದರು. ಆದರೆ ಉಳಿದಂತೆ ಅವರ ದಿವ್ಯ ಮೌನ ಕಿವಿ ಗಡಚಿಕ್ಕುವಂತೆ ಮುಂದುವರೆದಿದೆ.

ಜೂನ್ 28 ರ ದೇಶವ್ಯಾಪಿ ಪ್ರತಿಭಟನೆಯ ನಂತರ ಮತ್ತೆ ಸ್ವಲ್ಪ ಬಾಯಿ ತೆರೆದಿದ್ದಾರೆ. ಗೋಭಕ್ತಿಯ ಹೆಸರಲ್ಲಿ ಜನರನ್ನು ಸಾಯಿಸುವುದನ್ನು ಒಪ್ಪಲಾಗದು, ಯಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು ಎಂದು ಅವರು ಅಹಮದಾಬಾದಿನಲ್ಲಿ ಹೇಳಿದರು.

ಆದರೆ ಹಾಗೆ ಹೇಳಿದ ದಿನವೇ ಝಾರ್ಖಂಡದಲ್ಲಿ ಅಸ್ಗರ್ ಅನ್ಸಾರಿ ಎಂಬ ಡ್ರೈವರ್ ಗೋಮಾಂಸ ಸಾಗಿಸುತ್ತಿದ್ದಾನೆ ಎಂದು ಒಂದು ಗುಂಪು ಆತನನ್ನು ಬಡಿದು ಸಾಯಿಸಿದೆ. ಈ ಮೂಲಕ ಕಳೆದ ಮೂರು ವರ್ಷಗಳಲ್ಲಿ ದ್ವೇಷ ಪ್ರಚಾರಕ್ಕೆ ಬಲಿಯಾದವರ ಸಂಖ್ಯೆ 63 ಕ್ಕೆ ಏರಿದೆ.

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**